ಯೋಜನ ದೂರದವರೆಗೂ ಕಾಣಿಸುತ್ತವೆ. ಆ ಸ್ತಂಭಗಳ ಮೇಲೆ ನಾಲ್ಕು ದಿಕ್ಕುಗಳಲ್ಲೂ ಸಿದ್ಧರ ಪ್ರತಿಮೆಗಳು ಕಂಗೊಳಿಸುತ್ತಿವೆ. ಸ್ತಂಭಗಳಾದರೋ ಲಕ್ಷ್ಮೀದೇವಿಯ ಚೂಡಾರತ್ನದಂತೆ ತಮ್ಮ ಕಾಂತಿಯಿಂದ ಇಪ್ಪತ್ತು ಯೋಜನ ವಿಸ್ತಾರದ ಕ್ಷೇತ್ರವನ್ನು ಕಾಂತಿಮಯವಾಗಿಸುತ್ತವೆ. ಅವುಗಳ ನಾಲ್ಕು ದಿಕ್ಕುಗಳಲ್ಲೂ ಅರಳಿದ ಕಮಲಗಳಿಂದ ಕೂಡಿದ ನಾಲ್ಕು ಸರೋವರಗಳಿವೆ.

ಸರೋವರಗಳ ಮುಂದುಗಡೆ ಒಂದು ವಜ್ರಮಯವಾದ ಪ್ರಾಕಾರವಿದೆ. ಅದರ ಸುತ್ತ ಒಂದು ಕಂದಕವಿದೆ. ಅದರಲ್ಲಿ ಮಂಡಿ ಮಟ್ಟದಷ್ಟು ನೀರಿದೆ. ಅದರ ಮುಂದೆ ಬಳ್ಳಿಗಳಿಂದ ಶೋಭಿಸುವ ವನವೊಂದಿದೆ. ಅದರ ಮುಂದೆ ದೇದೀಪ್ಯಮಾನವಾದ ನಾಲ್ಕು ಗೋಪುರಗಳಿಂದ ಶೋಭಿಸುವ ಪ್ರಾಕಾರವಿದೆ. ಗೋಪುರಗಳಲ್ಲಿ ವ್ಯಂತರರು ದ್ವಾರಪಾಲಕರಾಗಿದ್ದಾರೆ. ತಮ್ಮ ಪ್ರಭಾವದಿಂದ ಅವರು ಅಯೋಗ್ಯರನ್ನು ದೂರತಳ್ಳುತ್ತಾರೆ. ಆ ಗೋಪುರಗಳ ಮುಂದೆ ವೀಥಿಕೆಗಳಲ್ಲಿ ಎರಡೂ ಕಡೆ ಎರಡೆರಡು ನಾಟ್ಯಶಾಲೆಗಳಿವೆ. ಅವುಗಳಲ್ಲಿ ಮೂವತ್ತೆರಡು ಸಂಖ್ಯೆಯಲ್ಲಿ ದೇವಕನ್ಯೆಯರು ನರ್ತನಮಾಡುತ್ತಾರೆ. ಅದಾದಮೇಲೆ ಆಮ್ರಾದಿ ವೃಕ್ಷಗಳಿಂದ ಶೋಭಿಸುವ ನಾಲ್ಕು ವನಗಳಿವೆ. ಅವುಗಳಲ್ಲಿ ವಿವಿಧ ಆಕೃತಿಯ ವಾಪಿಕೆಗಳಿವೆ. ವಾಪಿಕೆಗಳ ಮಧ್ಯದಲ್ಲಿ ಸಾಗುವ ಮಾರ್ಗದಲ್ಲಿ ಎರಡೂ ಕಡೆಗಳಲ್ಲಿ ನೃತ್ಯಶಾಲೆಗಳಿವೆ. ಅಲ್ಲಿ ಭವನವಾಸೀ ದೇವಾಂಗನೆಯರು ನೃತ್ಯಮಾಡುತ್ತಾರೆ. ನೃತ್ಯಶಾಲೆಗಳ ಮುಂದೆ ರತ್ನಮಯ ಗೋಪುರಗಳಿಂದ ಕೂಡಿದ ಮತ್ತೊಂದು ಪ್ರಾಕಾರವಿದೆ. ಇಲ್ಲಿ ಭವನವಾಸಿ ದೇವತೆಗಳ ಇಂದ್ರನು ದ್ವಾರಪಾಲಕನಾಗಿದ್ದಾನೆ. ತದನಂತರದಲ್ಲಿ ಅಂತರ್ವೇದಿಕೆಯಿದೆ. ಮಾರ್ಗಗಳಲ್ಲಿ ಒಂಬತ್ತೊಂಬತ್ತು ಸ್ತೂಪಗಳಿವೆ. ಅವುಗಳ ಮುಂದೆ ನಾನಾಬಗೆಯ ಸಭಾಗೃಹಗಳಿವೆ. ಅವುಗಳ ಮುಂದೆ ಮೂರನೆಯ ಸುತ್ತಿನ ಪ್ರಾಕಾರವೊಂದಿದೆ. ಅವುಗಳ ನಾಲ್ಕೂ ದಿಕ್ಕಿನ ದ್ವಾರಗಳಲ್ಲಿ ದರ್ಪಣಗಳಿವೆ. ಅವುಗಳಲ್ಲಿ ನೋಡಿದವರ ಪೂರ್ವಭವಗಳು ಗೋಚರಿಸುತ್ತವೆ. ಇಲ್ಲಿನ ಗೋಪುರಗಳಲ್ಲಿ 'ಜಯವಾಗಲಿ', 'ಕಲ್ಯಾಣವಾಗಲಿ' ಎಂದು ಘೋಷಿಸುವ ಕಲ್ಪವಾಸಿ ದೇವತೆಗಳು ದ್ವಾರಪಾಲಕರಾಗಿದ್ದಾರೆ. ಅಲ್ಲಿಂದ ಮುಂದೆ ವೇದಿಕೆಗಳಿಂದ ಬದ್ಧವಾದ ವೀಥಿಗಳ ಮಧ್ಯದಲ್ಲಿ ಕಲ್ಯಾಣಜಯವೆಂಬ ಅಂಗಳವಿದೆ. ಅಲ್ಲಿ ನಾಟಕಶಾಲೆಯಿದೆ. ಅಲ್ಲಿ ಲೋಕಪಾಲ ದೇವಾಂಗನೆಯರು ಯಾವಾಗಲೂ ನರ್ತಿಸುತ್ತಿರುತ್ತಾರೆ. ಅಲ್ಲಿಂದ ಮುಂದೆ ಸಿದ್ಧಾರ್ಥವೃಕ್ಷವಿದೆ, ಅದು ಸಿದ್ಧರ ಪ್ರತಿಮೆಗಳಿಂದ ಶೋಭಿಸುತ್ತಿದೆ. ಅವುಗಳ ಮುಂದೆ ದೇವಾಲಯವೊಂದಿದ್ದು, ಅಲ್ಲಿ ಹನ್ನೆರಡು ಸ್ತೂಪಗಳಿವೆ. ಅವುಗಳ ಮುಂದೆ ನಂದಾ, ಭದ್ರಾ, ಜಯಾ ಮತ್ತು ಪೂರ್ಣಾ ಎಂಬ ನಾಲ್ಕು ವಾಪಿಕೆಗಳಿವೆ. ಅವುಗಳಲ್ಲಿ ಸ್ನಾನಮಾಡುವ ಜೀವಗಳಿಗೆ ಪೂರ್ವಭವದ ಅರಿವಾಗುತ್ತದೆ. ಅವುಗಳ ನೀರಿನಲ್ಲಿ ನೋಡಿದವರಿಗೆ ಹಿಂದು ಮುಂದಿನ ಏಳು ಭವಗಳು ಕಾಣಿಸಿಕೊಳ್ಳುತ್ತವೆ. ವಾಪಿಕೆಗಳ ಮುಂದೆ ಒಂದು ಜಯಾಂಗಣವಿದೆ. ಅಲ್ಲಿ ದೇವ, ಅಸುರ ಹಾಗೂ ಮನುಷ್ಯರಿಂದ ಕೂಡಿದ ಭವನಗಳೂ ಮಂಟಪಗಳೂ ಮತ್ತು ಸುಖಕರವಾದ ನಿವಾಸಸ್ಥಾನಗಳೂ ಇವೆ. ಜಯಾಂಗಣದ ಮಧ್ಯದಲ್ಲಿ ದೇದೀಪ್ಯಮಾನವಾದ ಇಂದ್ರಧ್ವಜವಿದೆ.

ಅಲ್ಲಿಂದ ಮುಂದೆ ಸಾವಿರ ಕಂಬಗಳ ಮೇಲೆ ನಿಂತಿರುವ ಮಹೋದಯವೆಂಬ ಮಂಟಪವಿದೆ. ಅದು ಶ್ರುತದೇವತೆಯ ನೆಲೆಯಾಗಿದೆ. ಜಯಾಂಗಣದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಲೋಕಸ್ತೂಪಗಳಿವೆ. ಅವುಗಳ ಮೇಲೆ ಪತಾಕಾಪಂಕ್ತಿಗಳು ಹಾರಾಡುತ್ತಿವೆ. ಅಲ್ಲಿಂದ ಮುಂದೆ ಮಂದರಾಚಲದಂತೆ ದೇದೀಪ್ಯಮಾನವಾದ ಮಂದರವೆಂಬ ಸ್ತೂಪವಿದೆ. ಹಾಗೆಯೇ ಕಲ್ಪವಾಸವೆಂಬ ಸ್ತೂಪವೂ ಇದೆ. ಅವುಗಳ ಮುಂದೆ ಗ್ರೈವೇಯಕಗಳ ಆಕಾರವಿರುವ ಗ್ರೈವೇಯಕ ಸ್ತೂಪಗಳಿವೆ. ಅವುಗಳ ಮುಂದೆ ಅನುದಿಶವೆಂಬ ಒಂಬತ್ತು ಸ್ತೂಪಗಳು ರಾರಾಜಿಸುತ್ತಿವೆ. ಅದಕ್ಕೂ ಮುಂದೆ ಸರ್ವಾರ್ಥಸಿದ್ಧಿಯೆಂಬ ಸ್ತೂಪಗಳಿವೆ. ಅವುಗಳ ಮುಂದೆ ಸ್ಫಟಿಕದಂತೆ ನಿರ್ಮಲವಾದ ಸಿದ್ಧಸ್ತೂಪಗಳು ಕಂಗೊಳಿಸುತ್ತಿವೆ. ಹಾಗೆಯೇ ಮುಂದುಮುಂದಕ್ಕೆ ಭವ್ಯಕೂಟ, ಪ್ರಮೋಹ, ಪ್ರಬೋಧ ಎಂಬ ಸ್ತೂಪಗಳಿವೆ.

ಅಲ್ಲಿಂದ ಮುಂದೆ ಒಂದು ಪ್ರಾಕಾರವಿದೆ. ಅದು ಒಂದು ಕೋಶ ಅಗಲ, ನಾಲ್ಕು ಧನುಸ್ಸು ಎತ್ತರವಿದೆ. ಅದರ ಪರಿಧಿಯಲ್ಲಿ ಹದಿನೇಳು ಕರ್ಣಿಕೆಗಳಿವೆ. ಅಲ್ಲಿ ಗಣಧರದೇವರು ಇಚ್ಛಿಸಿದೊಡನೆಯೇ ಒಂದು ದಿವ್ಯಪಟ್ಟಣದ ನಿರ್ಮಾಣವಾಗುತ್ತದೆ. ಆ ಪಟ್ಟಣವು ಕಲ್ಪವನ್ನು ಬಲ್ಲ ಮಾನವರಿಂದ ತ್ರಿಲೋಕಸಾರ, ಶ್ರೀಕಾಂತ, ಶ್ರೀಪ್ರಭ, ಶಿವಮಂದಿರ, ತ್ರಿಲೋಕೀಶ್ರೀ, ಲೋಕಕಾಂತಿಶ್ರೀ, ಶ್ರೀಪುರ, ತ್ರಿದಶಪ್ರಿಯ, ಪುರಾಣ, ಪುಣ್ಯಸಂಚಯ, ಋಷೀವತೀ, ಯಮವತೀ, ರತ್ನವತೀ, ಅಜರಾಮರಾ, ಪ್ರತಿಷ್ಠಾ ಬ್ರಹ್ಮನಿಷ್ಠೋರ್ವೀ, ಕೇತುಮಾಲಿನೀ, ಅರಿಂದಮ, ಮನೋರಮ, ತಮಃಪಾರ, ಅರತ್ನಿ, ರತ್ನಸಂಚಯ, ಅಯೋಧ್ಯಾ, ಅಮೃತಧಾನೀ, ಬ್ರಹ್ಮಪುರ, ಜಾತಾಹ್ವಯ, ಉದಾತ್ತಾರ್ಥ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತದೆ. ಭಗವಂತನ ಪ್ರಭಾವದಿಂದ ಉತ್ಪನ್ನವಾಗುವ ಆ ನಗರವು ಮೂರು ಲೋಕಗಳಲ್ಲೂ ಇರುವ ಶ್ರೇಷ್ಠವಸ್ತುಗಳಿಂದ ಕೂಡಿದುದಾಗಿದೆ. ಅದು ಇಪ್ಪತ್ತಾರು ಬಗೆಯ ಸುವರ್ಣ ಹಾಗೂ ಮಣಿಗಳಿಂದ ಕೂಡಿದುದಾಗಿದೆ.

ಅಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ದೇದೀಪ್ಯಮಾನವಾದ ಮೂರು ಪೀಠಗಳಿವೆ. ಮೊದಲ ಪೀಠದ ಮೇಲೆ ನಾಲ್ಕುಸಾವಿರ ಧರ್ಮಚಕ್ರಗಳಿವೆ. ಎರಡನೆಯ ಮಹಾಪೀಠದ ಮೇಲೆ ಮಯೂರ ಮತ್ತು ಹಂಸಗಳ ಧ್ವಜಗಳಿಂದ ಕೂಡಿದ ಎಂಟು ಬಗೆಯ ಮಹಾಧ್ವಜಗಳು ದಿಕ್ಕುಗಳನ್ನು ಬೆಳಗುತ್ತಿವೆ. ಮೂರನೆಯ ಪೀಠದ ಮೇಲೆ ಅನೇಕ ಮಂಗಳ ದ್ರವ್ಯಗಳಿಂದ ಕೂಡಿದ ಗಂಧಕುಟಿ ಎಂಬ ಪ್ರಾಸಾದವಿದೆ. ಅದರಲ್ಲಿ ಭಗವಂತನ ಸಿಂಹಾಸನವಿದೆ. ಅದರ ಮೇಲೆ ವಿರಾಜಮಾನನಾಗಿರುವ ಜಿನೇಂದ್ರದೇವನನ್ನು ಸುರಾಸುರರೆಲ್ಲರೂ "ಹೇ ಮಹಾದೇವ, ನಿನಗೆ ಜಯವಾಗಲಿ ; ಹೇ ಮಹೇಶ್ವರ, ನೀನು ಜಯಶಾಲಿಯಾಗು ; ಹೇ ಮಹಾಬಾಹು, ನೀನು ವಿಜಯಿಯಾಗು ; ಹೇ ವಿಶಾಲನೇತ್ರ, ನಿನಗೆ ಜಯವಿರಲಿ" ಎಂದು ಮುಂತಾಗಿ ಕೊಂಡಾಡುತ್ತಾರೆ.

ಇಂಥ ಸಮವಸರಣ ಭೂಮಿಯಲ್ಲಿಯ ಗಂಧಕುಟಿಯೆಂಬ ಪ್ರಾಸಾದದಲ್ಲಿ ಸಿಂಹಾ

ಸನದಲ್ಲಿ ವಿರಾಜಮಾನನಾದ ನೇಮಿನಾಥನನ್ನು ಸುರಾಸುರರೂ ನರರೂ ಮಕುಟತಟಘಟಿತ ಕರಸಂಪುಟರಾಗಿ ಸ್ತುತಿಸುತ್ತಾರೆ.

ಹೀಗೆ ಕೋಟ್ಯಂತರ ಪರಿಯಲ್ಲಿ ಸ್ತುತಿಸಿದ ಮೇಲೆ ವರದತ್ತನು ತತ್ಕಾಲದಲ್ಲೇ ದೀಕ್ಷೆಗೊಂಡನು ; ಪ್ರಥಮ ಗಣಧರನಾದನು. ಆಗಲೇ ೬ ಸಹಸ್ರ ರಾಣಿಯರೊಂದಿಗೆ ದೀಕ್ಷೆಗೊಂಡು ರಾಜೀಮತಿಯು ಆರ್ಯಿಕಾಪ್ರಧಾನೆಯಾದಳು. ಮುನಿಸಮೂಹವನ್ನು ಮೊದಲುಗೊಂಡು ದ್ವಾದಶಗಣಗಳೂ ನೇಮಿನಾಥನಿಗೆ ಪ್ರಣಾಮಮಾಡಿ ಯಥಾಸ್ಥಾನದಲ್ಲಿದ್ದುಕೊಂಡು ಅವನನ್ನು ಉಪಾಸಿಸುತ್ತಿದ್ದರು. ಮಾರ್ಗದ ನಾಲ್ಕು ದಿಕ್ಕುಗಳನ್ನೂ ಸುತ್ತುವರಿದು ದ್ವಾದಶಸಭೆ ವಿರಾಜಿಸಿತ್ತು. ನೇಮಿನಾಥನ ಮುಂದೆ ವರದತ್ತ ಆದಿಯಾಗಿ ಅನೇಕ ಮುನಿಗಳಿದ್ದರು. ಅವರು ಧರ್ಮೇಶ್ವರನ ಅಂಶಸ್ವರೂಪರು. ಆಮೇಲೆ ಕಲ್ಪವಾಸಿನಿಯರು, ಆರ್ಯಿಕೆಯರು, ಜ್ಯೋತಿರ್ದೇವ ವನಿತೆಯರು, ವ್ಯಂತರದೇವರ ಸ್ತ್ರೀಯರು, ಭವನವಾಸಿದೇವರ ಸ್ತ್ರೀಯರು, ಭವನವಾಸಿದೇವರು, ವ್ಯಂತರರು, ಜ್ಯೋತಿಷಿದೇವರು, ಇಂದ್ರಾದಿ ಕಲ್ಪವಾಸಿದೇವರು, ಚಕ್ರವರ್ತ್ಯಾದಿ ಅರಸರು, ಸಿಂಹ ಗಜ ಮುಂತಾದ ತಿರ್ಯಗ್ಜೀವಿಗಳು—ಇವರು ವಿರಾಜಿಸಿದ್ದರು. ನೇಮಿನಾಥನು ತನ್ನ ಸಿಂಹಾಸನದಲ್ಲಿ ಪರಮೇಷ್ಠಿಯಂತೆ ಕುಳಿತು ಅಷ್ಟಮಹಾಪ್ರಾತಿಹಾರ್ಯಗಳಿಂದ ದಿವ್ಯವಾಗಿ ಶೋಭಿಸುತ್ತಿದ್ದನು. ಹೀಗಿದ್ದಾಗ ದೇವತೆಗಳು ಘೋಷಣೆಯನ್ನು ಸಾರುತ್ತ ಸಮಸ್ತ ಜೀವಿಗಳನ್ನೂ ಸಭೆಗೆ ಜಿನೇಂದ್ರವಂದನಾರ್ಥವಾಗಿ ಕೂಗಿ ಕೂಗಿ ಕರೆಯುತ್ತಿದ್ದರು. ಕೂಡಲೇ ಮನುಷ್ಯರೂ ದೇವರೂ ಅಸುರರೂ ವೈಭವಯುತರಾಗಿ ಸಮವಸರಣಕ್ಕೆ ಬರತೊಡಗಿದರು. ಅದು ದೃಷ್ಟಿಗೋಚರವಾಗುತ್ತಲೂ ಮಾನಾಂಗಣದಲ್ಲಿ ನಿಂತು ಎಲ್ಲಕ್ಕೂ ಮೊದಲು ಕೈಮುಗಿದುಕೊಂಡು ವಾಹನಗಳಿಂದ ಕೆಳಗಿಳಿಯುತ್ತಿದ್ದರು. ಅವನ್ನೆಲ್ಲ ಹೊರಗೇ ಬಿಟ್ಟು ವಿಶಿಷ್ಟರಾಜ್ಯಚಿಹ್ನೆಗಳಿಂದ ಕೂಡಿ ಮಾನಪೀಠವನ್ನು ಬಲಗೊಂಡು ಮಾನಸ್ತಂಭಕ್ಕೆ ನಮಸ್ಕರಿಸಿ ಒಳಗೆ ಬರುತ್ತಿದ್ದರು. ಪಾಪಿಗಳೂ ಪಾಷಂಡಿಗಳೂ ಮೊದಲಾದವರು ಹೊರಗೇ ಪ್ರದಕ್ಷಿಣೆ ಮಾಡುವರು. ಸುರೇಂದ್ರಾದಿ ಉತ್ತಮರು ಛತ್ರ ಚಾಮರಾದಿಗಳನ್ನು ಜಯಾಂಗಣದಲ್ಲೇ ಬಿಟ್ಟು, ಆಪ್ತಜನರೊಂದಿಗೆ ಕೈಮುಗಿದುಕೊಂಡು ಒಳಗೆ ಬರುತ್ತಾರೆ. ಚಕ್ರಪೀಠವನ್ನೇರಿ ಜಿನೇಂದ್ರನನ್ನು ವಂದಿಸಿ ಮೂರುಬಾರಿ ಬಲಗೊಂಡು, ಪೂಜಿಸಿ, ತಂತಮ್ಮ ಹೆಸರು ಹೇಳಿಕೊಂಡು ನಮಸ್ಕರಿಸುತ್ತಾರೆ. ಆಮೇಲೆ ಆನಂದಪರವಶರಾಗಿ ಹಿಂದಿರುಗಿ ಸೋಪಾನಗಳನ್ನಿಳಿದು ಬಂದು ಯಥೋಚಿತ ಸ್ಥಾನಗಳಲ್ಲಿ ಕುಳ್ಳಿರುತ್ತಾರೆ. ಸಮವಸರಣಕ್ಕೆ ಎಷ್ಟು ಜನ ಬಂದರೂ ಅದನ್ನು ತುಂಬುವುದು ಶಕ್ಯವಿಲ್ಲ; ಬರುವವರು ಹೋಗುವವರು ಸಂದರ್ಶಿಸುವವರು ಮುಂತಾದ್ದು ಸದಾ ನಡೆಯುತ್ತಿರುತ್ತದೆ. ಮಂಟಪದಲ್ಲಿ ಭಗವಾನನ ಪ್ರಭಾವದಿಂದಾಗಿ ರಾಗದ್ವೇಷ ಮುಂತಾಗಿ ಯಾವುದೇ ಅಮಂಗಲಗಳೂ ತಲೆದೋರುವುದಿಲ್ಲ. ಬಾಹ್ಯವಿಭೂತಿಯ ಅದ್ವಿತೀಯ ಸ್ಥಾನವಾದ ಆ ಸಮವಸರಣಭೂಮಿಯಲ್ಲಿ ಪವಿತ್ರಾತ್ಮನಾದ ಭಗವಾನನು ವಿರಾಜಮಾನನಾಗಿರುವಾಗ ದ್ವಾದಶಸಭೆಯ ಸಭಾಸದರೂ ತಮ್ಮ ತೃಷಿತನೇತ್ರಗಳಿಂದ ಅವನ ಅಮೃತರೂಪ ಸೌಂದರ್ಯಸಾಗರವನ್ನು ಪಾನಮಾಡುತ್ತಿರುತ್ತಾರೆ.

೫೮. ಶ್ರೀನೇಮಿನಾಥಧರ್ಮೋಪದೇಶ ವರ್ಣನ

ನಿತ್ಯೋತ್ಸವ ಮತ್ತು ಅನಂತ ಕಲ್ಯಾಣಗಳಿಗೆ ಆಶ್ರಯವಾದ ಸಮವಸರಣದಲ್ಲಿ ಧರ್ಮಶ್ರವಣಾಕಾಂಕ್ಷಿಗಳಾದ ಜೀವರು ಕೈಮುಗಿದುಕೊಂಡು ಕುಳಿತಿರಬೇಕಾದರೆ, ವರದತ್ತ ಗಣಧರನು ನೇಮಿಜಿನೇಂದ್ರನಿಗೆ ನಮಸ್ಕರಿಸಿ, ಸಮಸ್ತ ಭವ್ಯಜೀವರ ಹಿತವನ್ನು ಪ್ರಶ್ನಿಸಿದನು. ಆಗ ನೇಮಿಜಿನನು ದಿವ್ಯಧ್ವನಿಯಲ್ಲಿ ಸಕಲಭವ್ಯರಿಗೂ ಹಿತಾಸ್ಪದವಾದ ಧರ್ಮಸ್ವರೂಪವನ್ನು ಸವಿಸ್ತರವಾಗಿ ಶ್ರುತಪಡಿಸಿದನು :

"ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮತ್ತು ಮೋಕ್ಷ ಎಂಬುವು ಏಳು ತತ್ವಗಳಾಗಿವೆ. ಉಪಯೋಗವು ಜೀವದ ಲಕ್ಷಣ ಮತ್ತು ಅದು ಎಂಟು ಬಗೆಯದಾಗಿದೆ. ಚೈತನ್ಯವು ಶರೀರದೊಂದಿಗೆ ಅನೇಕಾಂತವಾಗಿದೆ. ಜೀವವು ಈ ಸಂಸಾರದಲ್ಲಿ ಅನಾದಿನಿಧನವಾದುದಾಗಿದೆ. ಅದು ದ್ರವ್ಯರೂಪಿಯೂ ಜ್ಞಾತೃವೂ ದ್ರಷ್ಟೃವೂ ಕರ್ತೃವೂ ಭೋಕ್ತೃವೂ ಕರ್ಮವಿನಾಶಿಯೂ ಉತ್ಪಾದವ್ಯಯರೂಪಿಯೂ ಗುಣಸಹಿತವೂ ಅಸಂಖ್ಯಾತ ಪ್ರದೇಶಿಯೂ ಸಂಕೋಚ ವಿಸ್ತಾರರೂಪಿಯೂ ವರ್ಣಾದಿ ವಿಂಶತಿಗುಣಗಳಿಂದ ಕೂಡಿರುವಂಥದೂ ಆಗಿದೆ. ಅದು ಜೀವಗತಿ, ಇಂದ್ರಿಯ, ಷಟ್‌ಕಾಯ, ಯೋಗ, ವೇದ, ಕಷಾಯ, ಜ್ಞಾನ, ಸಂಯಮ, ಸಮ್ಯಕ್ತ್ವ, ಲೇಶ್ಯಾ, ದರ್ಶನ, ಸಂಜ್ಞಿತ್ವ, ಭವ್ಯತ್ವ ಮತ್ತು ಆಹಾರ ಎಂಬೀ ಹದಿನಾಲ್ಕು ಮಾರ್ಗಣಗಳ ಮೂಲಕ ಹುಡುಕಲ್ಪಡುತ್ತದೆ. ವಸ್ತುವಿಗೆ ಅನೇಕ ಸ್ವರೂಪಗಳಿದ್ದು, ಅವುಗಳಲ್ಲಿ ಯಾವುದಾದರೂ ಒಂದು ನಿಶ್ಚಿತ ಸ್ವರೂಪವನ್ನು ಗ್ರಹಿಸುವ ಜ್ಞಾನಕ್ಕೆ ನಯವೆಂದು ಹೆಸರು. ದ್ರವ್ಯಾರ್ಥಿಕ ಮತ್ತು ಪರ್ಯಾಯಾರ್ಥಿಕದ ಭೇದದಿಂದ ಅದರಲ್ಲಿ ಎರಡು ಬಗೆಗಳಿವೆ. ಅವುಗಳಲ್ಲಿ ದ್ರವ್ಯಾರ್ಥಿಕ ನಯವು ಯಥಾರ್ಥವೂ ಪರ್ಯಾಯಾರ್ಥಿಕ ನಯವು ಅಯಥಾರ್ಥವೂ ಆಗಿದೆ.

ಧರ್ಮ, ಅಧರ್ಮ, ಆಕಾಶ, ಪುದ್ಗಲ ಮತ್ತು ಕಾಲ ಎಂಬಿವೈದು ಅಜೀವತತ್ವಗಳಾಗಿವೆ. ಅವುಗಳಲ್ಲಿ ಧರ್ಮ ಮತ್ತು ಅಧರ್ಮ ದ್ರವ್ಯಗಳು ಕ್ರಮವಾಗಿ ಗತಿ ಮತ್ತು ಸ್ಥಿತಿಯ ನಿಮಿತ್ತಗಳಾಗಿವೆ. ಆಕಾಶವು, ಜೀವ ಮತ್ತು ಅಜೀವಗಳೆಂಬ ಎರಡೂ ದ್ರವ್ಯಗಳ ಅವಗಾಹದ ನಿಮಿತ್ತವಾಗಿದೆ. ಪುದ್ಗಲದ್ರವ್ಯವು ಪೂರಣ ಗಲನ ಕ್ರಿಯೆಯನ್ನು ಮಾಡುತ್ತಾ ವರ್ಣಾದಿ ಅನೇಕ ಗುಣಗಳಿಂದ ಕೂಡಿದೆ. ಅದರಲ್ಲಿ ಸ್ಕಂಧ ಮತ್ತು ಪರಮಾಣು ಎಂಬೆರಡು ಭೇದಗಳಿವೆ. ಹಲವು ಪರಮಾಣುಗಳ ಸಂಯೋಗದಿಂದ ಸ್ಕಂಧವು ರೂಪುಗೊಳ್ಳುತ್ತದೆ. ವರ್ತನಾಲಕ್ಷಣದಿಂದ ಕೂಡಿದುದೇ ಕಾಲದ್ರವ್ಯವೆನಿಸಿದೆ. ಪರಿವರ್ತನರೂಪವಾದ ಧರ್ಮದಿಂದ ಕೂಡಿರುವುದರಿಂದ ಕಾಲದ್ರವ್ಯವು ಪರತ್ವ ಮತ್ತು ಅಪರತ್ವ ವ್ಯವಹಾರದಿಂದ ಕೂಡಿದ್ದಾಗಿದೆ.

ಕಾಯ, ವಚನ ಮತ್ತು ಮನಸ್ಸುಗಳ ಕ್ರಿಯೆಯನ್ನು ಯೋಗವೆನ್ನುತ್ತಾರೆ. ಈ

ಯೋಗವನ್ನೇ ಆಸ್ರವವೆಂದೂ ಕರೆಯಲಾಗುತ್ತದೆ. ಅದರಲ್ಲಿ ಶುಭ ಮತ್ತು ಅಶುಭ ಎಂಬ ಎರಡು ಭೇದಗಳಿವೆ. ಅವುಗಳಲ್ಲಿ ಶುಭಯೋಗವು ಶುಭಾಸ್ರವಕ್ಕೆ ಮತ್ತು ಅಶುಭಯೋಗವು ಅಶುಭಾಸ್ರವಕ್ಕೆ ಕಾರಣವಾಗಿವೆ. ಸಾಂಪರಾಯಿಕ ಮತ್ತು ಈರ್ಯಾಪಥ ಎಂಬುವು ಆಸ್ರವದ ಎರಡು ಭೇದಗಳಾಗಿವೆ. ಐದು ಇಂದ್ರಿಯಗಳು, ನಾಲ್ಕು ಕಷಾಯಗಳು. ಹಿಂಸಾದಿ ಐದು ಅವ್ರತಗಳು ಮತ್ತು ಇಪ್ಪತ್ತೈದು ಕ್ರಿಯೆಗಳು ಸಾಂಪರಾಯಿಕ ಆಸ್ರವದ ದ್ವಾರಗಳಾಗಿವೆ.

ಜೀವಗಳಲ್ಲಿ ಪರಿಣಾಮದ ಮಂದ, ಮಧ್ಯಮ ಮತ್ತು ತೀವ್ರ ಎಂಬ ಭೇದವಿರುವುದರಿಂದ ಆಸ್ರವವೂ ಮಂದ, ಮಧ್ಯಮ ಮತ್ತು ತೀವ್ರ ಎಂಬ ಭೇದಗಳಿಂದ ಕೂಡಿದೆ. ಜೀವಾಧಿಕರಣ ಮತ್ತು ಅಜೀವಾಧಿಕರಣದ ಭೇದದಿಂದ ಆಸ್ರವದಲ್ಲಿ ಎರಡು ಭೇದಗಳಿವೆ. ಜೀವಾಧಿಕರಣ ಆಸ್ರವದ ಮೂಲದಲ್ಲಿ ಮೂರು ಭೇದಗಳಿವೆ ; ಸಂರಂಭ, ಸಮಾರಂಭ ಮತ್ತು ಆರಂಭ. ಇವುಗಳಲ್ಲಿ ಒಂದೊಂದರಲ್ಲೂ ಕೃತ, ಕಾರಿತ, ಅನುಮೋದನಾ ಎಂಬ ಮೂರು; ಮನೋಯೋಗ, ವಚನಯೋಗ, ಕಾಯಯೋಗ ಎಂಬ ಮೂರು ; ಕ್ರೋಧ, ಮಾನ. ಮಾಯಾ, ಲೋಭರೂಪ ಕಷಾಯ ಎಂಬವು ನಾಲ್ಕು ; ಇವುಗಳಲ್ಲಿ ಪರಸ್ಪರ ಗುಣಿತಗೊಳ್ಳುವುದರಿಂದ ೩೬-೩೬ ಭೇದಗಳಾಗುತ್ತವೆ. ಮೂರೂ ಕೂಡಿ ಒಂದು ನೂರ ಎಂಟು ಭೇದಗಳಾಗುತ್ತವೆ. ಎರಡು ಬಗೆಯ ನಿರ್ವರ್ತನಾ, ನಾಲ್ಕು ಬಗೆಯ ನಿಕ್ಷೇಪ, ಎರಡು ಬಗೆಯ ಸಂಯೋಗ. ಮೂರು ಬಗೆಯ ನಿಸರ್ಗ–ಇವು ಅಜೀವಾಧಿಕರಣ ಆಸ್ರವದ ಭೇದಗಳಾಗಿವೆ. ಮೂಲಗುಣನಿರ್ವರ್ತನಾ ಮತ್ತು ಉತ್ತರಗುಣನಿರ್ವರ್ತನಾ ಭೇದದಿಂದ ನಿರ್ವರ್ತನದ ಎರಡು ಭೇದಗಳಿವೆ. ಶರೀರ, ವಚನ, ಮನ ಹಾಗೂ ಶ್ವಾಸೋಚ್ಛ್ವಾಸ ಮುಂತಾದುವುಗಳ ರಚನೆಯಾಗುವುದು ಮೂಲಗುಣ ನಿರ್ವರ್ತನಾ ಎನಿಸಿಕೊಳ್ಳುತ್ತದೆ. ಕಾಷ್ಠ, ಪಾಷಾಣ, ಮಣ್ಣು ಮುಂತಾದುವುಗಳಿಂದ ಚಿತ್ರಾಮ ಮುಂತಾದುವನ್ನು ನಿರ್ಮಿಸುವುದು ಉತ್ತರಗುಣನಿರ್ವರ್ತನಾ ಎನಿಸಿಕೊಳ್ಳುತ್ತದೆ. ಸಹಸಾ ನಿಕ್ಷೇಪಾಧಿಕರಣ, ದುಷ್ಪ್ರಮೃಷ್ಟ ನಿಕ್ಷೇಪಾಧಿಕರಣ, ಅನಾಭೋಗ ನಿಕ್ಷೇಪಾಧಿಕರಣ ಮತ್ತು ಅಪ್ರತ್ಯವೇಕ್ಷಿತ ನಿಕ್ಷೇಪಾಧಿಕರಣ—ಈ ನಾಲ್ಕು ಭೇದಗಳಿಂದ ನಿಕ್ಷೇಪಾಧಿಕರಣವು ನಾಲ್ಕು ಬಗೆಯದಾಗಿದೆ.

ಜ್ಞಾನಾವರಣಾದಿಗಳ ಭೇದದಿಂದಲೂ ಆಸ್ರವದ ಭೇದಗಳಾಗುತ್ತವೆ. ಜ್ಞಾನದ ವಿಷಯದಲ್ಲಿ ಮಾಡಿದ ಪ್ರದೋಷ, ನಿಹ್ನವ, ಅದಾನ, ವಿಘ್ನ, ಆಸಾದನ ಮತ್ತು ದೂಷಣಗಳು ಜ್ಞಾನಾವರಣದ ಆಸ್ರವಗಳಾಗಿವೆ. ದರ್ಶನದ ವಿಷಯದಲ್ಲಿ ಮಾಡಿದ ಪ್ರದೋಷ ಮುಂತಾದುವು ದರ್ಶನಾವರಣದ ಆಸ್ರವಗಳಾಗಿವೆ.

ವೇದನೀಯ ಕರ್ಮದಲ್ಲಿ ಅಸಾತಾವೇದನೀಯ ಮತ್ತು ಸಾತಾವೇದನೀಯ ಎಂಬೆರಡು ಭೇದಗಳಿವೆ. ತನ್ನ ಹಾಗೂ ಅನ್ಯರ ವಿಷಯದಲ್ಲಿ ಉಂಟಾಗುವ ದುಃಖ, ಶೋಕ, ಆಕ್ರಂದನ, ತಾಪ ಮತ್ತು ಪರಿವೇದನೆ ಎಂಬವು ಅಸಾತಾವೇದನೀಯ ಆಸ್ರವಗಳು. ಸಮಸ್ತ ಜೀವರಾಶಿಗಳ ವಿಷಯದಲ್ಲಿ ದಯೆತೋರಿಸುವುದು, ವ್ರತಧಾರಿಗಳಲ್ಲಿ

ಅನುರಾಗ ತೋರುವುದು, ಸರಾಗಸಂಯಮ, ದಾನ, ಕ್ಷಮೆ, ಶೌಚ, ಅರ್ಹಂತನ ಪೂಜೆಯಲ್ಲಿ ಮಗ್ನತೆ, ಬಾಲ ಹಾಗೂ ವೃದ್ಧ ತಪಸ್ವಿಗಳ ವಿಷಯದಲ್ಲಿ ವೈಯಾವೃತ್ತಿಮಾಡುವುದು ಈ ಮುಂತಾದುವು ಸಾತಾವೇದನೀಯ ಆಸ್ರವಗಳಾಗಿವೆ.

ಸಾಗಾರ ಮತ್ತು ಅನಾಗಾರದ ಭೇದದಿಂದ ವ್ರತಿಗಳಲ್ಲಿ ಎರಡು ಭೇದವಿದೆ. ಅಣುವ್ರತಧಾರಿಗಳು ಸಾಗಾರರೆನಿಸಿಕೊಂಡರೆ, ಮಹಾವ್ರತಧಾರಿಗಳು ಅನಾಗಾರರೆನಿಸಿಕೊಳ್ಳುತ್ತಾರೆ. ತ್ರಸಕಾಯಿಕ ಜೀವಗಳನ್ನು ಘಾತಿಸದಿರುವುದು ಅಹಿಂಸಾಣುವ್ರತ ; ರಾಗದ್ವೇಷಗಳಿಂದ ಪ್ರೇರಿತರಾಗದೆ ಅಸತ್ಯವಚನಗಳಿಂದ ದೂರವಿರುವುದು ಸತ್ಯಾಣುವ್ರತ ; ಇತರರು ಮರೆತ ಅಥವಾ ಎಲ್ಲಿಯೋ ಬಿದ್ದಿರುವ ಹಣದ ವಿಷಯದಲ್ಲಿ ಆಸಕ್ತಿತಾಳದಿರುವುದು ಅಚೌರ್ಯಾಣುವ್ರತ ; ಪರಸ್ತ್ರೀಮೋಹವನ್ನು ಒಟ್ಟು ತನ್ನ ಪತ್ನಿಯಲ್ಲಿಯೇ ಸಂತೋಷವನ್ನು ಹೊಂದುವುದು ಬ್ರಹ್ಮಚರ್ಯಾಣುವ್ರತ ; ಚಿನ್ನ, ಸೇವಕರು, ಮನೆಮಠ ಮುಂತಾದುವುಗಳನ್ನು ಬುದ್ಧಿಪೂರ್ವಕವಾಗಿ ಹಚ್ಚಿಕೊಳ್ಳುತ್ತಾ ಸಾಗುವುದನ್ನು ತ್ಯಜಿಸುವುದು ಇಚ್ಛಾಪರಿಣಾಮ. ಈ ಐದು ಅಣುವ್ರತಗಳನ್ನು ಧರಿಸಿದ ಶ್ರಾವಕನಿಗೆ ಮೂರು ಗುಣವ್ರತಗಳೂ ನಾಲ್ಕು ಶಿಕ್ಷಾವ್ರತಗಳೂ ಇರುತ್ತವೆ. ಐದು ಅಣುವ್ರತ ಮತ್ತು ಏಳು ಶೀಲವ್ರತಗಳಲ್ಲಿ ಪ್ರತಿಯೊಂದರಲ್ಲಿಯೂ ಐದೈದು ಅತಿಚಾರಗಳಿವೆ.

ಮಿಥ್ಯಾದರ್ಶನ, ಹಿಂಸೆ ಮುಂತಾದ ಅವಿರತಿ, ಪ್ರಮಾದ, ಕಷಾಯ ಮತ್ತು ಯೋಗ ಎಂಬವು ಬಂಧದ ಕಾರಣಗಳು. ಇವುಗಳಲ್ಲಿ ಮಿಥ್ಯಾದರ್ಶನವು ನಿಸರ್ಗಜ ಮತ್ತು ಅನ್ಯೋಪದೇಶಜದ ಭೇದದಿಂದ ಎರಡು ಬಗೆಯಾಗಿವೆ. ಮಿಥ್ಯಾತ್ವಕರ್ಮದ ಉದಯದಿಂದ ಉಂಟಾಗುವ ತತ್ವ ಅಶ್ರದ್ಧಾನವು ನಿಸರ್ಗಜ ಮಿಥ್ಯಾದರ್ಶನವೆನಿಸುತ್ತದೆ. ಪರೋಪದೇಶಪೂರ್ವಕವಾದ ಅತತ್ವ ಶ್ರದ್ಧಾನವನ್ನು ಅನ್ಯೋಪದೇಶಜ ಮಿಥ್ಯಾದರ್ಶನವೆನ್ನುತ್ತಾರೆ. ಇದರಲ್ಲಿ ಕ್ರಿಯಾವಾದಿ, ಅಕ್ರಿಯಾವಾದಿ, ವೈನಯಿಕ ಮತ್ತು ಅಜ್ಞಾನಿಯೆಂಬ ನಾಲ್ಕು ಭೇದಗಳಿವೆ. ಕಷಾಯದಿಂದ ಕಲುಷಿತವಾದ ಜೀವವು ಪ್ರತಿಕ್ಷಣದಲ್ಲಿಯೂ ಕರ್ಮರೂಪಿಯಾದ ಪುದ್ಗಲವನ್ನು ಸಂಗ್ರಹಿಸುತ್ತಿರುತ್ತದೆ. ಇದೇ ಬಂಧವೆನಿಸುತ್ತದೆ. ಈ ಬಂಧವು ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶದ ಭೇದದಿಂದ ನಾಲ್ಕು ಪ್ರಕಾರವಾಗಿದೆ.

ಜ್ಞಾನವನ್ನು ಮುಚ್ಚಿಬಿಡುವುದೇ ಜ್ಞಾನಾವರಣ ಕರ್ಮವೆನಿಸುತ್ತದೆ. ಹಾಗೆಯೇ ದರ್ಶನವನ್ನು ಮುಚ್ಚಿಬಿಡುವಂಥದು ದರ್ಶನಾವರಣಕರ್ಮವೆನಿಸುತ್ತದೆ. ಹೀಗೆಯೇ ವೇದನೀಯ ಕರ್ಮ, ಮೋಹನೀಯ ಕರ್ಮ, ಆಯುಕರ್ಮ, ನಾಮಕರ್ಮ, ಗೋತ್ರಕರ್ಮ, ಅಂತರಾಯ ಕರ್ಮ ಎಂಬ ಸಂಗತಿಗಳೂ ಇವೆ. ಜ್ಞಾನಾವರಣದಲ್ಲಿ ಐದು, ದರ್ಶನಾವರಣದಲ್ಲಿ ಒಂಬತ್ತು, ವೇದನೀಯದಲ್ಲಿ ಎರಡು, ಮೋಹನೀಯದಲ್ಲಿ ಇಪ್ಪತ್ತೆಂಟು, ಆಯುವಿನಲ್ಲಿ ನಾಲ್ಕು, ನಾಮದಲ್ಲಿ ನಲವತ್ತೆರಡು, ಗೋತ್ರದಲ್ಲಿ ಎರಡು, ಅಂತರಾಯದಲ್ಲಿ ಐದು ಎಂಬಂತೆ ಪ್ರಭೇದಗಳಿವೆ.

ಮತಿಜ್ಞಾನಾವರಣ, ಶ್ರುತಜ್ಞಾನಾವರಣ, ಅವಧಿಜ್ಞಾನಾವರಣ, ಮನಃಪರ್ಯಾಯ

ಜ್ಞಾನಾವರಣ ಮತ್ತು ಕೇವಲಜ್ಞಾನಾವರಣ ಎಂಬಿವೈದು ಜ್ಞಾನಾವರಣ ಕರ್ಮದ ಉತ್ತರಪ್ರಕೃತಿಗಳಾಗಿವೆ. ಚಕ್ಷುರ್ದರ್ಶನಾವರಣ, ಅಚಕ್ಷುರ್ದರ್ಶನಾವರಣ, ಅವಧಿದರ್ಶನಾವರಣ, ಕೇವಲದರ್ಶನಾವರಣ, ನಿದ್ರಾ, ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ ಎಂಬಂತೆ ದರ್ಶನಾವರಣ ಕರ್ಮದಲ್ಲಿ ಒಂಬತ್ತು ಉತ್ತರ ಪ್ರಕೃತಿಗಳಿವೆ. ವೇದನೀಯ ಕರ್ಮದಲ್ಲಿ ಸಾತಾವೇದನೀಯ ಮತ್ತು ಅಸಾತಾವೇದನೀಯ ಎಂಬೆರೆಡು ಭೇದಗಳಿವೆ. ಮೋಹನೀಯ ಕರ್ಮದ ಮೂಲದಲ್ಲಿ ದರ್ಶನ ಮೋಹನೀಯ ಮತ್ತು ಚರಿತ್ರಮೋಹನೀಯ ಎಂಬೆರಡು ಭೇದಗಳಿವೆ. ದರ್ಶನಮೋಹನೀಯದಲ್ಲಿ ಸಮ್ಯಕ್ತ್ವ, ಮಿಥ್ಯಾತ್ವ ಮತ್ತು ಸಮ್ಯಕ್‌ಮಿಥ್ಯಾತ್ವ ಎಂಬ ಮೂರು ಉತ್ತರಪ್ರಕೃತಿಗಳಾಗಿವೆ. ನಾರಕ, ತಿರ್ಯಕ್, ಮಾನುಷ ಮತ್ತು ದೈವ ಎಂಬ ಭೇದದಿಂದ ಆಯುಕರ್ಮವು ನಾಲ್ಕು ಪ್ರಕಾರದ್ದಾಗಿದೆ. ದೇವ ಮತ್ತು ನಾರಕಾದಿಗಳ ಭೇದದಿಂದ ಗತಿಯೆಂಬ ಕರ್ಮದಲ್ಲಿ ನಾಲ್ಕು ಭೇದಗಳಿವೆ. ಗೋತ್ರಕರ್ಮದಲ್ಲಿ ಉಚ್ಚಗೋತ್ರ ಮತ್ತು ನೀಚಗೋತ್ರ ಎಂಬೆರಡು ಭೇದಗಳಿವೆ. ಅಂತರಾಯ ಕರ್ಮದಲ್ಲಿ ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯ ಎಂಬ ಐದು ಭೇದಗಳಿವೆ.

ವಿಪಾಕ ಹಾಗೂ ತಪದಿಂದ ಕರ್ಮಗಳ ನಿರ್ಜರೆಯಾಗುತ್ತದೆ. ಅದರಲ್ಲೊಂದು ವಿಪಾಕಜಾ ಎನಿಸಿದರೆ, ಮತ್ತೊಂದು ಅವಿಪಾಕಜಾ ಎನಿಸುತ್ತದೆ. ಆತ್ಮದ ಸಮಸ್ತಪ್ರದೇಶಗಳೊಂದಿಗೆ ಇರುವ ಕರ್ಮಪರಮಾಣುಗಳ ಬಂಧವನ್ನು ಪ್ರದೇಶಬಂಧ ಎಂದು ಕರೆಯಲಾಗುತ್ತದೆ.

ಆಸ್ರವದ ನಿಲುಗಡೆಯನ್ನು ಸಂವರವೆನ್ನಲಾಗುತ್ತದೆ. ಅವು ಭಾವಸಂವರ ಮತ್ತು ದ್ರವ್ಯಸಂವರವೆಂಬ ಎರಡು ಭೇದಗಳಿಂದ ಕೂಡಿವೆ. ಮೂರು ಗುಪ್ತಿಗಳು, ಐದು ಸಮಿತಿಗಳು, ಹತ್ತು ಧರ್ಮಗಳು, ಹನ್ನೆರಡು ಅನುಪ್ರೇಕ್ಷೆಗಳು, ಐದು ಚಾರಿತ್ರಗಳು, ಇಪ್ಪತ್ತೆರಡು ಪರೀಷಹಜಯಗಳು ತಮ್ಮ ಅವಾಂತರವಿಸ್ತಾರದೊಂದಿಗೆ ಸಂವರದ ಕಾರಣಗಳಾಗಿವೆ. ನಿರ್ಗ್ರಂಥಮುದ್ರೆಯನ್ನು ಧರಿಸಿದ ಮುನಿಯ ಬಂಧದ ಕಾರಣಗಳು ತೊಲಗುವುದು ಮತ್ತು ನಿರ್ಜರೆಯ ಮೂಲಕ ಸಮಸ್ತಕರ್ಮಗಳ ಕ್ಷಯವಾಗುವುದು ಮೋಕ್ಷವೆನಿಸಿಕೊಳ್ಳುತ್ತದೆ. ಜೀವಾದಿ ಏಳು ತತ್ವಗಳ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್ ಚಾರಿತ್ರಗಳೇ ಮೋಕ್ಷದ ಸಾಕ್ಷಾತ್ ಸಾಧನಗಳಾಗಿವೆ."

ಹೀಗೆ ನೇಮಿಜಿನೇಂದ್ರನ ಮೂಲಕ ನಿರ್ಮಲ ಮೋಕ್ಷಮಾರ್ಗವನ್ನು ಕೇಳಿ ದ್ವಾದಶ ಸಭೆಗಳವರೂ ಕೈಮುಗಿದು ವಂದಿಸಿದರು. ಕೆಲವರು ಸಮ್ಯಗ್ದರ್ಶನವನ್ನೂ ಕೆಲವರು ಸಂಯಮಾಸಂಯಮವನ್ನೂ ಮತ್ತೆ ಕೆಲವರು ಪೂರ್ಣಸಂಯಮವನ್ನೂ ಧರಿಸಿದರು. ಶಿವಾದೇವಿ, ರೋಹಿಣಿ, ದೇವಕಿ ಮತ್ತು ಇತರ ದೇವಿಯರು ಶ್ರಾವಿಕೆಯರ ಚಾರಿತ್ರವನ್ನು ಸ್ವೀಕರಿಸಿದರು. ಯದುಕುಲ ಭೋಜಕುಲದ ಅರಸರೂ ಅನೇಕ ಸುಕುಮಾರಿಯರೂ ಅಣುವ್ರತಗಳನ್ನು ಧರಿಸಿದರು. ಇಂದ್ರ, ಬಲದೇವ ಕೃಷ್ಣರು

ಮೊದಲುಗೊಂಡು ಯಾದವರು ಜಿನವಂದನಾನಂತರ ಸ್ವಸ್ಥಾನಗಳಿಗೆ ಹೋದರು. ಶರದೃತು ಕಾಣಿಸಿಕೊಂಡಿತು.

೫೯. ಭಗವದ್ವಿಹಾರ ವರ್ಣನ

ನೇಮಿನಾಥನು ಈ ಮೊದಲು ಯಾವರೀತಿ ಸಂಸಾರ ಸಾಗರದಿಂದ ಜೀವಿಗಳನ್ನು ದಾಟಿಸಲು ಸ್ವರ್ಗಾಗ್ರದಿಂದವತರಿಸಿದನೋ, ಅದೇ ರೀತಿಯೇ ವಿಹಾರಾರ್ಥವಾಗಿ ತೆರಳಲು ಉಜ್ಜಯಂತ ಗಿರಿಶಿಖರದಿಂದ ಕೆಳಗಿಳಿಯುತ್ತಿದ್ದಂತೆಯೇ ಕುಬೇರನು "ಅರ್ಥಿಗಳು ಬಂದು ಬಯಸಿದ್ದನ್ನು ಬೇಕಾದಂತೆ ಪಡೆದುಕೊಳ್ಳಲಿ" ಎಂದು ಘೋಷಿಸತೊಡಗಿದನು. ಇಷ್ಟಾರ್ಥದಾಯಕವಾದ ಮಣಿಕುಟ್ಟಿಮವೊಂದು ಕಲ್ಪಿತವಾಯಿತು. ಭಗವಾನನ ಮಂಗಲಮಯ ವಿಜಯೋದ್ಯೋಗ ಸಮಯದಲ್ಲಿ ಹಾಗಾಗುವುದು ಅತಿಶಯವಲ್ಲ. ಭೂತ ಚತುಷ್ಟಯಗಳು ಸರ್ವಭೂತ ಹಿತಕರಗಳಾದುವು. ಮಾರ್ಗದಲ್ಲಿ ಧನವೃಷ್ಟಿಯಾಯಿತು. ದೇವರು ದಿವ್ಯಕಾಂತಿಯಿಂದ ಬೆಳಗುತ್ತ ಪ್ರಕಟರಾದರು. ಒಂದು ಅತ್ಯಪೂರ್ವವೂ ಪವಿತ್ರವೂ ಆದ ಸಹಸ್ರದಲ ಕಮಲವನ್ನು ರಚಿಸಿದರು. ಅದು ತನ್ನ ಪೂರ್ವೋತ್ತರಗಳಲ್ಲಿ ಸ್ವರ್ಣಮಯ ಸಹಸ್ರಸಹಸ್ರ ಕಮಲಗಳ ಪಂಕ್ತಿದ್ವಯಗಳನ್ನು ಧರಿಸಿತ್ತು. ಪದ್ಮರಾಗ ಮಣಿರಚಿತವಾದ ಆ ಪದ್ಮವು ಪದ್ಮಾಯನ ಎಂಬ ಹೆಸರುಳ್ಳದ್ದು. ಅದರ ಮುಂದೆ ಇಂದ್ರಪುರಸ್ಸರವಾಗಿ ಅಷ್ಟವಸುಗಳಿರುತ್ತಿದ್ದರು. ಅವರು ಜಿನನನ್ನು ವಂದಿಸಿ ಸ್ತುತಿಸಿ ಸಾಗುತ್ತಿದ್ದರು. ಪದ್ಮಾಯನದ ಮೇಲೆ ಜಿನೇಂದ್ರನು ಆರೂಢನಾದನು. ಭೂಲೋಕವೇ ತೂಗುಯ್ಯಾಲೆಯಾಡಿದಂತೆ ತೋರಿತು. ದೇವದುಂದುಭಿಗಳು ಜಿನನ ಪ್ರಯಾಣಸೂಚಕವಾಗಿ ಮೊಳಗುತ್ತ ಧರ್ಮಚಕ್ರವನ್ನು ಮುನ್ನಡೆಸುವ ಜಗತ್ಸ್ವಾಮಿಯು ಸರ್ವಜೀವರ ವೈಭವಕ್ಕಾಗಿ ವಿಹಾರಮಾಡುತ್ತಿದ್ದಾನೆ, ಸರ್ವಸಂಪದಗಳೂ ವರ್ಧಿಸಲಿ, ಈತಿಗಳು ತೊಲಗಲಿ ಎನ್ನುವಂತೆ ತೋರುತ್ತಿದ್ದುವು. ಮಂಗಲ ತೂರ್ಯಗಳು ಮೊಳಗುತ್ತಿದ್ದುವು. ಪ್ರಸ್ಥಾನ ಕಾಲದಲ್ಲಿ ಕೇಳಿ ಬರುವ ಕೋಲಾಹಲ ಕಲಕಲಧ್ವನಿಗಳು ಕೇಳುತ್ತಿದ್ದುವು. ಆಕಾಶದಲ್ಲಿ ಕಿನ್ನರಿಯರ ಗೀತೆ, ಅಪ್ಸರಿಯರ ನೃತ್ಯ ಮುಂತಾದವು ನಡೆಯುತ್ತಿದ್ದವು. ನರಸುರಾಸುರರು ವಂದನೆ ಜಯಧ್ವನಿ ಸ್ತುತಿ ಇವನ್ನು ಮಾಡುತ್ತಿದ್ದರು. ಭೂಮಿಯ ಮೇಲೂ ನೃತ್ಯಗೀತವಾದಿತ್ರಾದಿಗಳಾಗಿದ್ದವು. ಲೋಕಪಾಲರು ದಿಗ್ರಕ್ಷೆ ಸರ್ವರಕ್ಷೆಗಳ ಹೊಣೆ ಹೊತ್ತಿದ್ದರು. ದೇವರು ಹಿಂಸ್ರಜೀವಿಗಳನ್ನು ದೂರ ತೊಲಗಿಸುತ್ತಿದ್ದರು. ಸಮುದ್ರವು ತನ್ನ ಅಲೆಗೈಗಳಿಂದ ಸ್ವಾಗತಿಸುತ್ತಿತ್ತು. ಹೆಜ್ಜೆಹೆಜ್ಜೆಗೂ ಕೋಟ್ಯಂತರ ದೇವತೆಗಳು ಮಣಿಯುತ್ತಿದ್ದರು. ಲೋಕಾಂತಿಕ ಜೀವರು ಜಿನನ ಮುಂದೆ ನಡೆದಿದ್ದರು. ಅವರ ಪರಿವಾರ ದೇವಿಯರು ಮಂಗಲದ್ರವ್ಯವನ್ನು ಧರಿಸಿದ್ದರು. ಪದ್ಮಪಾಣಿಯರಾದ ಪದ್ಮೆ ಸರಸ್ವತಿಯರು ಜಿನನನ್ನು ಬಲಗೊಂಡು ಮುಂದೆ ಸಾಗುತ್ತಿದ್ದರು. ಅಂಜಲಿಬದ್ಧನಾದ ಇಂದ್ರನು ಆಯಾ ಭೂಪಾಲಕರೊಂದಿಗೆ 'ಇತ್ತ ಇತ್ತ' ಎಂದು ಪಾದಾವಧಾನ ಹೇಳುತ್ತ ಸಾಗುತ್ತಿದ್ದನು.

ಈ ಪ್ರಕಾರವಾಗಿ ಇಂದ್ರಾದಿಗಳಿಂದಲೂ ಅವರ ಪರಿವಾರದಿಂದಲೂ ಪರಿವೃತನಾಗಿ ನೇಮಿ ಪದ್ಮಾಯನದ ಮೇಲೆ ಆರೂಢನಾಗುತ್ತಲೂ ದೇವತೆಗಳು ಅವನನ್ನು ಪರಿಪರಿಯಾಗಿ ಸ್ತುತಿಸಿದರು. ಸರ್ವೋತ್ಕೃಷ್ಟ ವಿಭೂತಿಧಾರಕನಾದ ಆ ನೇಮಿಜಿನನು ಹೀಗೆ ಲೋಕಹಿತಾರ್ಥವಾಗಿ ದಯೆಯಿಂದ ವಿಹಾರಿಸತೊಡಗಿದನು. ದಿವ್ಯಕಮಲದ ಮೇಲೆ ತನ್ನ ಚರಣಕಮಲವಿರಿಸಿ ವಿಹಾರಿಸುತ್ತಿದ್ದನು. ಆ ವಿಹಾರಮಾರ್ಗವು ಹೇಮ ರತ್ನಭೂಷಿತವಾಗಿತ್ತು. ಪವನ ಕುಮಾರನು ಮಂದಾನಿಲವನ್ನು ಬೀಸಿ ಮಾರ್ಗವನ್ನು ಸ್ವಚ್ಛಗೊಳಿಸಿಡುತ್ತಿದ್ದನು. ಮೇಘವಾಹನ ದೇವನು ಸುಗಂಧಿತ ಜಲವನ್ನು ಮಾರ್ಗದಲ್ಲಿ ಸೂಸುತ್ತಿದ್ದನು. ದೇವರು ಮಂದಾರ ಪುಷ್ಪಗಳ ಮಳೆಗರೆಯುತ್ತಿದ್ದರು. ಗುಹ್ಯಕದೇವರು ಕುಂಕುಮರಸದಿಂದ ನಾನಾ ಪ್ರಕಾರದ ಚಿತ್ರಪತ್ರವಿರಚನೆ ಮಾಡಿಕೊಂಡು ಹೋಗುತ್ತಿದ್ದರು. ಮಾರ್ಗದ ಇಕ್ಕೆಲಗಳೂ ಕದಲೀನಾರಿಕೇಲಾದಿಗಳ ಸುಂದರೋದ್ಯಾನಗಳಾಗಿ ತೋರುತ್ತಿದ್ದುವು. ಮಾರ್ಗದ ಸುಂದರಕ್ರೀಡಾಸ್ಥಾನಗಳಲ್ಲಿ ದೇವಮಾನವರು ತಂತಮ್ಮ ಸ್ತ್ರೀಯರೊಂದಿಗೆ ನಾನಾಪ್ರಕಾರವಾಗಿ ಕ್ರೀಡಿಸುತ್ತಿದ್ದರು. ಭಗವಾನನ ವಿಹಾರಮಾರ್ಗವು ದ್ವಿಯೋಜನ ಅಗಲ ಮಾಡಲ್ಪಟ್ಟಿತ್ತು. ನಡುನಡುವೆ ತೋರಣಗಳು ಅಷ್ಟಶೋಭೆಗಳಾಗಿದ್ದುವು. ಭೋಗಿಗಳಿಗೆ ಇಷ್ಟವಸ್ತುಗಳನ್ನೀಯುವ ದೊಡ್ಡ ದೊಡ್ಡ ಕಾಮಶಾಲೆಗಳು ನಿರ್ಮಾಣವಾಗಿದ್ದುವು. ಎತ್ತರದ ಕದಲೀವೃಕ್ಷಗಳೂ ಧ್ವಜಗಳೂ ಆಚ್ಛಾದಿಸಿ ದಟ್ಟವಾದ ನೆರಳು ಬೀಳುತ್ತಿತ್ತು. ವನವಾಸಿಗಳಾದ ಸುರರು ವನಮಂಜರಿಗಳಿಂದ ಪುಷ್ಪಮಂಡಪಗಳನ್ನು ನಿರ್ಮಿಸಿದ್ದರು. ಜಿನನು ಆ ಮಂಟಪಮಧ್ಯಸ್ಥಿತನಾಗಿರಲು ಅವನ ಹಿಂದೆ ಭಾಮಂಡಲವು ಬೆಳಗುತ್ತಿತ್ತು. ಮೇಲೆ ಛತ್ರತ್ರಯಗಳು, ಸುತ್ತಲೂ ಬೀಸುವ ಸಹಸ್ರಾರು ಚಾಮರಗಳು, ಋಷಿಗಣ ನೇಮಿಯ ಹಿಂದೆ ಸಾಗಿತ್ತು. ಇಂದ್ರನೇ ಪಡಿಯರನಾಗಿ ಅಷ್ಟವಸುಗಳೊಂದಿಗೆ ನೇಮಿಯ ಮುಂದೆ ನಡೆದಿದ್ದನು. ಇಂದ್ರನ ಮುಂದೆ ಲಕ್ಷ್ಮಿಯೆಂಬ ದೇವಿ ಶಚೀದೇವಿಯೊಡನೆ ಮಂಗಲದ್ರವ್ಯ ಹಿಡಿದು ಸಾಗಿದ್ದಳು. ಮತ್ತೆ ಮುಂದೆ ಅಧಿದೈವರನ್ನು ಹೊತ್ತ ಶಂಖ ಪದ್ಮರೆಂಬ ನಿಧಿದೇವಿಯರು ಸಾಗುತ್ತಿದ್ದರು. ಅವರ ಮುಂದೆ ನಾಗಕುಮಾರ ಜಾತಿಯ ದೇವನು, ಆಮೇಲೆ ಧೂಪಘಟವನ್ನು ಹೊತ್ತ ಅಗ್ನಿಕುಮಾರ ದೇವನು. ಆಮೇಲೆ ಚಂದ್ರ ಸೂರ್ಯದೇವರು ಮಂಗಲದರ್ಪಣವನ್ನು ಧರಿಸಿದ್ದರು. ಹೋದೆಡೆಗಳಲ್ಲಿ ವಿಜಯಸ್ತಂಭ ಕಾಣುತ್ತಿತ್ತು. ವಿಜಯಪತಾಕೆ ಹಾರುತ್ತಿತ್ತು. ಅಧೋಲೋಕ ಊರ್ಧ್ವಲೋಕ ನಿವಾಸಿ ದೇವಿಯರು ಆನಂದನೃತ್ಯವನ್ನು ಅಭಿನಯಿಸುತ್ತಿದ್ದರು. ನಾಂದೀಧ್ವನಿಯು ಗಂಭೀರವಾಗಿ ಹೊಮ್ಮುತ್ತಿದ್ದಿತು. ಧರ್ಮಚಕ್ರವು ಆಕಾಶಮಾರ್ಗದಲ್ಲಿ ಹೋಗುತ್ತಿದ್ದಿತು, ಸ್ತನಿತಕುಮಾರ ದೇವರು ಅಭಯಘೋಷಣೆಯೊಡನೆ "ತ್ರಿಜಗತ್ಸ್ವಾಮಿಗೆ ಬಂದು ವಂದಿಸಿರಿ, ಬನ್ನಿ" ಎಂದೂ ಘೋಷಿಸುತ್ತಿದ್ದರು. ಭವನವಾಸಿ ದೇವರು ಓಡುತ್ತೋಡುತ್ತ ಜಯಧ್ವನಿ ಮಾಡುತ್ತಿದ್ದರು. ನೇಮಿಯ ಜತೆ ನಡೆವ ದೇವರಿಗೆ ಅರ್ಧದೃಷ್ಟಿ ಮೊದಲಾಗಿ ಸಕಲ ಆಶ್ಚರ್ಯಗಳೂ ಘಟಿಸುತ್ತಿದ್ದವು. ಭಗವಂತನು ವಿಹಾರಿಸುತ್ತ ಬಂದ ದೇಶಗಳಲ್ಲಿ ಆಗ್ಗೆ ಯಾರಿಗೂ ಆಧಿವ್ಯಾಧಿಗಳಾಗುತ್ತಿರಲಿಲ್ಲ.

ಈತಿಬಾಧೆಗಳಿರುತ್ತಿರಲಿಲ್ಲ. ಕುರುಡರು ನೋಡುತ್ತಿದ್ದರು; ಕಿವುಡರು ಕೇಳುತ್ತಿದ್ದರು. ಅತ್ಯುಷ್ಣ ಅತಿಶೀತಗಳಿರುತ್ತಿರಲಿಲ್ಲ. ದಿವಾರಾತ್ರಿ ವಿಭಾಗವಿರುತ್ತಿರಲಿಲ್ಲ. ಅಶುಭಕಾರ್ಯಗಳು ತಮ್ಮ ಪ್ರಭಾವ ಬೀರುತ್ತಿರಲಿಲ್ಲ. ಶುಭಕಾರ್ಯಗಳು ವರ್ಧಿಸುತ್ತಿದ್ದವು. ಪೃಥಿವಿ ಫಲಪುಷ್ಪ ಧನಧಾನ್ಯ ಸಮೃದ್ಧವಾಗಿರುತ್ತಿತ್ತು. ಸರ್ವಋತು ಸಂಪದಗಳೂ ತೋರುತ್ತಿದ್ದವು. ಮೃತ್ಯುವಿಗೆ ಅಕಾಲ ಮರಣದಿಂದ ಯಾರನ್ನೂ ಅಪಹರಿಸುವ ಧೈರ್ಯವಿರುತ್ತಿರಲಿಲ್ಲ. ಕಾಲವೇ ನೇಮಿನಾಥನಿಗೆ ಅಧೀನವಾಗಿತ್ತು. ಅವನ ವಿಹಾರ ಕ್ಷೇತ್ರದಲ್ಲಿ ಸಮಸ್ತ ತ್ರಸಸ್ಥಾವರ ಜೀವಿಗಳೂ ಸುಖದಿಂದಿರುತ್ತಿದ್ದುವು. ಅಲ್ಪಬುದ್ಧಿಯ ತಿರ್ಯಗ್ಜೀವಿಗಳೂ ಭಗವಂತನಿಗೆ ದೂರದಿಂದಲೇ ನಮಸ್ಕರಿಸುತ್ತಿದ್ದವು. ಭಗವಾನ್ ಚತುರ್ಮುಖನಾದ್ದರಿಂದ ನಾಲ್ದೆಸೆಗಳಲ್ಲಿಯೂ ನೋಡುತ್ತಿದ್ದನು. ಛಾಯಾರಹಿತನಾಗಿದ್ದನು. ಆತನಿಗೆ ಆಹಾರ ಅನಾವಶ್ಯಕವಾಗಿತ್ತು. ಉಪಸರ್ಗಗಳು ಉಂಟಾಗುತ್ತಿರಲಿಲ್ಲ. ಪ್ರವಾದಿಗಳೂ ತಮ್ಮ ಗರ್ವವನ್ನು ಒತ್ತಿಟ್ಟು ಬಂದು ಅವನಿಗೆ ಮಣಿಯುತ್ತಿದ್ದರು. ನೇಮಿನಾಥನು ಯಾವ ಯಾವ ದಿಕ್ಕುಗಳತ್ತ ಸಾಗಿದ್ದರೂ ಆಯಾ ದಿಕ್ಪಾಲರು ಅರ್ಚನಾಸಾಮಗ್ರಿಗಳನ್ನು ಕೊಂಡು ಅವನನ್ನು ಸ್ವಾಗತಿಸುತ್ತಿದ್ದರು. ಅವನು ಅಲ್ಲಿಂದ ಹೊರಡಲಿದ್ದಾಗ ಅವರು ತಂತಮ್ಮ ಎಲ್ಲೆಕಟ್ಟಿನ ತನಕ ತಲುಪಿಸಿ ಬರುತ್ತಿದ್ದರು. ಆ ದೇವಸೇನೆಯ ನಡುವೆ ಒಂದು ಅತ್ಯನ್ನತ ಕಾಂತಿದಂಡವಿತ್ತು. ಅದು ತನ್ನ ತೇಜಃಪ್ರಕಾಶದಿಂದ ಸರ್ವತೇಜಃಪ್ರಕರ್ಷವನ್ನೂ ಮೀರುತ್ತಿತ್ತು. ಆ ಕಾಂತಿದಂಡದ ನಡುವೆ ಪುರುಷಾಕೃತಿಯ ಒಂದು ಅನ್ಯಕಾಂತಿಸಮೂಹವು ಬೆಳಗುತ್ತಿತ್ತು. ಅದು ಸಾಕ್ಷಾತ್ ಪುಣ್ಯದ ಮೂರ್ತಿಸ್ವರೂಪವೂ ಪರಮಪೂಜ್ಯವೂ ಆಗಿತ್ತು. ಅನನ್ನು ಪಾಪಾತ್ಮರು ಮುಂತಾದವರು ಕಾಣುವಂತಿರಲಿಲ್ಲ. ಅದರಡಿಯಲ್ಲಿ ಭಗವಾನ್ ಜಿನೇಂದ್ರನು ಲೋಕಶಾಂತ್ಯರ್ಥವಾಗಿ ವಿಹಾರಿಸುತ್ತಿದ್ದನು. ಭಗವಂತನು ವಿಹಾರಿಸಿದ ಮಾರ್ಗವು ಒಂದು ವರ್ಷಕಾಲ ಆತನ ಚಿಹ್ನೆಗಳಿಂದ ಕೂಡಿ ಅತ್ತ ಕಡೆ ಆತನು ವಿಹಾರಿಸಿದನೆಂಬುದನ್ನು ಪ್ರಕಟಿಸುತ್ತಿತ್ತು. ಆ ಮಾರ್ಗವು ರತ್ನವೃಷ್ಟಿಗಳಿಂದ ಸುಶೋಭಿಸಿತ್ತು. ಮಂದಬುದ್ಧಿಯವರು ತೀಕ್ಷ್ಣಬುದ್ಧಿಯವರಾಗುತ್ತಿದ್ದರು. ಹಿಂಸ್ರಜೀವಿಗಳು ಪ್ರಭಾವಹೀನವಾಗುತ್ತಿದ್ದುವು. ಭಗವಾನನ ಸಮೀಪಸ್ಥ ಜನರಿಗೆ ದುಃಖ ಕ್ಲೇಶಾದಿಗಳ ಉಪದ್ರವವಿರುತ್ತಿರಲಿಲ್ಲ. ಆತನ ವಿಹಾರದಿಂದ ಅನುಗೃಹೀತವಾಗುತ್ತಿದ್ದ ಭೂಮಿಯಲ್ಲಿ ೨೦೦ ಯೋಜನಗಳ ವರೆಗೆ ವಿಪ್ಲವಾದಿಗಳಾಗುತ್ತಿರಲಿಲ್ಲ. ೫೦ ವರ್ಷ ಕಾಲ ಅಲ್ಲಿ ಯಾವ ಉಪದ್ರವಾದಿಗಳೂ ಆಗುತ್ತಿರಲಿಲ್ಲ. ಇವೆಲ್ಲ ಆತನ ಅದ್ಭುತವೂ ಅನನ್ಯವೂ ಆದ ಮಹಿಮೆಯೆಂದು ತಿಳಿಯಬೇಕು.

ಹೀಗೆ ನೇಮಿನಾಥನು ಕ್ರಮವಾಗಿ ಲೋಕವಿಹಾರಮಾಡಿ ಸುರಾಷ್ಟ್ರ, ಮತ್ಸ್ಯ, ಲಾಟ, ವಿಶಾಲ, ಶೂರಸೇನ, ಪಟಚ್ಚರ, ಕುರುಜಾಂಗಲ, ಪಾಂಚಾಲ, ಕುಶಾಗ್ರ, ಮಗಧ, ಅಂಜನ, ಅಂಗ, ವಂಗ, ಕಲಿಂಗ ಆದಿ ನಾನಾ ದೇಶಗಳಲ್ಲಿ ವಿಹಾರಿಸುತ್ತ ಕ್ಷತ್ರಿಯಾದಿ ವರ್ಣಗಳನ್ನು ಜೈನಧರ್ಮದಲ್ಲಿ ಸ್ಥಿತಗೊಳಿಸಿದನು. ಹೀಗೆಯೇ ಮಲಯದೇಶಕ್ಕೆ ಬಂದನು. ಅದರ ಭದ್ರಿಲಪುರ ನಗರದಲ್ಲಿ ಸಹಸ್ರಾಮ್ರವನದಲ್ಲಿ ವಿರಾಜಮಾನನಾದನು. ಮುನ್ನಿ

ನಂತೆ ಚತುರ್ನಿಕಾಯಾಮರರು ಅಲ್ಲಿಯೂ ಕೂಡ ಸಮವಸರಣವನ್ನು ರಚಿಸಿದರು. ಅದರಲ್ಲಿ ಗಣಧರ ಪರಿವೇಷ್ಟಿತನಾದ ಜಿನೇಂದ್ರನು ಶೋಭಿಸಿದನು. ಆ ನಗರದ ಅರಸು ಪೌಂಡ್ರನು ತನ್ನ ಪೌರರೊಡಗೂಡಿ ಸಮವಸರಣಕ್ಕೆ ಬಂದನು. ಜಿನನಿಗೆ ವಂದಿಸಿ ಸ್ತುತಿಸಿ ಮನುಷ್ಯಸಭೆಗೆ ಹೋಗಿ ಕುಳಿತನು. ದೇವಕಿಯ ಆರು ಮಂದಿ ಪುತ್ರರು ಸುದೃಷ್ಟಿ ಶ್ರೇಷ್ಠಿ ಮತ್ತು ಅಲಕೆ ಇವರಿಗೆ ಅಚ್ಚುಮೆಚ್ಚಾಗಿ ಬೆಳೆದು ಅವರ ಮನೆಯಲ್ಲಿರುತ್ತಿದ್ದರು. ಈಗ ಅವರೂ ಸಮವಸರಣಕ್ಕಾಗಿ ಬಂದರು. ಅವರಲ್ಲಿ ಒಬ್ಬೊಬ್ಬರಿಗೂ ೩೨ ಮಂದಿ ಪತ್ನಿಯರು. ಆ ಸೋದರರು ತಂತಮ್ಮ ರಥಗಳಿಂದ ಇಳಿದು ಬಂದು ಸಮವಸರಣವನ್ನು ಹೊಕ್ಕು ಜಿನನಿಗೆ ವಂದಿಸಿ ಸ್ತುತಿಸಿ ತಾವೂ ಮನುಷ್ಯಸಭೆಗೆ ಹೋಗಿ ಕುಳಿತರು. ಆಗ ಭಗವಾನನು ಆ ಸಭಾಸದರಿಗೆ ಶ್ರಾವಕಧರ್ಮ ಮುನಿಧರ್ಮಗಳನ್ನು ಬೋಧಿಸಿದನು. ಆ ಧರ್ಮಶ್ರವಣದ ಬಳಿಕ ಆ ೬ ಮಂದಿ ಸೋದರರೂ ವೈರಾಗ್ಯಗೊಂಡು ಜಿನೇಂದ್ರ ಚರಣದಲ್ಲಿ ನಿರ್ಗ್ರಂಥರಾಗಿ ಜಿನದೀಕ್ಷೆಗೊಂಡರು. ಅವರು ಋದ್ಧಿಸಂಪನ್ನರಾಗಿ ದ್ವಾದಶಾಂಗ ಶ್ರುತಜ್ಞಾನಗಳ ಅಭ್ಯಾಸಮಾಡಿ ಉಗ್ರತಪವಾಚರಿಸಿದರು. ಅವರಿಗೆ ಉಪವಾಸ, ಪಾರಣೆ, ತ್ರೈಕಾಲಿಕಯೋಗ, ಶಯನಾಸನ ಮುಂತಾದ ಆಚರಣೆಗಳೆಲ್ಲ ಒಟ್ಟೊಟ್ಟಿಗೇ ನಡೆಯುತ್ತಿದ್ದುವು. ಆ ಚರಮಶರೀರಿ ಮುನಿಗಳ ಶರೀರಕಾಂತಿ ವರ್ಧಿಸಿತು. ಆ ಮುನಿಗಳು ಬಾಹ್ಯಾಭ್ಯಂತರ ತಪಸ್ಸನ್ನು ಸಮಸಮವಾಗಿ ಸಾಧಿಸಿದರು.

ಆಮೇಲೆ ಅಂಥ ಮಹಾವಿಭೂತಿಯೊಂದಿಗೆ ಪೃಥ್ವೀವಿಹಾರಮಾಡುತ್ತ ನೇಮಿಜಿನನು ಊರ್ಜಯಂತಗಿರಿಗೆ ಬಂದನು. ಈಗ ಇಲ್ಲಿ ಸಮವಸರಣವು ನಿರ್ಮಾಣವಾಯಿತು. ಇಂದ್ರಾದಿ ದೇವರು ಕೃಷ್ಣಾದಿ ಯಾದವರೂ ದ್ವಾರಿಕೆಯ ಪೌರರೂ ನೇಮಿಜಿನನ ಸೇವೆಯಲ್ಲಿ ತೊಡಗಿದರು. ಆಗ ವರದತ್ತಾದಿ ಏಕಾದಶಗಣಧರರು ಆ ಸಮವಸರಣದಲ್ಲಿ ಶೋಭಿಸುತ್ತಿದ್ದರು. ಹಾಗೆಯೇ ೪೦೦ ಪೂರ್ವಧಾರಿಗಳು, ೧೮೦೦ ಉಪಾಧ್ಯಾಯರು, ೧೫೦೦ ಅವಧಿಜ್ಞಾನಿಗಳು, ೧೫೦೦ ಕೇವಲಜ್ಞಾನಿಗಳು, ೯ಸಾವಿರ ಮನಃಪರ್ಯಯ ಜ್ಞಾನಿಗಳು, ೯ಸಾವಿರ ವಾದಿಗಳು, ೧೧ ಸಾವಿರ ವಿಕ್ರಿಯರ್ಧಿಧಾರಕ ಮುನಿಗಳು ಶೋಭಿಸಿದರು. ಹಾಗೆಯೇ ರಾಜೀಮತಿಯೊಡಗೊಂಡು ೪೦೦೦೦ ಆರ್ಯಿಕೆಯರೂ, ವಿಪುಲ ಸಂಖ್ಯೆಯ ಶ್ರಾವಕ ಶ್ರಾವಿಕೆಯರೂ ಇದ್ದರು. ಅಲ್ಲಿಯೂ ಜಿನನು ದಿವ್ಯಧ್ವನಿಯಲ್ಲಿ ಧರ್ಮಾಮೃತವರ್ಷವನ್ನು ಕರೆದು ಭವ್ಯಜನರನ್ನು ತಣಿಸಿದನು.

೬೦. ತ್ರಿಷಷ್ಟಿಪುರುಷಜಿನಾಂತರ ವರ್ಣನ

ಧರ್ಮಬೋಧೆ ಮುಗಿಯುತ್ತಲೂ, ದೇವಕಿ ನೇಮಿನಾಥನಿಗೆ ವಂದಿಸಿ "ಸ್ವಾಮಿ, ಜಾತರೂಪಧರರಾದ ಇಬ್ಬರು ಮುನಿಗಳು ನನ್ನ ಮನೆಗೆ ಮೂರು ಬಾರಿ ಮತ್ತೆ ಮತ್ತೆ ಬಂದರು. ಮೂರು ಬಾರಿ ಆಹಾರಸ್ವೀಕಾರ ಮಾಡಿದರು. ಪ್ರಭು, ಮುನಿಗಳ ಭೋಜನ ಕಾಲ ಒಂದೇ ಆಗಿರುವಾಗ, ಒಂದೇ ಬಾರಿ ಅವರು ಊಟಮಾಡುವವರಿರುವಾಗ, ಒಂದೇ ಮನೆಗೆ ಅನೇಕ ಬಾರಿ ಏಕೆ ಬಂದರು ? ಅಥವಾ ಇವರೇನಾದರೂ ಇಬ್ಬರಿಬ್ಬರು ಮುನಿಗಳ ಬೇರೆಬೇರೆ ಮೂರು ಜೋಡಿಯೋ ? ಸದೃಶರೂಪರಾದ ಕಾರಣ ನಾನು ಭ್ರಾಂತಿಪಟ್ಟು ಹಾಗೆಂದು ಗುರುತಿಸಲಾರದೆ ಹೋದೆನೋ? ನಾನರಿಯೆ. ಅಂತೂ ನನಗೆ ಆಯೆಲ್ಲರ ಮೇಲೂ ಪುತ್ರವಾತ್ಸಲ್ಯಸದೃಶವಾದ ಪ್ರೀತಿಯುಂಟಾದ್ದು ಖಂಡಿತ"—ಎಂದಳು. ಆಗ ನೇಮಿನಾಥನು ಹೇಳಿದ್ದು : "ಆ ಆರು ಮಂದಿ ಮುನಿಗಳೂ ನಿನ್ನ ಪುತ್ರರು ; ಕೃಷ್ಣನಿಂದ ನಿನ್ನಲ್ಲಿ ಮೂರು ಬಾರಿ ಅವಳಿ ಮಕ್ಕಳಾಗಿ ಹುಟ್ಟಿದವರು. ದೇವತೆಯು ಕಂಸನ ಕೈಯಿಂದ ಇವರನ್ನು ರಕ್ಷಿಸಿದನು. ಅಲ್ಲದೆ ಇವರು ಭದ್ರಿಲಪುರನಗರದಲ್ಲಿ ಸುದೃಷ್ಟಿಶ್ರೇಷ್ಠಿ ಮತ್ತು ಆತನ ಸತಿ ಅಲಕೆ ಇವರ ಮನೆಯಲ್ಲಿ ಅವರಿಗೆ ಮಕ್ಕಳೆಂಬಂತೆ ಅವರ ಲಾಲನೆ ಪೋಷಣೆಯಲ್ಲೇ ಬೆಳೆದರು. ಧರ್ಮಶ್ರವಣ ಮಾಡಿದ ಮೇಲೆ ಅವರೆಲ್ಲಾ ಒಟ್ಟಿಗೇ ನನ್ನ ಶಿಷ್ಯತ್ವವನ್ನು ಅಂಗೀಕರಿಸಿದರು, ಮುನಿಗಳಾದರು. ಕರ್ಮಕ್ಷಯ ಮಾಡಿಕೊಂಡು ಇದೇ ಜನ್ಮದಲ್ಲಿ ಸಿದ್ಧಿಪಡೆಯುತ್ತಾರೆ. ಆದ್ದರಿಂದ ಇವರ ಮೇಲೆ ನಿನಗೆ ಪುತ್ರವಾತ್ಸಲ್ಯವುಂಟಾದ್ದು ಸಹಜವೇ ಆಗಿದೆ." ದೇವಕಿ ಸಂತುಷ್ಟಳಾಗಿ ಆ ಪುತ್ರರಾದ ಮುನಿವೃಂದಕ್ಕೆ ನಮಸ್ಕರಿಸಿದಳು. ಕೃಷ್ಣಾದಿ ಸಮಸ್ತ ಯಾದವರೂ ವಿನಯದಿಂದ ಅವರನ್ನು ಸ್ತುತಿಸಿದರು.

ಆಮೇಲೆ ಕೃಷ್ಣನ ಪಟ್ಟಮಹಿಷಿ ಸತ್ಯಭಾಮೆ ತನ್ನ ಪೂರ್ವಭವವನ್ನು ಪ್ರಶ್ನಿಸಲು ನೇಮಿಜಿನನು ಯಾದವರು ಮತ್ತು ದೇವರ ಸಮಕ್ಷದಲ್ಲಿ ಅದನ್ನು ಹೀಗೆ ನಿರೂಪಿಸಿದನು:

"ಮೊದಲು ಭದ್ರಿಲಪುರ ನಗರದಲ್ಲಿ ಮುಂಡಶಲಾಯನನೆಂಬ ಒಬ್ಬ ವಿಪ್ರನಿದ್ದನು. ಇವನು ಮರೀಚಿ ಮತ್ತು ಕಪಿಲೆ ಎಂಬ ದಂಪತಿಗಳ ಮಗ. ಈ ಬ್ರಾಹ್ಮಣಪುತ್ರನು ಕಾವ್ಯರಚನೆಯಲ್ಲಿ ನಿಪುಣನು, ಪಂಡಿತಂಮನ್ಯನು. ಪುಷ್ಪದಂತಜಿನನ ತೀರ್ಥಕಾಲದಲ್ಲಿ ಧರ್ಮವ್ಯುಚ್ಛೇದವಾಗಿ ಭರತಕ್ಷೇತ್ರದಲ್ಲಿ ಜಿನಮಾರ್ಗಜ್ಞರಾದ ಭವ್ಯಜೀವರ ಅಭಾವವುಂಟಾಗಲು, ವಿಷಯಪೀಡಿತನಾದ ಈ ಬ್ರಾಹ್ಮಣನು ಪಾಪಬಂಧ ಕಾರಣಭೂತವಾದ ಹಸು ಕನ್ಯೆ ಹೊನ್ನು ಮುಂತಾದವನ್ನು ದಾನಮಾಡುವ ಪ್ರವೃತ್ತಿಯನ್ನು ರೂಢಿಗೆ ತಂದನು. ಮಂದಬುದ್ಧಿಯವರನ್ನು ಹೀಗೆ ಮರುಳುಗೊಳಿಸಿದ್ದಲ್ಲದೆ ಬರುಬರುತ್ತ ರಾಜಾಧಿಕಾರಿಗಳನ್ನು ಹೀಗೆಯೇ ಒಳಪಡಿಸಿಕೊಂಡು, ತನ್ನ ಪಾಪವೃತ್ತಿಯ ಫಲವಾಗಿ ಸಪ್ತಮನರಕಕ್ಕೆ ಸಂದನು. ಅಲ್ಲಿಂದ ಹೊರಟು ಬಂದು ತಿರ್ಯಕ್ ನಾರಕಗತಿಗಳಲ್ಲಿ ಸುತ್ತುತ್ತಲೇ ಇದ್ದನು. ಆಮೇಲೆ ಆಕಸ್ಮಿಕವಾಗಿ ಕಾಕತಾಲೀಯ ನ್ಯಾಯದಿಂದ ಮನುಷ್ಯ ಜನ್ಮ ಘಟಿಸಿತು. ಗಂಧಾವತೀನದಿಯ ತಟದಲ್ಲಿ ಗಂಧಮಾದನ ಪರ್ವತದ ಮೇಲೆ ಪರ್ವತಕನೆಂಬ ಭಿಲ್ಲನಾಗಿ ಹುಟ್ಟಿದನು. ಈತನ ಸತಿ ವಲ್ಲರಿ. ಆಕಸ್ಮಿಕವಾಗಿ ಆ ಪರ್ವತಕ್ಕೆ ಶ್ರೀಧರ ಮತ್ತು ಧರ್ಮ ಎಂಬ ಚಾರಣಮುನಿಗಳಿಬ್ಬರು ಬಂದರು. ಅವರನ್ನು ದರ್ಶನ ಮಾಡಿ ತತ್ಪರಿಣಾಮವಾಗಿ ಸ್ವಲ್ಪಮಟ್ಟಿಗೆ ಉಪಶಮಗೊಂಡಿದ್ದರಿಂದ ಮುನಿಗಳು ಆತನಿಂದ ಉಪವಾಸ ಹಿಡಿಸಿದರು. ಅಂತ್ಯದಲ್ಲಿ ಆತನು ಧರ್ಮಪೂರ್ವಕ ಮರಣ ಹೊಂದಿ, ವಿಜಯಾರ್ಧಗಿರಿಯ ಅಲಕಾನಗರಿಯಲ್ಲಿ ಖೇಚರದಂಪತಿಗಳಾದ ಮಹಾಬಲ ಜ್ಯೋತಿರ್ಮಾಲೆಯರಿಗೆ, ಶತಬಲಿಯ ಸೋದರನಾಗಿ, ಹರಿವಾಹನನೆಂಬ ಹೆಸರಿನ ಪುತ್ರನಾದನು.

ಒಮ್ಮೆ ಮಹಾಬಲರಾಜನು ಈ ತನ್ನ ಪುತ್ರರಿಗೆ ರಾಜ್ಯವೊಪ್ಪಿಸಿ ತಾನು ಶ್ರೀಧರಗುರುಗಳ ಬಳಿ ತಪೋದೀಕ್ಷೆಗೊಂಡು ಮೋಕ್ಷಕ್ಕೆ ಸಂದನು. ಯಾವುದೋ ಕಾರಣದಿಂದಾಗಿ ಶತಬಲಿ ಹರಿವಾಹನರಲ್ಲಿ ವೈಮನಸ್ಯವುಂಟಾಗಿ ಅಣ್ಣನಾದ ಶತಬಲಿ ತಮ್ಮನನ್ನು ಹೊರಡಿಸಿಬಿಟ್ಟನು. ನಿರ್ವಾಸಿತನಾದ ಹರಿವಾಹನನು ಭಗಲೀದೇಶದ ಅಂಬುದಾವರ್ತವೆಂಬ ಪರ್ವತದಲ್ಲಿರುತ್ತಿದ್ದನು. ಆ ಸಮಯಕ್ಕೆ ಅಲ್ಲಿಗೆ ಶ್ರೀಧರ್ಮ ಅನಂತವೀರ್ಯರೆಂಬ ಚಾರಣ ಮುನಿಗಳಿಬ್ಬರು ಬಂದರು. ಅವರನ್ನು ಸಂದರ್ಶಿಸಿ ಹರಿವಾಹನನು ದೀಕ್ಷೆಗೊಂಡನು. ಸಲ್ಲೇಖನವ್ರತದಿಂದ ಮಡಿದು ಈಶಾನ ಸ್ವರ್ಗದಲ್ಲಿ ಹುಟ್ಟಿದನು. ಅಲ್ಲಿಂದ ಚ್ಯುತನಾಗಿ ಬಂದ ಜೀವವೇ ಈಗ ಸುಕೇತು-ಸ್ವಯಂಪ್ರಭೆಯರಿಗೆ ಸತ್ಯಭಾಮೆಯೆಂಬ ಹೆಸರಿನ ನೀನು. ಈ ಜನ್ಮದಲ್ಲಿ ತಪಸ್ಸು ಮಾಡಿ ನೀನು ಅಂತ್ಯದಲ್ಲಿ ಉತ್ತಮದೇವನಾಗುತ್ತೀಯೆ. ಅಲ್ಲಿಂದ ಚ್ಯುತನಾಗಿ ಬಂದು, ಮತ್ತೆ ತಪವಾಚರಿಸಿ ಮೋಕ್ಷಕ್ಕೆ ಸಲ್ಲುತ್ತೀಯೆ.'' ಹೀಗೆ ನಿರೂಪಿಸಿದ ತನ್ನ ಭವಕಥನವನ್ನು ಸತ್ಯಭಾಮೆ ಕೇಳಿ ಆಸನ್ನಕಾಲದಲ್ಲಿಯೇ ತನಗೆ ಮೋಕ್ಷಲಾಭವಾಗುವುದೆಂದು ಹರ್ಷಿಸಿ ಜಿನನಿಗೆ ವಂದಿಸಿದಳು.

ಆಮೇಲೆ ರುಕ್ಮಿಣಿ ತನ್ನ ಪೂರ್ವಭವಗಳನ್ನು ಪ್ರಶ್ನಿಸಲು ನೇಮಿನಾಥನು ಅದನ್ನು ಹೀಗೆ ಹೇಳಲುಪಕ್ರಮಿಸಿದನು : ''ಇದೇ ಭರತಕ್ಷೇತ್ರದ ಮಗಧದೇಶದಲ್ಲಿ ಲಕ್ಷ್ಮಿ ಎಂಬೊಂದು ಗ್ರಾಮವುಂಟು. ಅದರಲ್ಲಿ ಸೋಮದೇವನೆಂದೊಬ್ಬ ಬ್ರಾಹ್ಮಣನಿದ್ದನು. ಇವನಿಗೆ ಲಕ್ಷ್ಮೀಮತಿ ಎಂಬವಳು ಪತ್ನಿ. ಈಕೆ ರೂಪಮದ ಗರ್ವಿತೆಯಾಗಿ ಪೂಜ್ಯರ ಬಗೆಗೂ ಅಲಕ್ಷ್ಯದಿಂದಿರುತ್ತಿದ್ದಳು. ಚಿತ್ತಾಪಹಾರಿಣಿಯಾದ ಈಕೆ ಒಂದು ದಿನ ಅಲಂಕಾರಮಾಡಿಕೊಂಡು ಮಣಿದರ್ಪಣದಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತಿರುವ ಹೊತ್ತಿಗೆ ಸಮಾಧಿಗುಪ್ತರೆಂಬ ಮುನಿಗಳು ಭಿಕ್ಷಾರ್ಥಿಗಳಾಗಿ ಆಯೆಡೆಗೆ ಬಂದರು. ಲಕ್ಷ್ಮೀಮತಿ ಅವರನ್ನು ನೋಡಿ ಗ್ಲಾನಿಯುಕ್ತಳಾಗಿ ನಿಂದಿಸಿದಳು. ಮುನಿನಿಂದೆಯ ಮಹಾಪಾಪದಿಂದಾಗಿ ಏಳು ದಿನಗಳೊಳಗೆ ಆಕೆಗೆ ಉದುಂಬರ ಕುಷ್ಠ ಬಂದು, ಅದರ ಬಾಧೆಯನ್ನು ತಡೆಯಲಾರದೆ ಅಗ್ನಿಪ್ರವೇಶಮಾಡಿ ಸತ್ತಳು. ಆರ್ತಧ್ಯಾನದಿಂದ ಸತ್ತು ಹೆಣ್ಣುಕತ್ತೆಯಾದಳು. ಆಗ ಅದರ ಮೇಲೆ ಉಪ್ಪು ಹೊರಿಸಲಾಗುತ್ತಿತ್ತು. ಅದರ ಭಾರಕ್ಕೆ ಆ ಕತ್ತೆ ತಡೆಯದೆ ಸತ್ತು ಮಾನಕಷಾಯ ದೋಷದಿಂದ ರಾಜಗೃಹನಗರದಲ್ಲಿ ಹೆಣ್ಣುಹಂದಿಯಾಯಿತು. ಆಗಲೂ ಜನರು ಅದನ್ನು ಕೊಂದಿಕ್ಕೆ, ಅದು ಸತ್ತು, ದನದ ಕೊಟ್ಟಿಗೆಯಲ್ಲಿ ಹೆಣ್ಣುನಾಯಾಯಿತು. ಒಂದು ದಿನ ಆ ಕೊಟ್ಟಿಗೆಗೆ ಉಗ್ರದಾವಾಗ್ನಿ ಹೊತ್ತಿ, ಈ ನಾಯಿ ಅದರಲ್ಲಿ ಸಿಕ್ಕಿ ಸತ್ತಿತು. ಹಾಗೆ ಸತ್ತು ಮಂಡೂಕಗ್ರಾಮದಲ್ಲಿ ತ್ರಿಪದನೆಂಬ ಬೆಸ್ತನಿಗೆ ಮಂಡೂಕಿ ಎಂಬ ಆತನ ಹೆಂಡತಿಯಲ್ಲಿ ಪೂತಿಗಂಧಿಕಾ ಎಂಬ ಹೆಸರಿನ ಮಗಳಾಯಿತು. ಶಿಶುವಿನ ಪಾಪದಿಂದಾಗಿ ಆ ಕನ್ಯೆಯ ತಾಯಿ ಸತ್ತು, ಶಿಶುವನ್ನು ಪಿತಾಮಹಿ ಸಾಕಿ ಸಲಹಿದಳು. ಒಂದು ದಿನ ಇವರ ಮನೆಯ ಉಪವನದಲ್ಲಿ ಅದೇ ಸಮಾಧಿಗುಪ್ತಮುನಿ ವಿಹಾರಿಸುತ್ತ ಒಂದು ಆಲದ ಮರದಡಿಯಲ್ಲಿ ವಿಶ್ರಾಂತಿಗೊಂಡರು. ರಾತ್ರಿಯ ವೇಳೆ ಶೀತಾಧಿಕ್ಯವನ್ನು ನೋಡಿ ಪೂತಿಗಂಧೆ ಆ ಮುನಿಗೆ ತನ್ನ ಬಲೆಯನ್ನೆ

ಹೊದಿಸಿದಳು. ಮುನಿ ಅವಧಿಜ್ಞಾನಿಯಾದ್ದರಿಂದ ಅವಳ ಪಾಡರಿತು ಕರುಣೆಯುಕ್ಕಿ, ಆಕೆಗೆ ತಿಳಿವಳಿಕೆ ಹೇಳಿ, ಅವಳ ಪೂರ್ವಭವಗಳನ್ನು ತಿಳಿಸಿದನು. ಅವಳು ಜಿನಧರ್ಮವನ್ನು ಸ್ವೀಕರಿಸಿದಳು. ಒಮ್ಮೆ ಆ ಪೂತಿಗಂಧೆ ಸೊಪಾರಕ ನಗರಕ್ಕೆ ಹೋದಳು. ಅಲ್ಲಿ ಆರ್ಯಿಕೆಯರನ್ನು ಉಪಾಸಿಸಿ ಅವರೊಡನೆಯೇ ಆಚಾಮ್ಲವರ್ಧನ ತಪವನ್ನು ಕೈಗೊಂಡು ರಾಜಗೃಹನಗರಕ್ಕೆ ಹೋದಳು. ಅಲ್ಲಿದ್ದ ಸಿದ್ಧಶಿಲೆಯನ್ನು ವಂದಿಸಿ, ಅಲ್ಲಿಯೇ ನೀಲಗುಹೆಯಲ್ಲಿದ್ದುಕೊಂಡು ಸಲ್ಲೇಖನ ವ್ರತದಿಂದ ಪ್ರಾಣಪರಿತ್ಯಾಗಮಾಡಿದಳು; ೧೬ನೆಯ ಸ್ವರ್ಗದಲ್ಲಿ ಅಚ್ಯುತೇಂದ್ರನಿಗೆ ಗಗನವಲ್ಲಭೆಯೆಂಬ ಮಹಾದೇವಿಯಾದಳು. ಅಲ್ಲಿ ಸುಖಾನುಭವಮಾಡಿ ಚ್ಯುತಳಾಗಿ ಬಂದು ಈಗ ಆ ನೀನೇ ರುಕ್ಮಿಣಿಯಾಗಿ ಕುಂಡಿನಪುರದಲ್ಲಿ ಭೀಷ್ಮರಾಜನಿಗೆ ಶ್ರೀಮತಿಯೆಂಬ ಆತನ ಸತಿಯಲ್ಲಿ, ರುಕ್ಮಿಗೆ ಸೋದರಿಯಾಗಿ, ಜನಿಸಿದ್ದೀಯೆ. ಈ ಉತ್ತಮಜನ್ಮದಲ್ಲಿ ನೀನು ದೀಕ್ಷಾಗ್ರಹಣಮಾಡಿ ಉತ್ತಮ ದೇವನಾಗುತ್ತೀಯೆ. ಅಲ್ಲಿಂದ ಚ್ಯುತವಾದ ಮೇಲೆ ನಿರ್ಗ್ರಂಥತಪವಾಚರಿಸಿ ತಪ್ಪದೆ ಮೋಕ್ಷ ಗಳಿಸುತ್ತೀಯೆ." ಹೀಗೆ ನಿರೂಪಿಸಿದ ಪೂರ್ವಭವ ಕಥನವನ್ನು ಕೇಳಿ ರುಕ್ಮಿಣಿ ಉಗ್ರಸಂಸಾರಕ್ಕೆ ಬೆದರಿ, ತನಗೆ ಅಲ್ಪಕಾಲದಲ್ಲಿಯೇ ಮೋಕ್ಷವಾಗಲಿದೆಯೆಂದು ತಿಳಿದು ನಲಿದಳು.

ಆಮೇಲೆ ಕೃಷ್ಣನ ೩ನೆಯ ಪಟ್ಟಮಹಿಷಿ ಜಾಂಬವತಿ ತನ್ನ ಪೂರ್ವಭವಗಳನ್ನು ಪ್ರಶ್ನಿಸಲಾಗಿ ನೇಮಿನಾಥನು ಅದನ್ನು ಹೀಗೆ ನಿರೂಪಿಸಿದನು: ''ಜಂಬೂದ್ವೀಪದಲ್ಲಿ ಪುಷ್ಕಲಾವತೀ ವಿಷಯದಲ್ಲಿ ವೀತಶೋಕೆಯೆಂಬೊಂದು ನಗರವುಂಟು. ಅದರಲ್ಲಿ ದೇವಿಲನೆಂಬ ಒಬ್ಬ ಗೃಹಸ್ಥ. ಅವನಿಗೆ ದೇವಮತಿ ಎಂಬ ಪತ್ನಿಯಲ್ಲಿ ನೀನು ಯಶಸ್ವಿನಿಯೆಂಬ ಮಗಳಾಗಿ ಹುಟ್ಟಿದೆ. ಈ ಯಶಸ್ವಿನಿಯನ್ನು ಗೃಹಪತಿಯ ಪುತ್ರ ಸುಮಿತ್ರನಿಗೆ ಕೊಡಲಾಗಿತ್ತು. ಆದರೆ ಪತಿಯು ತೀರಿಹೋಗಲು ಆಕೆ ದುಃಖಿಯಾದಳು. ಯಾರೋ ಜಿನದೇವನೆಂಬ ಒಬ್ಬ ಜೈನನು ಆಕೆಗೆ ಉಪದೇಶವಿತ್ತು ಸಮಾಧಾನಗೊಳಿಸಿದನು. ಆದರೆ ಮೋಹೋದಯದಿಂದಾಗಿ ಆಕೆಗೆ ಸಮ್ಯಗ್ದರ್ಶನ ಸಾಧ್ಯವಾಗಲಿಲ್ಲ. ಆ ಪತಿವ್ರತೆ ಲೌಕಿಕವಾಗಿ ದಾನೋಪವಾಸಗಳನ್ನು ಮಾಡುತ್ತಿದ್ದು, ಸತ್ತಮೇಲೆ ಅದರ ಪ್ರಭಾವದಿಂದಾಗಿ ನಂದನವನದಲ್ಲಿ ವ್ಯಂತರದೇವನಿಗೆ ಮೇರುನಂದನಾ ಎಂಬ ಸತಿಯಾದಳು. ೩೦,೦೮೦ ವರ್ಷಕಾಲ ಅಲ್ಲಿಯ ಭೋಗವನ್ನನುಭವಿಸಿ ಹಲಗಾಲ ಸಂಸಾರದಲ್ಲಿ ಸುತ್ತುತ್ತಲೇ ಇದ್ದಳು. ಆಮೇಲೆ ಇದೇ ಜಂಬೂದ್ವೀಪದಲ್ಲಿ ಐರಾವತ ಕ್ಷೇತ್ರದಲ್ಲಿ ವಿಜಯಪುರನಗರದ ಅರಸು ಬಂಧುಷೇಣನಿಗೆ ಬಂಧುಮತಿಯೆಂಬ ಆತನ ಪತ್ನಿಯಲ್ಲಿ ಬಂಧುಯಶೆಯೆಂಬ ಹೆಸರಿನ ಮಗಳಾದಳು. ಆಕೆ ಕನ್ಯಾವಸ್ಥೆಯಲ್ಲಿಯೇ ಶ್ರೀಮತಿಯೆಂಬ ಆರ್ಯಿಕೆಯಿಂದ ಪ್ರೋಷಧ ವ್ರತವನ್ನು ಧರಿಸಿ, ತತ್ಫಲವಾಗಿ ಸತ್ತಮೇಲೆ ಕುಬೇರನಿಗೆ ಸ್ವಯಂಪ್ರಭೆಯೆಂಬ ಸತಿಯಾಗಿ ಜನಿಸಿದಳು. ಆಯುರಂತ್ಯದಲ್ಲಿ ಅಲ್ಲಿಂದ ಚ್ಯುತಳಾಗಿ ಬಂದು ಜಂಬೂದ್ವೀಪದ ಪುಂಡರೀಕಿಣಿಯೆಂಬ ನಗರದಲ್ಲಿ ವಜ್ರಮುಷ್ಟಿ ಎಂಬವನಿಗೆ ಸುಭದ್ರೆಯೆಂಬ ಸತಿಯಲ್ಲಿ ಸುಮತಿ ಎಂಬ ಮಗಳಾಗಿ ಜನಿಸಿದಳು. ಅಲ್ಲಿ ಆಕೆ ಸುಂದರಿಯೆಂಬ ಆರ್ಯಿಕೆಯಿಂದ ಪ್ರೇರಿತಳಾಗಿ ಆಕೆಯ ಸಮೀಪದಲ್ಲೇ ರತ್ನಾವಲಿಯೆಂಬ ತಪಸ್ಸುಮಾಡಿ, ಸತ್ತಮೇಲೆ

೧೩ ಪಲ್ಯ ಆಯುಃಪ್ರಮಾಣ ಪಡೆದು ಬ್ರಹ್ಮೇಂದ್ರನಿಗೆ ಪ್ರಧಾನ ಇಂದ್ರಾಣಿಯಾದಳು. ಅಲ್ಲಿಂದ ಚ್ಯುತಳಾಗಿ ಬಂದು ಭರತಕ್ಷೇತ್ರದ ವಿಜಯಾರ್ಧದ ದಕ್ಷಿಣಶ್ರೇಣಿಯಲ್ಲಿ ಜಾಂಬವ ನಗರದ ವಿದ್ಯಾಧರರಾಜನಾದ ಜಾಂಬವನೆಂಬವನಿಗೆ ಜಾಂಬವತಿಯೆಂಬ ಆತನ ಸತಿಯಲ್ಲಿ ಜಾಂಬವತಿಯೆಂಬ ಮಗಳಾಗಿರುವೆ. ಈ ಭವದಲ್ಲಿ ನೀನು ತಪಸ್ವಿನಿಯಾಗಿ ತಪವಾಚರಿಸಿ ಸ್ವರ್ಗದಲ್ಲಿ ಉತ್ತಮದೇವನಾಗಿ ಹುಟ್ಟಿ, ಅಲ್ಲಿಂದ ಚ್ಯುತವಾಗಿ ಬಂದು ರಾಜಪುತ್ರನಾಗುವೆ. ಮತ್ತೆ ತಪಸ್ಸುಮಾಡಿ ಮೋಕ್ಷಗಳಿಸುವೆ.'' ಹೀಗೆ ನಿರೂಪಿಸಿದ ಭವಕಥನವನ್ನು ಕೇಳಿ ಜಾಂಬವತಿ ನಲಿದು "ನಾನು ಸಂಸಾರದಿಂದ ಬಿಡುಗಡೆಯಾದೆ" ಎಂದು ಆನಂದಿಸಿದಳು,

ಇದಾದ ಮೇಲೆ ನೇಮಿನಾಥನು ಕೃಷ್ಣನ ನಾಲ್ಕನೆಯ ರಾಣಿ ಸುಸೀಮೆಯು ಪ್ರಶ್ನಿಸಲಾಗಿ, ಆಕೆಗೆ ಆಕೆಯ ಪೂರ್ವಭವಗಳನ್ನು ನಿರೂಪಿಸಿದನು : ''ಧಾತಕೀಖಂಡದ್ವೀಪದ ಪೂರ್ವಾರ್ಧದಲ್ಲಿರುವ ಮೇರುಪರ್ವತದ ಪೂರ್ವದಿಕ್ಕಿಗೆ ಸೇರಿದ ವಿದೇಹ ಕ್ಷೇತ್ರದಲ್ಲಿ ಮಂಗಲಾವತಿ ಎಂಬುದೊಂದು ದೇಶ. ಅದರ ರತ್ನಸಂಚಯನಗರದಲ್ಲಿ ಹಿಂದೊಮ್ಮೆ ವಿಶ್ವಸೇನನೆಂಬ ಅರಸಿದ್ದನು. ಈತನ ಪತ್ನಿ ಅನುಂಧರಿ. ಈ ದೊರೆಯ ಮಂತ್ರಿ ಸುಮತಿ. ಈತ ಶ್ರಾವಕಧರ್ಮವನ್ನು ಪಾಲಿಸುತ್ತಿದ್ದನು. ಆಕಸ್ಮಿಕವಾಗಿ ಅಯೋಧ್ಯೆಯ ಅರಸು ಪದ್ಮಸೇನನು ವಿಶ್ವಸೇನನನ್ನು ಯುದ್ಧದಲ್ಲಿ ಕೊಂದದ್ದರಿಂದ ಅನುಂಧರಿ ದುಃಖಿತೆಯಾದಳು. ಸುಮತಿ ಮಂತ್ರಿಯು ಅವಳಿಗೆ ಧರ್ಮೋಪದೇಶ ನೀಡಿದನಾದರೂ ಮೋಹಕಾರಣವಾಗಿ ಆಕೆಗೆ ಸಮ್ಯಗ್ದರ್ಶನ ಸಾಧ್ಯವಾಗಲಿಲ್ಲ. ಆಯುರಂತ್ಯದಲ್ಲಿ ಆಕೆ ಸತ್ತು ವಿಜಯದ್ವಾರಪುರದ ನಿವಾಸಿ ವಿಜಯನೆಂಬ ವ್ಯಂತರದೇವನಿಗೆ ಜ್ವಲನವೇಗಾ ಎಂಬ ಸತಿಯಾದಳು. ಹತ್ತು ಸಾವಿರವರ್ಷ ಅಲ್ಲಿ ಸುಖಾನುಭವ ಮಾಡಿ, ಚ್ಯುತೆಯಾಗಿ ಬಂದು, ಹಲಗಾಲ ಸಂಸಾರಸಾಗರದಲ್ಲಿ ಸುತ್ತಾಡುತ್ತಲೇ ಇದ್ದಳು. ಆಮೇಲೆ ಜಂಬೂದ್ವೀಪದ ವಿದೇಹ ಕ್ಷೇತ್ರದ ಸೀತಾನದಿಯ ದಕ್ಷಿಣತಟದಲ್ಲಿಯ ರಮ್ಯವೆಂಬ ಸುಂದರಕ್ಷೇತ್ರಕ್ಕೆ ಸೇರಿದ ಶಾಲಿಗ್ರಾಮ ನಿವಾಸಿ ಯಕ್ಷಿಲನೆಂಬ ಗೃಹಸ್ಥನಿಗೆ ಆತನ ಸತಿ ದೇವಸೇನೆಯಲ್ಲಿ ಮಗಳಾಗಿ ಹುಟ್ಟಿದಳು. ಯಕ್ಷನನ್ನು ಆರಾಧಿಸಿದ ಫಲವಾಗಿ ಈ ಮಗಳು ಹುಟ್ಟಿದ್ದರಿಂದ ಈಕೆಗೆ ಯಕ್ಷದೇವಿಯೆಂಬ ಹೆಸರಾಯಿತು. ಒಮ್ಮೆ ಈಕೆ ಯಕ್ಷಗೃಹದ ಪೂಜೆಗಾಗಿ ಹೋಗಿರಲು, ಅಲ್ಲಿ ಧರ್ಮಸೇನ ಗುರುವಿನ ಬಳಿ ಧರ್ಮೋಪದೇಶ ಪಡೆದಳು. ಇದಾದ ಮೇಲೆ ಮತ್ತೊಮ್ಮೆ ಈಕೆ ಇದೇ ಮುನಿಗೆ ಆಹಾರದಾನ ಮಾಡಿದಳು. ಫಲವಾಗಿ ಪುಣ್ಯಬಂಧವನ್ನು ಕಟ್ಟಿಕೊಂಡಳು. ಒಮ್ಮೆ ಈ ಯಕ್ಷದೇವಿ ಗೆಳತಿಯರೊಂದಿಗೆ ಕ್ರೀಡಾರ್ಥವಾಗಿ ವಿಮಲಪರ್ವತಕ್ಕೆ ಹೋದಳು. ಆಗ ಅಕಾಲವರ್ಷವುಂಟಾಗಿ ರಕ್ಷಣೆಗೆಂದು ಒಂದು ಗುಹೆಯನ್ನು ಹೊಕ್ಕಳು. ಆ ಗುಹೆಯಲ್ಲಿ ಆ ಮೊದಲೇ ಇದ್ದ ಸಿಂಹವೊಂದು ಅವಳನ್ನು ನೋಡುತ್ತಲೇ ಕೊಂದು ತಿಂದಿತು. ಯಕ್ಷದೇವಿ ಹೀಗೆ ಸತ್ತು ಹರಿವರ್ಷಕ್ಷೇತ್ರದಲ್ಲಿ ದ್ವಿಪಲ್ಯ ಆಯುಃಪ್ರಮಾಣ ಪಡೆದು ಆರ್ಯೆಯಾದಳು. ಅಲ್ಲೀದ ಚ್ಯುತೆಯಾಗಿ ಜ್ಯೋತಿರ್ಲೋಕದಲ್ಲಿ ಏಕಪಲ್ಯಾಯುಃಪ್ರಮಾಣದ ದೇವಿಯಾದಳು. ಅಲ್ಲಿಂದ ಚ್ಯುತಳಾಗಿ ಜಂಬೂದ್ವೀಪದ ಭರತಕ್ಷೇತ್ರದ

ಪುಷ್ಕಲಾವತೀ ವಿಷಯದಲ್ಲಿಯ ವೀತಶೋಕಾನಗರದ ಅರಸು ಅಶೋಕನಿಗೆ ಆತನ ಸತಿ ಶ್ರೀಮತಿಯಲ್ಲಿ ಶ್ರೀಕಾಂತೆಯೆಂಬ ಮಗಳಾದಳು. ಶ್ರೀಕಾಂತೆ ಕನ್ಯಾವಸ್ಥೆಯಲ್ಲಿಯೇ ಜಿನದತ್ತಾರ್ಯಿಕೆಯ ಬಳಿ ದೀಕ್ಷೆಗೊಂಡು ರತ್ನಾವಳೀತಪವಾಚರಿಸಿ ಬಳಿಕ ಮಾಹೇಂದ್ರ ಸ್ವರ್ಗದ ಇಂದ್ರನಿಗೆ ಪ್ರಿಯಪತ್ನಿಯಾಗಿ ಹುಟ್ಟಿದಳು. ಅಲ್ಲಿ ೧೧ಪಲ್ಯ ಆಯುಸ್ಸು ತೀರುತ್ತಲೂ ಚ್ಯುತಳಾಗಿ ಬಂದು ಸುರಾಷ್ಟ್ರವಿಷಯದ ಗಿರಿನಗರದಲ್ಲಿ ರಾಷ್ಟ್ರವರ್ಧನ ರಾಜನಿಗೆ ಸುಜ್ಯೇಷ್ಠಾ ಎಂಬ ರಾಣಿಯಲ್ಲಿ ಸುಸೀಮೆಯೆಂಬ ಮಗಳಾಗಿ ಹುಟ್ಟಿರುವವಳೇ ನೀನು. ನೀನು ತಪಃಪ್ರಭಾವದಿಂದ ದೇವನಾಗಿ, ಆಮೇಲೆ ಮನುಷ್ಯಜನ್ಮ ಪಡೆದು ಮೋಕ್ಷಭಾಗಿಯಾಗುತ್ತೀಯೆ." ಸುಸೀಮೆಯು ಈ ಭವಕಥನವನ್ನು ಕೇಳಿ ಪ್ರಸನ್ನಳಾದಳು.

ಈಗ ಲಕ್ಷ್ಮಣಾ ಎಂಬ ಕೃಷ್ಣನ ೫ನೆಯ ಪಟ್ಟಮಹಿಷಿ ತನ್ನ ಪೂರ್ವಭವಕಥನವನ್ನು ಪ್ರಶ್ನಿಸಲು ನೇಮಿ ನಿರೂಪಿಸಿದನು : ''ಇದೇ ಜಂಬೂದ್ವೀಪದಲ್ಲಿ ಸೀತಾನದಿಯ ಉತ್ತರತಟದ ಮೇಲೆ ಕಚ್ಛಕಾವತೀ ವಿಷಯವುಂಟು. ಅದರ ಅರಿಷ್ಟಪುರ ನಗರದಲ್ಲಿ ಹಿಂದೊಮ್ಮೆ ವಾಸವನೆಂಬ ಅರಸಿದ್ದನು. ಅವನ ಪತ್ನಿ ಸುಮಿತ್ರೆ. ಒಂದು ದಿನ ಆಕೆ ತನ್ನ ಪತಿಯೊಡನೆ ಸಹಸ್ರಾಮ್ರ ವನದಲ್ಲಿದ್ದ ಸಾಗರಸೇನರೆಂಬ ಮುನಿಗಳ ವಂದನಾರ್ಥವಾಗಿ ಹೋದಳು. ವಾಸವನು ಮುನಿಯಿಂದ ಧರ್ಮಶ್ರವಣಮಾಡಿ ವೈರಾಗ್ಯಗೊಂಡು ವಸುಸೇನನೆಂಬ ಮಗನಿಗೆ ರಾಜ್ಯವೊಪ್ಪಿಸಿ ತಾನು ದೀಕ್ಷೆ ತಳೆದನು. ಸುಮಿತ್ರೆಗೆ ಪುತ್ರಮೋಹದಿಂದಾಗಿ ದೀಕ್ಷೆ ವಹಿಸುವುದಾಗಲಿಲ್ಲ. ಆಕಸ್ಮಿಕವಾಗಿ ಆಕೆಗೆ ಪುತ್ರವಿಯೋಗವುಂಟಾಗಿ ಪತಿಪುತ್ರರ ವಿಯೋಗದುಃಖದಿಂದ ನೊಂದು ಸತ್ತು, ಬೇಡಿತಿಯಾಗಿ ಹುಟ್ಟಿದಳು. ಒಂದು ದಿನ ಈ ಬೇಡಿತಿ ಅವಧಿಜ್ಞಾನಿಗಳಾದ ನಂದಿಭದ್ರರೆಂಬ ಚಾರಣಮುನಿಯನ್ನು ದರ್ಶಿಸಿ ತನ್ನ ಪೂರ್ವಭವವನ್ನು ಪ್ರಶ್ನಿಸಿದಳು. ಹಾಗೆ ಜಾತಿಸ್ಮರೆಯಾಗಿ ತ್ರಿದಿನೋಪವಾಸಗೊಂಡು ಸತ್ತು ನಾರದನೆಂಬ ದೇವನಿಗೆ ಮೇಘಮಾಲಿನಿಯೆಂಬ ಸತಿಯಾದಳು. ಆಮೇಲೆ ಅಲ್ಲಿಂದ ಬಂದು ಭರತಕ್ಷೇತ್ರದ ದಕ್ಷಿಣತಟದಲ್ಲಿ ಚಂದನಪುರದಲ್ಲಿ ಮಹೇಂದ್ರನೆಂಬರಸಿಗೆ ಅನುಂಧರಿಯೆಂಬ ರಾಣಿಯಲ್ಲಿ ಕನಕಮಾಲೆಯೆಂಬ ಮಗಳಾದಳು. ಈಕೆ ಸ್ವಯಂವರದಲ್ಲಿ ಮಹೇಂದ್ರನಗರದ ಅರಸು ಹರಿವಾಹನನೆಂಬ ವಿದ್ಯಾಧರನನ್ನು ವರಿಸಿ ಆತನ ಸತಿಯಾದಳು. ಆಮೇಲೆ ಒಮ್ಮೆ ಈಕೆ ಚೈತ್ಯಪೂಜಾರ್ಥವಾಗಿ ಸಿದ್ಧಕೂಟಕ್ಕೆ ಹೋಗಿದ್ದಳು. ಅಲ್ಲಿ ಚಾರಣಮುನಿಯಿಂದ ತನ್ನ ಪೂರ್ವಭವವನ್ನು ಕೇಳಿ ಆರ್ಯಿಕೆಯಾದಳು. ಮುಕ್ತಾವಲೀತಪವಾಚರಿಸಿ ಸನತ್ಕುಮಾರ ಕಲ್ಪದಲ್ಲಿಯ ಇಂದ್ರನಿಗೆ ಸತಿಯಾದಳು. ೯ ಪಲ್ಯ ಕಾಲ ಅಲ್ಲಿ ಸುಖಭೋಗಮಾಡಿ ಬಂದು ಈಗ ಶ್ಲಕ್ಷ್ಣರೋಮನಿಗೆ ಕುರುಮತಿ ರಾಣಿಯಲ್ಲಿ ಲಕ್ಷ್ಮಣಾ ಎಂಬ ಪುತ್ರಿಯಾದೆ. ಮೂರನೆಯ ಭವದಲ್ಲಿ ನಿನಗೆ ಮೋಕ್ಷವಾಗುವುದು.'' ಹೀಗೆನ್ನಲು ಲಕ್ಷ್ಮಣೆ ತನ್ನ ಭವಾವಳಿ ತಿಳಿದು ನೇಮಿಗೆ ವಂದಿಸಿದಳು.

ಆಮೇಲೆ ಕೃಷ್ಣನ ೬ನೆಯ ಪಟ್ಟಮಹಿಷಿ ಗಾಂಧಾರಿಯ ಪ್ರಶ್ನೆಗೆ ಅವಳ ಭವಗಳನ್ನು ನೇಮಿ ಹೀಗೆ ನಿರೂಪಿಸಿದನು ''ಕೋಶಲದೇಶದ ಅಯೋಧ್ಯೆಯಲ್ಲಿ ಹಿಂದೆ ರುದ್ರದತ್ತನೆಂಬ ಅರಸಿದ್ದನು. ಪತ್ನಿ ವಿನಯಶ್ರೀ. ಆಕೆ ಒಮ್ಮೆ ಸಿದ್ಧಾರ್ಥಕ ವನದಲ್ಲಿ

ಶ್ರೀಧರ ಮುನಿಗೆ ಪತಿಯೊಡಗೂಡಿ ಆಹಾರ ನೀಡಿದಳು. ಸತ್ತ ಮೇಲೆ ದಾನದ ಪರಿಣಾಮವಾಗಿ ಉತ್ತರ ಕುರುವಿನಲ್ಲಿ ತ್ರಿಪಲ್ಯಾಯು ಪಡೆದು ಆರ್ಯೆಯಾದಳು. ಆಮೇಲೆ ಪಲ್ಯಾಷ್ಟಮ ಭಾಗದ ಆಯು ಪಡೆದು ಚಂದ್ರಮನಿಗೆ ಪ್ರಿಯೆಯಾದಳು. ಆಮೇಲೆ ಇದೇ ವಿಜಯಾರ್ಧದ ಉತ್ತರಶ್ರೇಣಿಯಲ್ಲಿ ಗಗನವಲ್ಲಭನಗರದ ಸ್ವಾಮಿ ವಿದ್ಯುದ್ವೇಗನಿಗೆ ವಿದ್ಯುನ್ಮತಿಯೆಂಬ ರಾಣಿಯಲ್ಲಿ ವಿನಯಶ್ರೀ ಎಂಬ ಹೆಸರಿನ ಮಗಳಾದಳು. ಈ ಕನ್ಯೆಯನ್ನು ನಿತ್ಯಾಲೋಕ ನಗರದ ಅರಸು ಮಹೇಂದ್ರವಿಕ್ರಮನಿಗೆ ಕೊಡಲಾಯಿತು. ಒಮ್ಮೆ ಆಕಸ್ಮಿಕವಾಗಿ ಸುಮೇರು ಪರ್ವತದ ಮೇಲೆ ಚಾರಣಮುನಿಯುಗಳದಿಂದ ಧರ್ಮಶ್ರವಣ ಮಾಡಿ ಮಹೇಂದ್ರವಿಕ್ರಮನು ವೈರಾಗ್ಯಗೊಂಡು ಹರಿವಾಹನನೆಂಬ ಮಗನಿಗೆ ರಾಜ್ಯವೊಪ್ಪಿಸಿ ತಾನು ದೀಕ್ಷೆಗೊಂಡನು. ವಿನಯಶ್ರೀಯೂ ವಿರಕ್ತಳಾಗಿ ಸರ್ವಭದ್ರವೆಂಬ ಉಪವಾಸಮಾಡಿ ಅದರ ಪ್ರಭಾವದಿಂದ ಮುಂದೆ ೫ ಪಲ್ಯಾಯುವನ್ನು ಪಡೆದು ಸೌಧರ್ಮೇಂದ್ರನಿಗೆ ಸತಿಯಾದಳು. ಅಲ್ಲಿಂದ ಬಂದು ಈಗ ಗಾಂಧಾರದೇಶದ ಪುಷ್ಕಲಾವತಿ ನಗರದಲ್ಲಿಯ ಇಂದ್ರಗಿರಿಯೆಂಬರಸಿಗೆ ಸತಿ ಮೇರುಮತಿಯಲ್ಲಿ ಗಾಂಧಾರಿಯಾಗಿರುವವಳು ಆ ನೀನೇ. ನೀನು ಮೂರನೆಯ ಭವಕ್ಕೆ ಮೋಕ್ಷ ಗಳಿಸುತ್ತೀಯೆ.'' ಹೀಗೆ ಹೇಳಲು ಗಾಂಧಾರಿ ಜಿನನಿಗೆ ಮಣಿದಳು.

ಈಗ ಕೃಷ್ಣನ ೭ನೆಯ ಪಟ್ಟಮಹಿಷಿ ಗೌರಿಯ ಭವಾಂತರಗಳನ್ನು ನೇಮಿ ನಿರೂಪಿಸಿದನು : ''ಈ ಭರತಕ್ಷೇತ್ರದ ಇಭ್ಯಪುರ ನಗರದಲ್ಲಿ ಹಿಂದೊಮ್ಮೆ ಧನದೇವನೆಂಬ ವೈಶ್ಯನಿದ್ದನು. ಪತ್ನಿ ಯಶಸ್ವಿನಿ. ಒಂದು ದಿನ ಈಕೆ ಮನೆಯ ಮಾಳಿಗೆಯ ಮೇಲೆ ನಿಂತಿರುವಾಗ ಗಗನಚಾರಿಗಳಾದ ಇಬ್ಬರು ಚಾರಣಮುನಿಗಳನ್ನು ಕಂಡು ಜಾತಿಸ್ಮರಣೆಗೊಂಡಳು. 'ನಾನು ಧಾತಕೀಖಂಡ ದ್ವೀಪದ ಪೂರ್ವಮೇರುವಿನ ಪಶ್ಚಿಮದಿಕ್ಕಿನಲ್ಲಿಯ ವಿದೇಹಕ್ಷೇತ್ರದೊಳಗಣ ನಂದಶೋಕನಗರದಲ್ಲಿ ಆನಂದನೆಂಬ ವೈಶ್ಯನ ಸತಿಯಾಗಿದ್ದೆ. ಅಲ್ಲಿ ನನ್ನ ಪತಿಯ ಸಂಗಡ ಕೂಡಿ ಮಿತಸಾಗರಮುನಿಗೆ ಆಹಾರದಾನಮಾಡಿದೆ. ಆಗ ಪಂಚಾಶ್ಚರ್ಯಗಳಾದುವು. ಆಕಸ್ಮಿಕವಾಗಿ ನಾವಿಬ್ಬರೂ ಆಕಾಶದಿಂದ ಬೀಳುತ್ತಿದ್ದ ಮಳೆನೀರನ್ನು ಕುಡಿದೆವು. ಆ ನೀರು ವಿಷಯುಕ್ತವಾಗಿದ್ದುದರಿಂದ ಇಬ್ಬರೂ ಸತ್ತೆವು. ಬಳಿಕ ದೇವಕುರುವಿನಲ್ಲಿ ಆರ್ಯೆಯಾದೆ. ಆಮೇಲೆ ಈಶಾನೇಂದ್ರನ ಸತಿಯಾದೆ. ಈಗಿಲ್ಲಿ ಯಶಸ್ವಿನಿಯಾಗಿದ್ದೇನೆ' ಎಂದು ನೆನಪಾಯಿತು. ಸಂಸಾರಕ್ಕೆ ಬೆದರಿ ಸುಭದ್ರಮುನಿಯಿಂದ ಪ್ರೋಷಧವ್ರತ ಗ್ರಹಿಸಿದಳು. ಆಮೇಲೆ ಸತ್ತು ೫ ಪಲ್ಯಾಯುವನ್ನು ಪಡೆದು ಪ್ರಥಮಸ್ವರ್ಗದ ಇಂದ್ರನಿಗೆ ಇಂದ್ರಾಣಿಯಾದಳು. ಅಲ್ಲಿಂದ ಬಂದು ಕೌಶಂಬೀನಗರದಲ್ಲಿ ಸುಭದ್ರನೆಂಬ ವೈಶ್ಯನಿಗೆ ಸುಮಿತ್ರೆಯೆಂಬ ಸತಿಯಲ್ಲಿ ಧರ್ಮಮತಿ ಎಂಬ ಪುತ್ರಿಯಾದಳು. ಈಕೆ ಜಿನಮತಿ ಎಂಬ ಆರ್ಯಿಕೆಯ ಬಳಿ ಜಿನಗುಣವೆಂಬ ತಪಸ್ಸು ಹಿಡಿದು, ಮಹಾಶುಕ್ರಕಲ್ಪದ ಇಂದ್ರನಿಗೆ ಸತಿಯಾದಳು. ಅಲ್ಲಿ ೨೧ ಪಲ್ಯಾಯು ತೀರಿದ ಮೇಲೆ ಬಂದು ಈಗ ವೀತಶೋಕಾನಗರಿಯಲ್ಲಿ ಅರಸು ಮೇರುಚಂದ್ರನಿಗ್ಗೆ ಚಂದ್ರಮತಿಯೆಂಬ ಸತಿಯಲ್ಲಿ ಗೌರಿಯೆಂಬ ಹೆಸರಿನ ಪುತ್ರಿಯಾಗಿರುವೆ. ಇನ್ನು ಮೂರು ಭವಗಳಲ್ಲಿ ನಿನಗೆ ಮೋಕ್ಷವಾಗುವುದು'' ಎಂದನು.

ಆಮೇಲೆ ಕೃಷ್ಣನ ೮ನೆಯ ಪಟ್ಟಮಹಿಷಿ ಪದ್ಮಾವತಿಯ ಪೂರ್ವಭವಗಳನ್ನು ನೇಮಿ ನಿರೂಪಿಸಿದನು : ''ಇದೇ ಭರತಕ್ಷೇತ್ರದಲ್ಲಿ ಉಜ್ಜಯಿನಿನಗರದಲ್ಲಿ ಹಿಂದೊಮ್ಮೆ ಅಪರಾಜಿತನೆಂಬ ಅರಸಿದ್ದನು. ಇವನ ಪತ್ನಿ ವಿಜಯೆ. ಇವರ ಮಗಳು ವಿನಯಶ್ರೀ. ಈಕೆಯನ್ನು ಹಸ್ತಿಶೀರ್ಷಪುರದ ಅರಸು ಹರಿಷೇಣನಿಗೆ ಕೊಡಲಾಯಿತು. ಒಂದು ದಿನ ಆಕೆ ಪತಿಯೊಡನೆ ವರದತ್ತ ಮುನಿಗೆ ಆಹಾರದಾನಮಾಡಿದಳು. ಒಮ್ಮೆ ಪತಿಯೊಡನೆ ಗರ್ಭಗೃಹದಲ್ಲಿ ಮಲಗಿರುವಾಗ ಕಾಲಾಗುರುಧೂಪದಿಂದ ಉಸಿರುಕಟ್ಟಿ ಆಕೆ ಸತ್ತಳು. ಸತ್ತು ಹೈಮವತ ಕ್ಷೇತ್ರದಲ್ಲಿ ಏಕಪಲ್ಯಾಯುವಿನ ಆರ್ಯೆಯಾದಳು. ಅಲ್ಲಿಂದ ಬಂದು ಚಂದ್ರದೇವನಿಗೆ ಪಲ್ಯಾಷ್ಟಮಭಾಗ ಆಯು ಪಡೆದು, ಚಂದ್ರಪ್ರಭೆಯೆಂಬ ದೇವಿಯಾದಳು. ಆಮೇಲೆ ಭರತಕ್ಷೇತ್ರದ ಮಗಧದೇಶಕ್ಕೆ ಸೇರಿದ ಶಾಲ್ಮಲೀಖಂಡಗ್ರಾಮದಲ್ಲಿ ದೇವಿಲ ಮತ್ತು ಜಯದೇವಿ ಎಂಬ ದಂಪತಿಗಳಿಗೆ ಪದ್ಮದೇವಿ ಎಂಬ ಮಗಳಾದಳು. ಒಮ್ಮೆ ಈಕೆ ವರಧರ್ಮರೆಂಬ ಆಚಾರ್ಯರಿಂದ 'ನಾನು ಜೀವನಪರ್ಯಂತ ಅಜ್ಞಾತಫಲವನ್ನು ತಿನ್ನೆನು' ಎಂದು ವ್ರತ ಹಿಡಿದಳು. ಎಂದೋ ಒಂದು ದಿನ ಅಕಾಲದಲ್ಲಿ ಚಂಡಬಾಣನೆಂಬ ಭಿಲ್ಲನೊಬ್ಬನು ಶಾಲ್ಮಲೀಖಂಡ ಗ್ರಾಮದ ಮೇಲೆ ಆಕ್ರಮಣಮಾಡಿ ಅಲ್ಲಿಯ ಸಮಸ್ತಪ್ರಜೆಗಳನ್ನೂ ಕದ್ದೊಯ್ದನು. ಜತೆಗೇ ಪದ್ಮದೇವಿಯನ್ನೂ ಹಿಡಿದುಕೊಂಡು ಸೆರೆಯಿಟ್ಟನು. ಅವಳನ್ನು ತನ್ನ ಪತ್ನಿಯಾಗಿ ಮಾಡಿಕೊಳ್ಳಲು ಅವನು ಬಯಸುತ್ತಿದ್ದನು. ಆದರೆ ಆ ಶೀಲವತಿ ಅದನ್ನು ತಿರಸ್ಕರಿಸಿ ಬಿಟ್ಟಳು. ರಾಜಗೃಹದ ರಾಜನಾದ ಸಿಂಹರಥನು ಪಟ್ಟುಹಿಡಿದು ಆ ಭಿಲ್ಲನನ್ನು ಕೊಂದುಹಾಕಿದನು. ಇದರ ಪರಿಣಾಮವಾಗಿ ಬಂಧಮುಕ್ತರಾದ ಶಾಲ್ಮಲೀಖಂಡದ ಪ್ರಜೆಗಳೆಲ್ಲಾ ವನದಲ್ಲಿ ಅಲ್ಲಲ್ಲಿ ಸುಳಿದಾಡತೊಡಗಿದರು. ಮೂಢಮನಸ್ಕರಾದ ಆ ಜನ ದಿಗ್ಭ್ರಾಂತಿಗೊಂಡು ವನದಲ್ಲಿ ಮೃಗಗಳಂತೆ ತೊಳಲಾಡುತ್ತ ಹಸಿದು ಕಿಂಪಾಕಫಲವನ್ನು ತಿಂದು ಸತ್ತರು. ಪದ್ಮದೇವಿ ದೃಢವ್ರತೆಯಾದ್ದರಿಂದ, ಅಜ್ಞಾತಫಲವೆಂಬ ಕಾರಣದಿಂದ ತಾನೂ ಅದನ್ನು ತಿನ್ನದೆ, ಸಂನ್ಯಸನಗೊಂಡು ಸತ್ತು, ಹೈಮವತ ಕ್ಷೇತ್ರದಲ್ಲಿ ಏಕಪಲ್ಯಾಯುವಿನ ಆರ್ಯೆಯಾದಳು. ಆಮೇಲೆ ಸ್ವಯಂಭೂರಮಣದ್ವೀಪದ ಸ್ವಯಂಪ್ರಭಗಿರಿಯ ಮೇಲೆ ಸ್ವಯಂಪ್ರಭನೆಂಬ ವ್ಯಂತರದೇವನಿಗೆ ಸ್ವಯಂಪ್ರಭೆಯೆಂಬ ದೇವಿಯಾದಳು. ಅಲ್ಲಿಂದ ಬಂದು ಭರತಕ್ಷೇತ್ರದ ಜಯಂತನಗರದ ಅರಸು ಶ್ರೀಧರನಿಗೆ ಶ್ರೀಮತಿಯಲ್ಲಿ ವಿಮಲಶ್ರೀ ಎಂಬ ಮಗಳಾದಳು. ಈಕೆಯನ್ನು ಭದ್ರಿಲಪುರದರಸು ಮೇಘನಾದನಿಗೆ ಕೊಡಲಾಯಿತು. ಇವರ ಮಗ ಮೇಘಘೋಷ. ಹೀಗೆ ಇರುತ್ತಿರಲು. ಒಮ್ಮೆ ಪತಿ ಸ್ವರ್ಗಸ್ಥನಾಗಲು ವಿಮಲಶ್ರೀ ಪದ್ಮಾವತಿ ಆರ್ಯಿಕೆಯ ಬಳಿ ದೀಕ್ಷೆಗೊಂಡು ಆಚಾಮ್ಲವರ್ಧನ ತಪಸ್ಸುಮಾಡಿ, ಸತ್ತು ಸ್ವರ್ಗಕ್ಕೆ ಹೋದಳು. ಸಹಸ್ರಾರ ಸ್ವರ್ಗದ ಇಂದ್ರನಿಗೆ ಪ್ರಧಾನಸತಿಯಾದಳು. ಅಲ್ಲಿಂದ ಬಂದ ಮೇಲೆ ಆ ನೀನೇ ಅರಿಷ್ಟಪುರದರಸು ಸ್ವರ್ಣನಾಭನಿಗೆ ಶ್ರೀಮತಿಯಲ್ಲಿ ಪದ್ಮಾವತಿ ಎಂಬ ಮಗಳಾಗಿರುವೆ. ತಪಸ್ಸುಮಾಡಿ ಸ್ವರ್ಗದಲ್ಲಿ ದೇವನಾಗುವೆ. ಅಲ್ಲಿಂದ ಚ್ಯುತವಾಗಿ ಬಂದು ಮತ್ತೆ ತಪಸ್ಸಾಮರ್ಥ್ಯದಿಂದ ಮೋಕ್ಷ ಪಡೆಯುವೆ'' ಎಂದನು.

ರೋಹಿಣಿ, ದೇವಕಿ ಮುಂತಾದ ದೇವಿಯರೂ ಇತರ ಯಾದವರೂ ತಂತಮ್ಮ ಭವಗಳನ್ನು ಪ್ರಶ್ನಿಸಿ, ನೇಮಿಜಿನನಿಂದ ಅವನ್ನು ಕೇಳಿ ತಿಳಿದು, ಸಂಸಾರದ ಬಗೆಗೆ ಭೀತರಾದರು. ಈ ಪ್ರಕಾರವಾಗಿ ಯಾದವರೂ ಸುರಾಸುರರೂ ಜಿನೇಂದ್ರನನ್ನು ಸ್ತುತಿಸಿ, ವಂದಿಸಿ ಸ್ವಸ್ಥಾನಗಳಿಗೆ ತೆರಳಿದರು. ಪೂಜೆಗಾಗಿ ಆಗೀಗ ಬಂದು ಹೋಗುತ್ತಿದ್ದರು. ಆಮೇಲೆ ನೇಮಿಜಿನನು ಭವ್ಯಜೀವರ ಹಿತಕ್ಕಾಗಿ ಇನ್ನೂ ಅನೇಕ ದೇಶಗಳನ್ನು ವಿಹಾರಿಸುತ್ತಿದ್ದನು.

ಇತ್ತ ದೇವಕಿಯು ಕೃಷ್ಣನಾದ ಮೇಲೆ ಗಜಕುಮಾರನೆಂಬ ಮತ್ತೊಬ್ಬ ಮಗನನ್ನು ಪಡೆದಳು. ಇವನು ವಸುದೇವನಿಗೆ ಸಮಾನವಾಗಿ ತೇಜಸ್ವಿಯಾಗಿದ್ದನಲ್ಲದೆ ಕೃಷ್ಣನಿಗೆ ಪ್ರಿಯನೂ ಆಗಿದ್ದನು ಈತನು ಯೌವನಸ್ಥನಾಗುತ್ತಲೂ ಕೃಷ್ಣನು ಉತ್ತಮ ರಾಜಪುತ್ರಿಯರನ್ನು ತಂದು ಅವನಿಗೆ ವಿವಾಹಮಾಡಿಸಿದನು. ಸೋಮಶರ್ಮನೆಂಬ ಬ್ರಾಹ್ಮಣನಿಗೆ ಸೋಮೆಯೆಂಬ ಸುಂದರಿಯಾದ ಮಗಳಿದ್ದಳು. ಈಕೆ ಆ ವಿಪ್ರನಿಗೆ ಕ್ಷತ್ರಿಯಸ್ತ್ರೀಯಲ್ಲಿ ಜನಿಸಿದವಳು. ಕೃಷ್ಣನು ಗಜಕುಮಾರನಿಗೆ ಅವಳನ್ನು ತಂದುಕೊಂಡನು. ಈತನ ವಿವಾಹಸಮಯ ಸನ್ನಿಹಿತವಾಗಲು ಯಾದವರಿಗೆ ಪರಮಸಂತೋಷವಾಯಿತು. ಆ ವೇಳೆಗೆ ವಿಹಾರಿಸುತ್ತ ನೇಮಿನಾಥನೂ ದ್ವಾರಿಕೆಗೆ ಬಂದನು. ಹಾಗೆ ಬಂದು ರೈವತಕಪರ್ವತದಲ್ಲಿರಲು ಯಾದವರೆಲ್ಲ ಅರ್ಚನಾದ್ರವ್ಯಗಳನ್ನು ತೆಗೆದುಕೊಂಡು ಜಿನವಂದನಾರ್ಥವಾಗಿ ಅಲ್ಲಿಗೆ ತೆರಳಿದರು. ದ್ವಾರಿಕೆಯಲ್ಲಿ ನಡೆಯುತ್ತಿದ್ದ ಆ ಕೋಲಾಹಲವನ್ನು ಕಂಡು ಗಜಕುಮಾರನು ಯಾರೋ ಕಂಚುಕಿಯನ್ನು ಪ್ರಶ್ನಿಸಿ ಆತನಿಂದ ಪ್ರಾರಂಭದಿಂದ ನೇಮಿಜಿನನ ಸರ್ವಸಂಗತಿಗಳನ್ನೂ ಅರಿತುಕೊಂಡವನಾದನು. ಹಾಗೆ ಅರಿತುಕೊಂಡು ಹರ್ಷಪುಲಕಿತನಾಗಿ ತಾನೂ ಜಿನವಂದನೆಗೆ ರಥಾರೂಢನಾಗಿ ತೆರಳಿದನು. ಅಲ್ಲಿ ಆರ್ಹಂತ್ಯಲಕ್ಷ್ಮೀಯುತನಾಗಿ ದ್ವಾದಶಸಭಾಪರಿವೇಷ್ಟಿತನಾಗಿದ್ದ ಜಿನೇಂದ್ರನಿಗೆ ವಂದಿಸಿ ಕೃಷ್ಣನೊಂದಿಗೆ ಮನುಷ್ಯಸಭೆಯಲ್ಲಿ ಹೋಗಿ ಕುಳಿತನು. ನೇಮಿನಾಥನು ಆ ಸಭೆಯಲ್ಲಿ ಧರ್ಮನಿರೂಪಣೆ ಮಾಡಿದನು. ಸಮಯ ದೊರೆತಿರಲು ಶ್ರವಣಕುತೂಹಲಿಯಾಗಿ ಶ್ರೋತೃಗಳ ಅಪೇಕ್ಷೆಯಂತೆ ಕೃಷ್ಣನು ಜಿನೇಂದ್ರನನ್ನು ತೀರ್ಥಂಕರರ, ಚಕ್ರವರ್ತಿಗಳ, ಅರ್ಧಚಕ್ರವರ್ತಿಗಳ, ಬಲಭದ್ರರ, ಪ್ರತಿನಾರಾಯಣರ ಉತ್ಪತ್ತಿವಿಚಾರವನ್ನೂ ತೀರ್ಥಂಕರರ ನಡುವಿನ ಅಂತರವನ್ನೂ ಪ್ರಶ್ನೆಮಾಡಿದನು. ಆಮೇಲೆ ನೇಮಿ ಪ್ರಶ್ನೆಗನುಸಾರವಾಗಿ ಶ್ರೀಕೃಷ್ಣನಿಗಾಗಿ ತ್ರಿಷಷ್ಟಿಶಲಾಕಾಪುರುಷರಲ್ಲಿ ಪ್ರಮುಖರಾದ ೨೪ಮಂದಿ ತೀರ್ಥಂಕರರ ಉತ್ಪತ್ತಿಯನ್ನೂ ಹೀಗೆ ನಿರೂಪಿಸತೊಡಗಿದನು :

"ಈ ಯುಗದಲ್ಲಿ ಸರ್ವಪ್ರಥಮವಾಗಿ ವೃಷಭತೀರ್ಥಂಕರನಾದನು. ಅನಂತರದಲ್ಲಿ ಕ್ರಮವಾಗಿ ಅಜಿತನಾಥ, ಸಂಭವನಾಥ, ಅಭಿನಂದನನಾಥ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರಪ್ರಭ, ಸುವಿಧಿನಾಥ, ಶೀತಲನಾಥ, ಶ್ರೇಯೋನಾಥ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತನಾಥ, ನಮಿನಾಥ ಇವರು ಕಾಣಿಸಿ

ಕೊಂಡು ನಿರ್ವಾಣಪದವನ್ನು ಪಡೆದಿದ್ದಾರೆ. ನಾನು ಈಗಣ ಇಪ್ಪತ್ತನೆಯ ತೀರ್ಥಂಕರ ನೇಮಿನಾಥ. ಮುಂದೆ ಪಾರ್ಶ್ವನಾಥ ಮತ್ತು ಮಹಾವೀರ ಈ ಇಬ್ಬರೂ ಆಗಲಿರುವ ತೀರ್ಥಂಕರರು. ಇವರಲ್ಲಿ ವೃಷಭನೂ ಶಾಂತಿನಾಥನೂ ಪೂರ್ವಭವದಲ್ಲಿ ಜಂಬೂದ್ವೀಪಸಂಬಂಧಿ ವಿದೇಹ ಕ್ಷೇತ್ರದ ಪುಂಡರೀಕಿಣೀ ನಗರದಲ್ಲಿ, ಅಜಿತನು ಸುಸೀಮಾನಗರದಲ್ಲಿ, ಅರನಾಥನು ಕ್ಷೇಮಪುರಿಯಲ್ಲಿ, ಕುಂಥು ಸಂಭವ ಅಭಿನಂದನರು ರತ್ನಸಂಚಯನಗರದಲ್ಲಿ ಮಲ್ಲಿ ವೀತಶೋಕಾನಗರಿಯಲ್ಲಿ ಜನ್ಮ ತಳೆದರು. ಭರತಕ್ಷೇತ್ರದಲ್ಲಿ ಜನಿಸಿದ ಐವರು ತೀರ್ಥಂಕರರಲ್ಲಿ, ಮುನಿ ಸುವ್ರತನು ಚಂಪಾಪುರಿಯಲ್ಲಿ, ನಮಿ ಕೌಶಾಂಬೀನಗರದಲ್ಲಿ, ನೇಮಿ ಹಸ್ತಿನಾಪುರದಲ್ಲಿ, ಪಾರ್ಶ್ವನು ಅಯೋಧ್ಯೆಯಲ್ಲಿ, ಮಹಾವೀರನು ಛತ್ರಾಕಾರಪುರದಲ್ಲಿ, ಪೂರ್ವಭವದಲ್ಲಿ ಉತ್ಪನ್ನರಾದರು. ಧಾತಕೀಖಂಡ ದ್ವೀಪದ ಪೂರ್ವಾರ್ಧದಲ್ಲಿ ಸುಮತಿ, ಪದ್ಮಪ್ರಭ, ಸುಪಾರ್ಶ್ವ ಮತ್ತು ಚಂದ್ರಪ್ರಭರು ಕ್ರಮವಾಗಿ ಜನಿಸಿದ್ದು ಪುಂಡರೀಕಿಣೀಪುರಿ, ಸುಸೀಮಾಪುರಿ, ಕ್ಷೇಮಪುರಿ ಮತ್ತು ರತ್ನಸಂಚಯಪುರಿಯಲ್ಲಿ. ಅನಂತನು ಜನಿಸಿದ್ದು ಧಾತಕೀಖಂಡ ದ್ವೀಪದ ಪಶ್ಚಿಮ ಐರಾವತಕ್ಷೇತ್ರ ಸಂಬಂಧಿಯಾದ ಅರಿಷ್ಟಪುರದಲ್ಲಿ. ವಿಮಲನು ಪೂರ್ವಾರ್ಧ ಸಂಬಂಧಿ ಭರತಕ್ಷೇತ್ರದ ಮಹಾಪುರನಗರದಲ್ಲಿ ಹಾಗೂ ಧರ್ಮನು ಭದ್ರಿಲಪುರ ನಗರದಲ್ಲಿ.

ಈ ತೀರ್ಥಂಕರರ ಪೂರ್ವಭವಗಳ ಹೆಸರುಗಳು ಈ ರೀತಿಯಾಗಿವೆ : ವಜ್ರನಾಭಿ, ವಿಮಲ, ವಿಪುಲವಾಹನ, ಮಹಾಬಲ, ಅತಿಬಲ, ಅಪರಾಜಿತ, ನಂದಿಷೇಣ, ಪದ್ಮ, ಮಹಾಪದ್ಮ, ಪದ್ಮಗುಲ್ಮ, ನಲಿನಗುಲ್ಮ , ಪದ್ಮೋತ್ತರ, ಪದ್ಮಾಸನ, ಪದ್ಮ, ದಶರಥ, ಮೇಘರಥ, ಸಿಂಹರಥ, ಧನಪತಿ, ವೈಶ್ರವಣ, ಶ್ರೀಧರ್ಮ, ಸಿದ್ಧಾರ್ಥ, ಸುಪ್ರತಿಷ್ಠ, ಆನಂದ ಮತ್ತು ನಂದನ.

ವೃಷಭನಾಥನು ಪೂರ್ವಭವದಲ್ಲಿ ಚಕ್ರವರ್ತಿಯೂ ಚತುರ್ದಶಪೂರ್ವಧಾರಕನೂ ಆಗಿದ್ದರೆ, ಉಳಿದೆಲ್ಲ ತೀರ್ಥಂಕರರೂ ಮಹಾಮಂಡಲೇಶ್ವರರೂ ಏಕಾದಶಾಂಗಪೂರ್ವವೇತ್ತರಾಗಿದ್ದರು. ಸರ್ವರೂ ಕನಕಪ್ರಭರಾಗಿದ್ದರು. ಸರ್ವರೂ ಪೂರ್ವಭವದಲ್ಲಿ ಸಿಂಹನಿಷ್ಕ್ರೀಡಿತ ತಪವಾಚರಿಸಿ ಮಾಸಕಾಲ ಪ್ರಾಯೋಪಗಮ ಧರಿಸಿ ಸ್ವರ್ಗಗಾಮಿಗಳಾದವರು.

ತೀರ್ಥಂಕರರ ಪೂರ್ವಜನ್ಮದ ಗುರುಗಳು ಕ್ರಮವಾಗಿ ವಜ್ರಸೇನ, ಅರಿಂದಮ, ಸ್ವಯಂಪ್ರಭ, ವಿಮಲವಾಹನ, ಸೀಮಂಧರ, ಪಿಹಿತಾಸ್ರವ, ಅರಿಂದಮ, ಯುಗಂಧರ, ಸರ್ವಜನಾನಂದ, ಉಭಯಾನಂದ, ವಜ್ರದತ್ತ, ವಜ್ರನಾಭಿ, ಸರ್ವಗುಪ್ತ, ತ್ರಿಗುಪ್ತ, ಚಿತ್ತರಕ್ಷ, ವಿಮಲವಾಹನ, ಘನರಥ, ಸಂವರ, ವರಧರ್ಮ, ಸುನಂದ, ನಂದ, ವ್ಯತೀತಶೋಕ, ದಾಮರ ಮತ್ತು ಪ್ರೋಷ್ಠಿಲ ಎಂಬವರು.

ವೃಷಭ, ಧರ್ಮ, ಶಾಂತಿ ಮತ್ತು ಕುಂಥು ಇವರು ಸರ್ವಾರ್ಥಸಿದ್ಧಿಯಿಂದ, ಅಭಿನಂದನನು ವಿಜಯವಿಮಾನದಿಂದ, ಚಂದ್ರಪ್ರಭ ಸುಮತಿಗಳು ವೈಜಯಂತ ವಿಮಾನದಿಂದ, ನೇಮಿ ಅರ ಇವರು ಜಯಂತ ವಿಮಾನದಿಂದ, ನಮಿ ಮಲ್ಲಿ ಇವರು ಅಪರಾಜಿತ

ವಿಮಾನದಿಂದ,ಪುಷ್ಪದಂತ ಆರಣಸ್ವರ್ಗದಿಂದ, ಶೀತಲನು ಅಚ್ಯುತಕಲ್ಪದಿಂದ, ಶ್ರೇಯಾಂಸ ಅನಂತ ಮತ್ತು ಮಹಾವೀರರು ಪುಷ್ಪೋತ್ತರ ವಿಮಾನದಿಂದ, ವಿಮಲ ಪಾರ್ಶ್ವ ಮತ್ತು ಮುನಿಸುವ್ರತರು ಸಹಸ್ರಾರಕಲ್ಪದಿಂದ, ಸಂಭವ ಸುಪಾರ್ಶ್ವ ಮತ್ತು ಪದ್ಮ ಪ್ರಭರು ಕ್ರಮವಾಗಿ ಅಧೋಗ್ರೈವೇಯಕ, ಮಧ್ಯಗ್ರೈವೇಯಕ ಮತ್ತು ಊರ್ಧ್ವ ಗ್ರೈವೇಯಕಗಳಿಂದ, ವಾಸುಪೂಜ್ಯನು ಮಹಾಶುಕ್ರಕಲ್ಪದಿಂದ ಇಳಿದು ಬಂದು ಭರತ ಕ್ಷೇತ್ರದಲ್ಲಿ ಉತ್ಪನ್ನರಾದರು.

ವೃಷಭನು ಚೈತ್ರಕೃಷ್ಣನವಮಿಯಂದು, ಅಜಿತನು ಮಾಘಶುಕ್ಲನವಮಿಯಂದು ಸಂಭವನು ಮಾರ್ಘಶಿರ ಶುಕ್ಲ ಪೂರ್ಣಿಮೆಯಂದು, ಅಭಿನಂದನನು ಮಾಘಶುಕ್ಲದ್ವಾದಶಿ ಯಂದು, ಸುಮತಿಯು ಶ್ರಾವಣಶುಕ್ಲ ಏಕಾದಶಿಯಂದು, ಪದ್ಮಪ್ರಭ ಕಾರ್ತಿಕ ಕೃಷ್ಣ ತ್ರಯೋದಶಿಯಂದು, ಸುಪಾರ್ಶ್ವನು ಜ್ಯೇಷ್ಠ ಶುಕ್ಲದ್ವಾದಶಿಯಂದು, ಚಂದ್ರಪ್ರಭನು ಪೌಷ್ಯ ಕೃಷ್ಣ ಏಕಾದಶಿಯಂದು, ಸುವಿಧಿಯು ಮಾರ್ಗಶಿರ ಶುಕ್ಲಪ್ರತಿಪದೆಯಂದು, ಶೀತ ಲನು ಮಾಘ ಕೃಷ್ಣ ದ್ವಾದಶಿಯಂದು, ಶ್ರೇಯಾಂಸನು ಫಾಲ್ಗುನ ಕೃಷ್ಣ ಏಕಾದಶಿ ಯಂದು, ವಾಸುಪೂಜ್ಯನು ಫಾಲ್ಗುನ ಕೃಷ್ಣ ಚತುರ್ದಶಿಯಂದು, ವಿಮಲನು ಮಾಘ ಶುಕ್ಲ ಚತುರ್ದಶಿಯಂದು, ಅನಂತನು ಜ್ಯೇಷ್ಠ ಕೃಷ್ಣ ದ್ವಾದಶಿಯಂದು, ಧರ್ಮನು ಮಾಘಶುಕ್ಲ ತ್ರಯೋದಶಿಯಂದು, ಶಾಂತಿಯು ಜ್ಯೇಷ್ಠ ಕೃಷ್ಣ ಚತುರ್ದಶಿಯಂದು, ಕುಂಥುವು ವೈಶಾಖ ಶುಕ್ಲ ಪ್ರತಿಪದೆಯಂದು, ಅರನು ಮಾರ್ಗಶಿರ ಶುಕ್ಲ ಚತುರ್ದಶಿ ಯಂದು, ಮಲ್ಲಿಯು ಮಾರ್ಗಶಿರ ಶುಕ್ಲ ಏಕಾದಶಿಯಂದು, ಸುವ್ರತನು ಆಶ್ವಯುಜ ಶುಕ್ಲ ದ್ವಾದಶಿಯಂದು, ನಮಿಯು ಆಷಾಢ ಕೃಷ್ಣ ದಶಮಿಯಂದು, ನೇಮಿಯು ವೈಶಾಖ ಶುಕ್ಲ ತ್ರಯೋದಶಿಯಂದು ಜನ್ಮತಳೆದರು. ಹೀಗೆಯೇ ಪಾರ್ಶ್ವನು ಪೌಷ್ಯ ಕೃಷ್ಣ ಏಕಾದಶಿಯಂದು, ಮಹಾವೀರನು ಚೈತ್ರ ಶುಕ್ಲ ತ್ರಯೋದಶಿಯಂದು ಜನ್ಮ ತಳೆ ಯಲಿದ್ದಾರೆ.

ಇನ್ನುಮುಂದೆ ಈ ತೀರ್ಥಂಕರರ ಮಾತಾಪಿತೃಗಳು, ಜನ್ಮನಕ್ಷತ್ರ, ಜನ್ಮಭೂಮಿ, ಚೈತ್ಯವೃಕ್ಷ ಮತ್ತು ನಿರ್ವಾಣಭೂಮಿಗಳು ಹೇಳಲ್ಪಡುತ್ತವೆ. ವೃಷಭನ ತಾಯಿತಂದೆ ಮರುದೇವಿ-ನಾಭಿಯರು, ಊರು ವಿನೀತಾ, ಚೈತ್ಯವು ವಟ, ನಿರ್ವಾಣಭೂಮಿ ಕೈಲಾಸ, ಜನ್ಮನಕ್ಷತ್ರ ಉತ್ತರಾಷಾಢ ; ಅಜಿತನ ತಾಯಿತಂಪೆ ವಿಜಯಾ-ಜಿತಶತ್ರು, ಊರು ಅಯೋಧ್ಯೆ, ಚೈತ್ಯವು ಸಪ್ತಪರ್ಣ, ನಿರ್ವಾಣಭೂಮಿ ಸಮ್ಮೇದಾಚಲ, ಜನ್ಮನಕ್ಷತ್ರ ರೋಹಿಣಿ ; ಸಂಭವನದು ಸೇನಾ–ಜಿತಾರಿ, ಶ್ರಾವಸ್ತಿ, ಶಾಲವೃಕ್ಷ, ಸಮ್ಮೇದಾಚಲ ಮತ್ತು ಜ್ಯೇಷ್ಠಾ ; ಅಭಿನಂದನನದು ಸಿದ್ಧಾರ್ಥಾ–ಸಂವರ, ಅಯೋಧ್ಯೆ, ಸರಲವೃಕ್ಷ, ಸಮ್ಮೇದಗಿರಿ ಮತ್ತು ಪುನರ್ವಸು ; ಸುಮತಿಗೆ ಸುಮಂಗಲಾ-ಮೇಘಪ್ರಭ, ಅಯೋಧ್ಯೆ, ಪ್ರಿಯಂಗುವೃಕ್ಷ, ಸಮ್ಮೇದ ಶಿಖರ ಮತ್ತು ಮಘಾ; ಪದ್ಮಪ್ರಭನಿಗೆ ಸುಸೀಮಾ-ಧರಣ· ಕೌಶಾಂಬಿ, ಪ್ರಿಯಂಗುವೃಕ್ಷ, ಸಮ್ಮೇದಶಿಖರ ಮತ್ತು ಚಿತ್ರಾ ; ಸುಪಾರ್ಶ್ವನಿಗೆ ಪೃಥಿವಿ-ಸುಪ್ರತಿಷ್ಠ, ಕಾಶಿ, ಶಿರೀಷವೃಕ್ಷ, ಸಮ್ಮೇದ ಶಿಖರ ಮತ್ತು ವಿಶಾಖೆ ; ಚಂದ್ರಪ್ರಭನಿಗೆ ಲಕ್ಷ್ಮಣಾ-ಮಹಾಸೇನ, ಚಂದ್ರಪುರಿ, ನಾಗವೃಕ್ಷ, ಸಮ್ಮೇದ ಶಿಖರ ಮತ್ತು ಅನುರಾಧ; ಪುಷ್ಪದಂತನಿಗೆ ರಾಮಾ-ಸುಗ್ರೀವ, ಕಾಕಂದೀ, ಶಾಲಿವೃಕ್ಷ, ಸಮ್ಮೇದಶಿಖರ ಮತ್ತು ಮೂಲ;ಶೀತಲನಿಗೆ ಸುನಂದಾ-ದೃಢರಥ, ಭದ್ರಿಲಾಪುರಿ, ಪ್ಲಕ್ಷ, ಸಮ್ಮೇದಗಿರಿ ಮತ್ತು ಪೂರ್ವಾಷಾಢ; ಶ್ರೇಯಾಂಸನಿಗೆ ವಿಷ್ಣುಶ್ರೀ-ವಿಷ್ಣುರಾಜ, ಸಿಂಹನಾದಪುರ, ತಿಂದುಕವೃಕ್ಷ, ಸಮ್ಮೇದಶಿಖರ ಮತ್ತು ಶ್ರವಣ; ವಾಸುಪೂಜ್ಯನಿಗೆ ಜಯಾ-ವಸುಪೂಜ್ಯ, ಚಂಪಾಪುರಿ, ಪಾಟಲಾ, ಚಂಪಾಪುರಿ ಮತ್ತು ಶತಭಿಷೆ;ವಿಮಲನಾಥನಿಗೆ ಶರ್ಮಾ-ಕೃತವರ್ಮಾ,ಕಾಂಪಿಲ್ಯ, ಜಂಬೂವೃಕ್ಷ, ಸಮ್ಮೇದ ಶಿಖರ ಮತ್ತು ಉತ್ತರಾಭಾದ್ರ; ಅನಂತನಾಥನಿಗೆ ಸರ್ವಯಶೆ-ಸಿಂಹಸೇನ, ಸಾಕೇತ,ಅಶ್ವತ್ಥ, ಸಮ್ಮೇದಶಿಖರ ಮತ್ತು ರೇವತಿ;ಧರ್ಮನಾಥನಿಗೆ ಸುವ್ರತಾ-ಭಾನುರಾಜ, ರತ್ನಪುರ, ದೀರ್ಘಪರ್ಣ, ಸಮ್ಮೇದ ಶಿಖರ ಮತ್ತು ಪುಷ್ಯ ; ಶಾಂತಿನಾಥ ನಿಗೆ ಐರಾ-ವಿಶ್ವಸೇನ, ಹಸ್ತಿನಾಪುರ, ನಂದೀವೃಕ್ಷ, ಸಮ್ಮೇದಶಿಖರ ಮತ್ತು ಭರಣಿ ; ಕುಂಥುನಾಥನಿಗೆ ಶ್ರೀಮತಿ-ಸೂರ್ಯ, ಹಸ್ತಿನಾಪುರ, ತಿಲಕವೃಕ್ಷ, ಸಮ್ಮೇದಶಿಖರ ಮತ್ತು ಮತ್ತು ಕೃತ್ತಿಕಾನಕ್ಷತ್ರ ; ಅರನಾಥನಿಗೆ ಮಿತ್ರಾ-ಸುದರ್ಶನ, ಹಸ್ತಿನಾಪುರ, ಆಮ್ರವೃಕ್ಷ, ಸಮ್ಮೇದಶಿಖರ ಮತ್ತು ರೋಹಿಣಿ ; ಮಲ್ಲಿನಾಥನಿಗೆ ರಕ್ಷಿತಾ-ಕುಂಭ, ಮಿಥಿಲೆ, ಅಶೋಕ ವೃಕ್ಷ, ಸಮ್ಮೇದ ಶಿಖರ ಮತ್ತು ಅಶ್ವಿನಿ ; ಮುನಿಸುವ್ರತನಿಗೆ ಪದ್ಮಾವತಿ-ಸುಮಿತ್ರ, ಕುಶಾಗ್ರನಗರ, ಚಂಪಕವೃಕ್ಷ, ಸಮ್ಮೇದಶಿಖರ ಮತ್ತು ಶ್ರವಣ ನಕ್ಷತ್ರ ; ನಮಿನಾಥನಿಗೆ ವಪ್ರಾ-ವಿಜಯ, ಮಿಥಿಲೆ, ಬಕುಲವೃಕ್ಷ. ಸಮ್ಮೇದಶಿಖರ ಮತ್ತು ಅಶ್ವಿನೀನಕ್ಷತ್ರ; ನೇಮಿ ನಾಥನಿಗೆ ಶಿವಾ-ಸಮುದ್ರವಿಜಯ, ಸೂರ್ಯಪುರ, ಮೇಷಶೃಂಗವೃಕ್ಷ, ಊರ್ಜಯಂತ ಪರ್ವತ ಮತ್ತು ಚಿತ್ರಾ ; ಪಾರ್ಶ್ವನಿಗೆ ವರ್ಮಾ-ಅಶ್ವಸೇನ, ವಾರಾಣಸಿ, ಧವ ವೃಕ್ಷ, ಸಮ್ಮೇದ ಶಿಖರ ಮತ್ತು ವಿಶಾಖೆ ; ಮಹಾವೀರನಿಗೆ ಪ್ರಿಯಕಾರಿಣಿ-ಸಿದ್ಧಾರ್ಥ, ಕುಂಡ ಪುರ, ಶಾಲವೃಕ್ಷ. ಪಾವಾಪುರಿ ಮತ್ತು ಉತ್ತರಾಫಾಲ್ಗುನಿ.

ಸುಪಾರ್ಶ್ವನು ಅನುರಾಧ, ಚಂದ್ರಪ್ರಭನು ಜ್ಯೇಷ್ಠಾ, ಶ್ರೇಯಾಂಸನು ಧನಿಷ್ಠಾ, ವಾಸುಪೂಜ್ಯನು ಅಶ್ವಿನಿ, ಮಲ್ಲಿಯು ಭರಣಿ, ಮಹಾವೀರನು ಸ್ವಾತಿ ನಕ್ಷತ್ರಗಳಲ್ಲಿ ನಿರ್ವಾಣ ಪಡೆದರು; ಉಳಿದವರು ತಂತಮ್ಮ ಜನ್ಮನಕ್ಷತ್ರಗಳಂದು ಪಡೆದರು.

ಶಾಂತಿ, ಕುಂಥು ಮತ್ತು ಅರನಾಥರು ತೀರ್ಥಂಕರರೂ ಚಕ್ರವರ್ತಿಗಳೂ ಆದರು; ಉಳಿದವರು ಸಾಮಾನ್ಯರಾಜರಾದರು.

ಚಂದ್ರಪ್ರಭನು ಚಂದ್ರಪ್ರಕಾಶನು, ಸುವಿಧಿಯು ಶಂಖ ಸತ್ಪ್ರಭನು, ಸುಪಾರ್ಶ್ವನು ಪ್ರಿಯಂಗುಮಂಜರೀ ಪುಂಜವರ್ಣನು, ಪಾರ್ಶ್ವನು ಮೇಘಶ್ಯಾಮವಪುವುಳ್ಳವನು, ಪದ್ಮಪ್ರಭನು ಪದ್ಮಗರ್ಭನಿಭನು; ವಾಸುಪೂಜ್ಯನು ರಕ್ತಕಿಂಶುಕ ಪುಷ್ಪಾಭನು; ಮುನಿ ಸುವ್ರತನು ನೀಲಾಂಜನಾಚಲಚ್ಛಾಯನು; ನೇಮಿನಾಥನು ನೀಲವರ್ಣನು ; ಉಳಿದವರು ಸುತಪ್ತ ಕನಕಚ್ಛಾಯರು.

ವಾಸುಪೂಜ್ಯ, ಮಲ್ಲಿ, ನೇಮಿ, ಪಾರ್ಶ್ವ, ವರ್ಧಮಾನರು ಕುಮಾರ ಕಾಲದ ಲ್ಲಿಯೇ ದೀಕ್ಷಾಧಾರಣಮಾಡುವವರು ; ಉಳಿದವರು ರಾಜರಾದ ಬಳಿಕ. ವೃಷಭ ದೇವನ

ದೀಕ್ಷಾಕಲ್ಯಾಣವು ವಿನೀತೆಯಲ್ಲಿ, ನೇಮಿನಾಥನದು ದ್ವಾರಾವತಿಯಲ್ಲಿ, ಉಳಿದವರದು ಅವರವರ ಜನ್ಮಭೂಮಿಯಲ್ಲಿ ಆಯಿತು. ಶ್ರೇಯಾಂಸ, ಸುಮತಿ, ಮಲ್ಲಿ, ನೇಮಿ, ಪಾರ್ಶ್ವರು ದಿನದ ಪೂರ್ವಾಹ್ನಕಾಲದಲ್ಲಿಯೂ ಉಳಿದವರು ಅಪರಾಹ್ನ ಕಾಲದಲ್ಲಿಯೂ ದೀಕ್ಷಾಧಾರಣ ಮಾಡಿದರು. ಮಹಾವೀರನು ಜ್ಞಾತೃವನ, ವಾಸುಪೂಜ್ಯನು ಕ್ರೀಡೋದ್ಯಾನ, ವೃಷಭದೇವನು ಸಿದ್ಧಾರ್ಥವನ, ಧರ್ಮನು ವಪ್ರಸ್ಥಾನ, ಮುನಿಸುವ್ರತನು ನೀಲಗುಹೆಯ ಸಮೀಪ, ಪಾರ್ಶ್ವನು ಮನೋರಮೋದ್ಯಾನ, ಉಳಿದವರು ಸಹಸ್ರಾಮ್ರವನ ಮೊದಲಾದ ನಗರೋದ್ಯಾನ ಇವುಗಳಲ್ಲಿ ದೀಕ್ಷಾಧಾರಣ ಮಾಡಿದರು. ಚೈತ್ರ ಕೃಷ್ಣ ನವಮಿ ವೃಷಭನ, ವೈಶಾಖ ಕೃಷ್ಣ ನವಮಿ ಮುನಿಸುವ್ರತನ, ವೈಶಾಖ ಶುದ್ಧ ಪ್ರತಿಪದೆ ಕುಂಥುನಾಥನ, ವೈಶಾಖ ಶುದ್ಧ ನವಮಿ ಸುಮತಿಯ, ಜ್ಯೇಷ್ಠ ಕೃಷ್ಣ ದ್ವಾದಶಿ ಅನಂತನ, ಜ್ಯೇಷ್ಠ ಕೃಷ್ಣ ತ್ರಯೋದಶಿ ಶಾಂತಿಯ, ಜ್ಯೇಷ್ಠ ಕೃಷ್ಣ ದ್ವಾದಶಿ ಸುಪಾರ್ಶ್ವನ, ಆಷಾಢ ಕೃಷ್ಣ ದಶಮಿ ನಮಿಯ, ಶ್ರಾವಣ ಶುದ್ಧ ಚತುರ್ಥಿ ನೇಮಿಯ, ಕಾರ್ತಿಕ ಕೃಷ್ಣ ತ್ರಯೋದಶಿ ಪದ್ಮಪ್ರಭನ, ಮಾರ್ಗಶಿರ ಕೃಷ್ಣ ದಶಮಿ ಸುಮತಿಯ, ಮಾರ್ಗಶಿರ ಶುದ್ಧ ಪ್ರತಿಪದೆ ಪುಷ್ಪದಂತನ, ಮಾರ್ಗಶಿರ ಶುದ್ಧ ದಶಮಿ ಅರನಾಥನ, ಮಾರ್ಗಶಿರ ಶುದ್ಧ ಪೂರ್ಣಿಮೆ ಸಂಭವನ, ಮಾರ್ಗಶಿರ ಶುದ್ಧ ಏಕಾದಶಿ ಮಲ್ಲಿಯ, ಪೌಷ್ಯ ಕೃಷ್ಣ ಏಕಾದಶಿ ಚಂದ್ರಪ್ರಭನ ಹಾಗೂ ಪಾರ್ಶ್ವನಾಥನ, ಮಾಘ ಕೃಷ್ಣ ದ್ವಾದಶಿ ಶೀತಲನ, ಮಾಘ ಶುಕ್ಲ ಚತುರ್ಥಿ ವಿಮಲನ, ಮಾಘ ಶುಕ್ಲ ನವಮಿ ಅಜಿತನ, ಮಾಘ ಶುಕ್ಲ ದ್ವಾದಶಿ ಅಭಿನಂದನನ, ಮಾಘ ಶುಕ್ಲ ತ್ರಯೋದಶಿ ಧರ್ಮನ, ಫಾಲ್ಗುನ ಕೃಷ್ಣ ತ್ರಯೋದಶಿ ಶ್ರೇಯಾಂಸನ, ಫಾಲ್ಗುನ ಕೃಷ್ಣ ಚತುರ್ದಶಿ ವಾಸುಪೂಜ್ಯನ ದೀಕ್ಷೆಯ ತಿಥಿಗಳಾಗಿವೆ.

ಹಸ್ತಿನಪುರ, ಅಯೋಧ್ಯೆ, ಶ್ರಾವಸ್ತಿ, ವಿನೀತಾ, ವಿಜಯಪುರ, ಮಂಗಲಪುರ, ಪಾಟಲೀಖಂಡ, ಪದ್ಮಖಂಡಪುರ, ಶ್ವೇತಪುರ, ಅರಿಷ್ಟಪುರ, ಸಿದ್ಧಾರ್ಥಪುರ, ಮಹಾಪುರ, ಧಾನ್ಯವಟಪುರ, ವರ್ಧಮಾನಪುರ, ಸೋಮನಸಪುರ, ಮಂದರಪುರ, ಹಸ್ತಿನಾಪುರ, ಚಕ್ರಪುರ, ಮಿಥಿಲಾ, ರಾಜಗೃಹ, ವೀರಪುರ, ದ್ವಾರವತಿ, ಕಾಮ್ಯಕೃತ, ಕುಂಡಪುರ ಇವು ಯಥಾಕ್ರಮವಾಗಿ ವೃಷಭಾದಿ ತೀರ್ಥಂಕರರ ಪ್ರಥಮ ಪಾರಣೆಯ ದಿನದಲ್ಲಿ ಪ್ರಸಿದ್ಧವಾಗಿರುವ ನಗರಗಳು. ಶ್ರೇಯಾಂಸ, ಬ್ರಹ್ಮದತ್ತ, ಸುರೇಂದ್ರದತ್ತ, ಇಂದ್ರದತ್ತ, ಪದ್ಮಕ, ಸೋಮದತ್ತ, ಮಹಾದತ್ತ, ಸೋಮದೇವ, ಪುಷ್ಪಕ, ಪುನರ್ವಸು, ಸುನಂದ, ಜಯ, ವಿಶಾಖ, ಧರ್ಮಸಿಂಹ, ಸುಮಿತ್ರ, ಧರ್ಮಮಿತ್ರ, ಅಪರಾಜಿತ, ನಂದಿಷೇಣ, ವೃಷಭದತ್ತ, ದತ್ತ, ವರದತ್ತ, ನೃಪತಿ, ಧನ್ಯ, ಬಕುಲ ಇವರು ಯಥಾಕ್ರಮವಾಗಿ ವೃಷಭಾದಿ ತೀರ್ಥಂಕರರ ಪ್ರಥಮಪಾರಣೆಯಂದು ಆಹಾರದಾನ ಮಾಡಿದವರು.

ವೃಷಭನು ಪೂರ್ವತಾಲ ನಗರದ ಶಕಟಾಮುಖ ವನದಲ್ಲಿ, ನೇಮಿನಾಥನು ಊರ್ಜಯಂತ ಗಿರಿಯಲ್ಲಿ, ಪಾರ್ಶ್ವನು ಆಶ್ರಮಸಮೀಪದಲ್ಲಿ, ಮಹಾವೀರನು ಋಜುಕೂಟಾ ನದೀತಟದಲ್ಲಿ, ಉಳಿದವರು ತಂತಮ್ಮ ನಗರಗಳಲ್ಲಿಯ ಉದ್ಯಾನಗಳಲ್ಲಿ ಕೇವಲ

ಜ್ಞಾನಪಡೆದರು. ವೃಷಭ, ಶ್ರೇಯಾಂಸ, ಮಲ್ಲಿ, ನೇಮಿ, ಪಾರ್ಶ್ವರಿಗೆ ಪೂರ್ವಾಹ್ನ ಕಾಲದಲ್ಲಿ, ಉಳಿದವರಿಗೆ ಅಪರಾಹ್ನದಲ್ಲಿ ಕೇವಲಜ್ಞಾನಾವಾಪ್ತಿಯಾಯಿತು.

ಈ ತೀರ್ಥಂಕರರ ಕೇವಲಜ್ಞಾನದ ತಿಥಿಗಳು ಎಂದರೆ : ವೃಷಭನಿಗೆ ಫಾಲ್ಗುನ ಕೃಷ್ಣ ಏಕಾದಶಿ, ಮಲ್ಲಿಗೆ ಫಾಲ್ಗುನ ಕೃಷ್ಣ ದ್ವಾದಶಿ, ಮುನಿಸುವ್ರತನಿಗೆ ಫಾಲ್ಗುನ ಕೃಷ್ಣ ಷಷ್ಠಿ, ಸುಪಾರ್ಶ್ವನಿಗೆ ಮತ್ತು ಚಂದ್ರಪ್ರಭನಿಗೆ ಫಾಲ್ಗುನ ಕೃಷ್ಣ ಸಪ್ತಮಿ, ಪಾರ್ಶ್ವನಿಗೆ ಚೈತ್ರ ಕೃಷ್ಣ ಚತುರ್ಥಿ, ಅನಂತನಿಗೆ ಚೈತ್ರ ಕೃಷ್ಣ ಅಮಾವಾಸ್ಯೆ, ನಮಿಕುಂಥುಗಳಿಗೆ ಚೈತ್ರ ಶುಕ್ಲ ತೃತೀಯೆ, ಸುಮತಿ ಪದ್ಮಪ್ರಭರಿಗೆ ಚೈತ್ರ ಶುಕ್ಲ ದಶಮಿ, ಮಹಾವೀರನಿಗೆ ವೈಶಾಖ ಶುಕ್ಲ ದಶಮಿ, ನೇಮಿಗೆ ಆಶ್ವಯುಜ ಶುಕ್ಲ ಪ್ರತಿಪದೆ, ಸಂಭವನಿಗೆ ಕಾರ್ತಿಕ ಕೃಷ್ಣ ಪಂಚಮಿ, ಸುವಿಧಿಗೆ ಕಾರ್ತಿಕ ಶುಕ್ಲ ತೃತೀಯೆ, ಅರನಿಗೆ ಕಾರ್ತಿಕ ಶುಕ್ಲ ದ್ವಾದಶಿ, ಶೀತಲನಿಗೆ ಪೌಷ್ಯ ಕೃಷ್ಣ ಚತುರ್ದಶಿ, ಪೌಷ್ಯ ಕೃಷ್ಣ ದಶಮಿ ವಿಮಲನಿಗೆ, ಶಾಂತಿಗೆ ಪೌಷ್ಯ ಶುಕ್ಲ ಏಕಾದಶಿ, ಅಜಿತನಿಗೆ ಪೌಷ್ಯ ಶುಕ್ಲ ಚತುರ್ದಶಿ, ಅಭಿನಂದನ ಧರ್ಮರಿಗೆ ಪೌಷ್ಯ ಶುಕ್ಲ ಪೂರ್ಣಿಮೆ, ಶ್ರೇಯಾಂಸನಿಗೆ ಮಾಘ ಕೃಷ್ಣ ಅಮಾವಾಸ್ಯೆ, ಮಾಘ ಶುಕ್ಲ ದ್ವಿತೀಯೆ ವಾಸುಪೂಜ್ಯನಿಗೆ.

ಇನ್ನು ತೀರ್ಥಂಕರರ ನಿರ್ವಾಣ ಪ್ರಾಪ್ತಿಯ ತಿಥಿಗಳೆಂದರೆ : ವೃಷಭನಿಗೆ ಮಾಘ ಕೃಷ್ಣ ಚತುರ್ದಶಿ, ಪದ್ಮಪ್ರಭನಿಗೆ ಫಾಲ್ಗುನ ಕೃಷ್ಣ ಚತುರ್ಥಿ, ಸುಪಾರ್ಶ್ವನಿಗೆ ಫಾಲ್ಗುನ ಕೃಷ್ಣ ಷಷ್ಠಿ, ಮುನಿಸುವ್ರತನಿಗೆ ಫಾಲ್ಗುನ ಕೃಷ್ಣ ದ್ವಾದಶಿ, ಮಲ್ಲಿ ವಾಸುಪೂಜ್ಯರಿಗೆ ಫಾಲ್ಗುನ ಶುಕ್ಲ ಪಂಚಮಿ, ಅನಂತ ಮತ್ತು ಅರನಾಥನಿಗೆ ಚೈತ್ರದ ಅಮಾವಾಸ್ಯೆ, ಅಜಿತನಿಗೆ ಚೈತ್ರ ಶುಕ್ಲ ಪಂಚಮಿ, ಸಂಭವನಿಗೆ ಚೈತ್ರ ಶುಕ್ಲ ಷಷ್ಠಿ, ಸುಮತಿಗೆ ಚೈತ್ರ ಶುಕ್ಲ ದಶಮಿ, ನಮಿನಾಥನಿಗೆ ವೈಶಾಖ ಕೃಷ್ಣ ಚತುರ್ದಶಿ, ಕುಂಥುವಿಗೆ ವೈಶಾಖ ಶುಕ್ಲ ಪ್ರತಿಪದೆ, ಅಭಿನಂದನನಿಗೆ ವೈಶಾಖ ಶುಕ್ಲ ಸಪ್ತಮಿ, ಶಾಂತಿಗೆ ಜ್ಯೇಷ್ಠ ಕೃಷ್ಣ ಚತುರ್ದಶಿ, ಧರ್ಮನಿಗೆ ಜ್ಯೇಷ್ಠ ಶುಕ್ಲ ಚತುರ್ಥಿ, ವಿಮಲನಿಗೆ ಆಷಾಢ ಕೃಷ್ಣ ಅಷ್ಟಮಿ, ನೇಮಿಗೆ ಆಷಾಢ ಶುಕ್ಲ ಅಷ್ಟಮಿ, ಪಾರ್ಶ್ವನಿಗೆ ಶ್ರಾವಣ ಶುಕ್ಲ ಸಪ್ತಮಿ, ಶ್ರೇಯಾಂಸನಿಗೆ ಶ್ರಾವಣ ಶುಕ್ಲ ಪೂರ್ಣಿಮೆ ಧನಿಷ್ಠಾ ನಕ್ಷತ್ರದಲ್ಲಿ, ಚಂದ್ರಪ್ರಭನಿಗೆ ಭಾದ್ರಪದ ಶುಕ್ಲ ಸಪ್ತಮಿ, ಪುಷ್ಪದಂತನಿಗೆ ಭಾದ್ರಪದ ಶುಕ್ಲ ಅಷ್ಟಮಿ, ಶೀತಲನಿಗೆ ಆಶ್ವಯುಜ ಶುಕ್ಲ ಪಂಚಮಿ, ಮಹಾವೀರನಿಗೆ ಕಾರ್ತಿಕ ಕೃಷ್ಣ ಚತುರ್ದಶಿ.

ಭರತ, ಸಗರ, ಮಘವ, ಸನತ್ಕುಮಾರ, ಶಾಂತಿನಾಥ, ಕುಂಥುನಾಥ, ಅರನಾಥ, ಸುಭೂಮ, ಮಹಾಪದ್ಮ, ಹರಿಷೇಣ. ಜಯ, ಬ್ರಹ್ಮದತ್ತ—ಈ ೧೨ ಮಂದಿ ಚಕ್ರವರ್ತಿಗಳು ಷಟ್ಖಂಡನಾಥರು; ತ್ರಿಪೃಷ್ಠ, ದ್ವಿಪೃಷ್ಠ, ಸ್ವಯಂಭೂ, ಪುರುಷೋತ್ತಮ, ಪುರುಷಸಿಂಹ, ಪುರುಷಪುಂಡರೀಕ, ದತ್ತ, ನಾರಾಯಣ (ಲಕ್ಷ್ಮಣ), ಕೃಷ್ಣ—ಈ ೯ ಮಂದಿ ವಾಸುದೇವರು. ಇವರು ತ್ರಿಖಂಡ ಭರತಾಧೀಶರು. ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಾಂದಿ, ನಂದಿಮಿತ್ರ, ರಾಮ ಮತ್ತು ಪದ್ಮ ಇವರು ೯ ಮಂದಿ ಬಲದೇವರು. ಅಶ್ವಗ್ರೀವ, ತಾರಕ, ಮೇರುಕ, ನಿಶುಂಭ, ಮಧುಕೈಟಭ, ಬಲಿ, ಪ್ರಹರಣ,

ರಾವಣ, ಜರಾಸಂಧ—ಈ ೯ ಮಂದಿ ಪ್ರತಿವಾಸುದೇವರು. ಬಲದೇವರು ಊರ್ಧ್ವಗಾಮಿಗಳು ಮತ್ತು ಭವಾಂತರಗಳಲ್ಲಿ ನಿರ್ನಿದಾನರು; ವಾಸುದೇವರು ಅಧೋಗಾಮಿಗಳು ಮತ್ತು ಸನಿದಾನರು.

ಭರತನು ವೃಷಭನ ಕಾಲದಲ್ಲಿ ಚಕ್ರವರ್ತಿಯಾಗಿದ್ದನು. ಹೀಗೆಯೇ ಸಗರ ಅಜಿತ ಮಘವ ಸನತ್ಕುಮಾರರು ಧರ್ಮ ಶಾಂತಿಗಳ ಅಂತರಾಲದಲ್ಲಿ, ಶಾಂತಿ ಕುಂಥು ಅರ ಇವರು ತಮ್ಮ ತಮ್ಮ ಅಂತರಾಲಕಾಲದಲ್ಲಿ, ಸಂಭೂಮನು ಅರ ಮಲ್ಲಿಗಳ ಅಂತರಾಲದಲ್ಲಿ, ಮಹಾಪದ್ಮನು ಮಲ್ಲಿ ಮುನಿಸುವ್ರತರ ಅಂತರಾಲ ಕಾಲದಲ್ಲಿ, ಹರಿಷೇಣನು ಮುನಿಸುವ್ರತ ನಮಿಗಳ ಅಂತರಾಲಕಾಲದಲ್ಲಿ, ಜಯಸೇನನು ನಮಿ ಪಾರ್ಶ್ವರ ಅಂತರಕಾಲದಲ್ಲಿ, ಬ್ರಹ್ಮದತ್ತನು ನೇಮಿ ಪಾರ್ಶ್ವರ ಅಂತರಕಾಲದಲ್ಲಿ ಆದವರು.

ತೀರ್ಥಂಕರರ ಪ್ರಥಮಗಣಧರರೆಂದರೆ, ಕ್ರಮವಾಗಿ ವೃಷಭಸೇನ, ಸಿಂಹಸೇನ, ಚಾರುದತ್ತ, ವಜ್ರ, ಚಮರ, ವಜ್ರಚಮರ, ಬಲಿ, ದತ್ತಕ, ವೈದರ್ಭ, ಅನಗಾರ, ಕುಂಥು, ಸುಧರ್ಮ, ಮಂದರಾರ್ಯ, ಜಯ, ಅರಿಷ್ಟಸೇನ, ಚಕ್ರಾಯುಧ, ಸ್ವಯಂಭೂ, ಕುಂಥು, ವಿಶಾಖ, ಮಲ್ಲಿ, ಸೋಮಕ, ವರದತ್ತ, ಸ್ವಯಂಭೂ ಮತ್ತು ಇಂದ್ರಭೂತಿ. ಇವರು ಸಪ್ತರ್ಧಿಸಂಪನ್ನರು, ಶ್ರುತಪಾರಗರು.

ಭೀಮಾವಲಿ, ಜಿತಶತ್ರು, ರುದ್ರ, ವಿಶ್ವಾನಲ, ಸುಪ್ರತಿಷ್ಠಕ, ಅಚಲ, ಪುಂಡರೀಕ, ಅಜಿತಂಧರ, ಅಜಿತನಾಭಿ, ಪೀಠ ಮತ್ತು ಸತ್ಯಕಿಪುತ್ರ—ಇವರು ಕ್ರಮವಾಗಿ ವೃಷಭ, ಅಜಿತ, ಪುಷ್ಪದಂತ, ಶೀತಲ, ಶ್ರೇಯಾಂಸ, ವಾಸುಪೂಜ್ಯ, ವಿಮಲ, ಅನಂತ, ಧರ್ಮ, ಶಾಂತಿ ಮತ್ತು ಮಹಾವೀರರ ಕಾಲದ ಏಕಾದಶ ರುದ್ರರು.

ಭೀಮ, ಮಹಾಭೀಮ, ರುದ್ರ, ಮಹಾರುದ್ರ, ಕಾಲ,ಮಹಾಕಾಲ, ಚತುರ್ಮುಖ, ನರವಕ್ತ್ರ ಮತ್ತು ಉನ್ಮುಖ—ಇವರು ೯ ಮಂದಿ ನಾರದರು. ಇವರು ಕಲಹಪ್ರಿಯರು, ಕದಾಚಿದ್ಧರ್ಮವತ್ಸಲರು, ಹಿಂಸಾನಂದವಶರು, ಮಹಾಭವ್ಯರು, ಜಿನಾನುಗರು.

ಮಹಾವೀರನು ಮೋಕ್ಷಕ್ಕೆ ಸಂದ ಮೇಲೆ, ಅವಸರ್ಪಿಣಿಯಲ್ಲಿ ಹೇಗೆ ತೀರ್ಥಂಕರಾದಿಗಳು ಆದರೋ ಹಾಗೆಯೇ ಬರಲಿರುವ ಉತ್ಸರ್ಪಿಣಿಯಲ್ಲಿ ಭವಿಷ್ಯತ್ತೀರ್ಥಕರರಾಗುವರು. ಬರಲಿರುವ ದುಃಷಮಾ ಎಂಬ ಕಾಲದಲ್ಲಿ ಸಹಸ್ರವರ್ಷ ಉಳಿದಿದೆಯನ್ನುವಾಗ, ಮೊದಲಿನಂತೆಯೇ ೧೪ ಮಂದಿ ಕುಲಕರರಾಗುವರು. ಬಳಿಕ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ನಾರಾಯಣರು, ೯ ಬಲದೇವರು, ೯ ಪ್ರತಿವಾಸುದೇವರು, ೧೧ ರುದ್ರರು ಇವರು ಕಾಣಿಸಿಕೊಳ್ಳುವರು.

ಈ ಪ್ರಕಾರವಾಗಿ ನೇಮಿನಾಥನಿಂದ ತ್ರಿಷಷ್ಟಿಪುರುಷ ಕಥಾಂತರವನ್ನು ಕೇಳಿ ಕೃಷ್ಣಾದಿ ಅರಸರೂ ಇಂದ್ರಸೂರ್ಯಾದಿ ದೇವರೂ ಧರ್ಮತತ್ತ್ವವನ್ನು ಗ್ರಹಿಸಿ ಸ್ವಸ್ಥಾನಗಳಿಗೆ ಹೋದರು.

೬೧. ದ್ವಾರಾವತೀವಿನಾಶ ವರ್ಣನ

ಈಗ ನೇಮಿ ಶ್ರೇಣಿಕನ ಅಭಿಪ್ರಾಯವರಿತು ಗಜಕುಮಾರನ ವೃತ್ತಾಂತವನ್ನು ಹೇಳತೊಡಗಿದನು. ಗಜಕುಮಾರನು ತೀರ್ಥಂಕರಾದಿಗಳ ಚರಿತ್ರೆಯನ್ನು ಕೇಳಿ ವೈರಾಗ್ಯಗೊಂಡವನಾಗಿ ಪಿತಾಪುತ್ರರಾದಿಯಾದ ಬಂಧುಗಳನ್ನು ಬಿಟ್ಟು ಜಿನೇಂದ್ರನಲ್ಲಿ ದೀಕ್ಷಾಗ್ರಹಣಮಾಡಿ ತಪೋದ್ಯುಕ್ತನಾದನು. ಗಜಕುಮಾರನಿಗೆ ನಿಶ್ಚಯವಾಗಿದ್ದ ಪ್ರಭಾವತಿ ಆದಿಯಾದ ಕನ್ಯೆಯರೂ ವೈರಾಗ್ಯಗೊಂಡು ದೀಕ್ಷಾಗ್ರಹಣಮಾಡಿದರು. ಆಮೇಲೆ ಎಂದೋ ಒಂದು ದಿನ ಗಜಕುಮಾರಮುನಿ ರಾತ್ರಿಯ ವೇಳೆ ಏಕಾಂತದಲ್ಲಿ ಪ್ರತಿಮಾಯೋಗದಲ್ಲಿದ್ದಾಗ, ತನ್ನ ಪುತ್ರಿಯನ್ನು ತ್ಯಜಿಸಿದನೆಂಬ ಕೋಪದಿಂದ ಸೋಮಶರ್ಮನು ಕುದಿದು ಆ ಮುನಿಯ ತಲೆಗೆ ಬೆಂಕಿ ಹಚ್ಚಿದನು. ಆ ಬೆಂಕಿಯಿಂದ ಗಜಕುಮಾರನ ಶರೀರ ಸುಡತೊಡಗಿತು. ಆಗ ಶುಕ್ಲಧ್ಯಾನತತ್ಪರನಾಗಿ ಕರ್ಮಕ್ಷಯ ಮಾಡಿಕೊಂಡು ಅಂತಕೃತ್‌ಕೇವಲಿಯಾಗಿ ಮೋಕ್ಷಕ್ಕೆ ಸಂದನು. ಯಕ್ಷಕಿನ್ನರಾದ್ಯರು ಬಂದು ಆತನ ಶರೀರಪೂಜೆ ಮಾಡಿದರು. ಆತನ ಮರಣ ತಿಳಿದು ನೊಂದು, ವಸುದೇವನನ್ನೂ ಕೆಲವರು ಯಾದವರನ್ನೂ ಬಿಟ್ಟು ಉಳಿದ ಸಮುದ್ರವಿಜಯ ಮುಂತಾದ ದಶಾರ್ಹರು ದೀಕ್ಷಿತರಾದರು. ಶಿವಾದೇವಿ ಮುಂತಾದ ದೇವಿಯರೂ, ದೇವಕಿ ರೋಹಿಣಿಯರನ್ನು ಬಿಟ್ಟು ಉಳಿದ ವಸುದೇವ ಸತಿಯರೂ, ಕೃಷ್ಣನ ಪುತ್ರಿಯರೂ ದೀಕ್ಷಾಗ್ರಹಣಮಾಡಿದರು.

ಆಮೇಲೆ ನೇಮಿಯು ಭವ್ಯರಿಗೆ ಧರ್ಮಬೋಧೆ ಮಾಡುತ್ತ ಹಲವು ದೇಶಗಳಲ್ಲಿ ವಿಹಾರಿಸಿದನು. ಉತ್ತರದಿಕ್ಕಿನ ಮಧ್ಯದೇಶದ ಹಾಗೂ ಪೂರ್ವದೇಶದ ಪ್ರಜೆಗಳನ್ನೂ ರಾಜರನ್ನೂ ಧರ್ಮದಲ್ಲಿ ಸ್ಥಿರಗೊಳಿಸುತ್ತ ವಿಹಾರಿಸುತ್ತಿದ್ದನು. ಒಮ್ಮೆ ರೈವತಕಗಿರಿಗೆ ಬಂದನು. ಅಲ್ಲಿ ಸಮವಸರಣ ಶೋಭಿಸಿತು. ಇಂದ್ರಾದಿಗಳು ಜಿನೇಂದ್ರನಿಗೆ ವಂದಿಸಿ ಕುಳಿತರು. ಅಂತಃಪುರವನಿತೆಯರು, ಮಿತ್ರರು, ದ್ವಾರಿಕೆಯ ಪ್ರಜೆಗಳು, ಪ್ರದ್ಯುಮ್ನಾದಿ ಪುತ್ರಸಮೇತರಾದ ವಸುದೇವ ಬಲದೇವ ಕೃಷ್ಣರು ಬಂದು ವಂದಿಸಿ ಆ ಸಭೆಯಲ್ಲಿ ಉಚಿತಸ್ಥಾನಗಳಲ್ಲಿ ಕುಳಿತು ಧರ್ಮಶ್ರವಣಮಾಡಿದರು. ಆಮೇಲೆ ಬಲದೇವನು ಕೈಮುಗಿದುಕೊಂಡು ನೇಮಿಯಲ್ಲಿ ತನ್ನ ಹೃದಯಸ್ಥವಾದ ಮಾತೊಂದನ್ನು ಹೀಗೆ ಪ್ರಶ್ನಿಸಿದನು : "ಹೇ ಭಗವನ್, ಈ ದ್ವಾರಿಕೆ ವೈಶ್ರವಣನಿಂದ ನಿರ್ಮಿತವಾಗಿದೆ. ಇದರ ಅಂತ್ಯ ಎಷ್ಟು ಕಾಲಕ್ಕೆ ಆಗುವುದು ? ಕೃತಕವಾದ್ದು ನಶ್ವರವಷ್ಟೆ. ಈ ದ್ವಾರಿಕೆ ಕಾಲಾಂತರದಲ್ಲಿ ತನಗೆ ತಾನೆ ಸಮುದ್ರದಲ್ಲಿ ಮುಳುಗಿಹೋಗುವುದೇ ? ಇಲ್ಲ ನಿಮಿತ್ತಾಂತರದಿಂದ ವಿನಾಶವಾಗುವುದೇ ? ಕೃಷ್ಣನ ಅಂತ್ಯಕಾಲದಲ್ಲಿ ಯಾರು ನಿಮಿತ್ತವಾಗುವರು ? ಹುಟ್ಟುವುದು ಅಳಿಯುವುದಷ್ಟೆ ! ಪ್ರಭು, ನನ್ನ ಮನಸ್ಸು ಕೃಷ್ಣನ ಸ್ನೇಹಪಾಶದಿಂದ ಬದ್ಧವಾಗಿದೆ. ಆದ್ದರಿಂದ ನನಗೆ ಸಂಯಮಪ್ರಾಪ್ತಿ ಎಂದು ? "

ಆಗ ನೇಮಿ ಜಿನೇಂದ್ರನು ಅದನ್ನು ಹೀಗೆ ತಿಳಿಸಿದನು : " ಹೇ ರಾಮ, ಈ ಪಟ್ಟಣ ೧೨ನೆಯ ವರ್ಷದಲ್ಲಿ ಮದಿರೆಯ ನಿಮಿತ್ತವಾಗಿ ದ್ವೈಪಾಯನ ಮುನಿಯ

ಕ್ರೋಧದಿಂದಾಗಿ ಭಸ್ಮವಾಗುತ್ತದೆ ಅಂತಿಮ ಸಮಯದಲ್ಲಿ ಕೃಷ್ಣನು ಕೌಶಾಂಬಿಯ ವನದಲ್ಲಿ ಮಲಗಿರುತ್ತಾನೆ ; ಆಗ ಜರತ್ಕುಮಾರನು ಆತನ ಅಂತ್ಯಕ್ಕೆ ನಿಮಿತ್ತವಾಗುತ್ತಾನೆ. ಸಂಸಾರಭೀರುವಾದ ನೀನು ಕೂಡ ಆಗಲೇ ಕೃಷ್ಣನ ಮೃತ್ಯುಕಾರಣವಾಗಿ ತಪವನ್ನು ಹಿಡಿದು ಬ್ರಹ್ಮಕಲ್ಪದಲ್ಲಿ ಹುಟ್ಟುತ್ತೀಯೆ."

ರೋಹಿಣಿಗೆ ಸೋದರನಾದ ದ್ವೈಪಾಯನಕುಮಾರನೂ ಈಗ ವೈರಾಗ್ಯಗೊಂಡು ಮುನಿದೀಕ್ಷೆಗೊಂಡನು. ೧೨ ವರ್ಷಗಳ ಅವಧಿಯನ್ನು ಪೂರೈಸಲೆಂದು ಇಲ್ಲಿಂದ ಪೂರ್ವದೇಶದತ್ತ ಹೋದನು. ಅಲ್ಲಿ ತಪೋದ್ಯುಕ್ತನಾದನು. "ನನ್ನ ನಿಮಿತ್ತವಾಗಿ ಕೃಷ್ಣನಿಗೆ ಮೃತ್ಯುವಾಗುವುದು" ಎಂದು ತಿಳಿದ ಜರತ್ಕುಮಾರನು ನೊಂದು ಬಂಧುಗಳನ್ನು ಬಿಟ್ಟು ನಡೆದು ಕೃಷ್ಣನು ತನ್ನ ಕಣ್ಣಿಗೆ ಬೀಳದಂಥ ಕಡೆಗೆ ಎಲ್ಲೋ ಹೊರಟು ಹೋದನು. ಹೀಗೆ ಜರತ್ಕುಮಾರನು ವನಕ್ಕೆ ತೆರಳಿ ಒಂಟಿಯಾಗಿರತೊಡಗಿದಾಗ, ಪ್ರೀತಿ ಕಾರಣವಾಗಿ ವ್ಯಾಕುಲಹೃದಯನಾದ ಕೃಷ್ಣನಿಗೆ ಎಲ್ಲಾ ಶೂನ್ಯವಾಗಿ ತೋರಿತು. ಕೃಷ್ಣನಿಗೆ ಪ್ರಾಣಪ್ರಿಯನಾದ ಜರತ್ಕುಮಾರನು ಎಲ್ಲೋ ನಿರ್ಜನವನದಲ್ಲಿ ಪ್ರಾಣ ಬಿಡಲಿಚ್ಛಿಸಿ ಒಂಟಿಯಾಗಿ ಅಲೆದಾಡುತ್ತಿದ್ದನು. ಮುಂಬರುವ ದುಃಖಭಾರದಿಂದ ಸಂತಪ್ತರಾದ ಯಾದವರು ನೇಮಿಗೆ ಮಣಿದು ನಗರಕ್ಕೆ ಮರಳಿದರು. ಬಲದೇವನೊಡಗೂಡಿ ಕೃಷ್ಣನು ತನ್ನ ನಗರದಲ್ಲಿ "ಮದ್ಯಾಂಗಗಳನ್ನೂ ಮದ್ಯಗಳನ್ನೂ ಕೂಡಲೇ ಬೇರ್ಪಡಿಸುವುದಾಗಲಿ" ಎಂದು ಘೋಷಣೆ ಹೊರಡಿಸಿದನು. ಕೂಡಲೇ ಮದ್ಯಪಾಯಿಗಳು ಪಿಷ್ಟಕಿಣ್ವಾದಿಗಳಾದ ಮದ್ಯಾಂಗಗಳನ್ನೂ ಎಲ್ಲಾ ಮದ್ಯಗಳನ್ನೂ ಕಾದಂಬ ಗಿರಿಗಹ್ವರದ ಶಿಲಾಕುಂಡದಲ್ಲಿ ಎಸೆದು ಬಿಟ್ಟರು. ಕಂದಬವನ ಕುಂಡಗಳಲ್ಲಿ ಉಳಿದುಕೊಂಡ ಮದ್ಯವು ಅಶ್ಮಪಾಕ ವಿಶೇಷ ಕಾರಣವಾಗಿ ಆ ಕುಂಡಗಳಲ್ಲಿಯೇ ಇದ್ದುಕೊಂಡಿತು. ಕೃಷ್ಣನು ದ್ವಾರಿಕೆಯಲ್ಲಿ "ನನ್ನ ತಂದೆ ತಾಯಿ ಪುತ್ರಿಯರು ಅಥವಾ ಅಂತಃಪುರವನಿತೆಯರು ಮೊದಲುಗೊಂಡು ಯಾರಾದರೂ ಜಿನಮತಾನುಸಾರವಾಗಿ ದೀಕ್ಷೆಗೊಂಡು ತಪಸ್ಸು ಮಾಡಲೆಳಸಿದರೆ ನಾನು ಅವರನ್ನು ತಡೆಯುವುದಿಲ್ಲ" ಎಂದು ಇನ್ನೊಂದು ಘೋಷಣೆ ಹೊರಡಿಸಿದನು. ಆ ಘೋಷಣೆ ಕೇಳಿ ಪ್ರದ್ಯುಮ್ನನೂ ಭಾನುಕುಮಾರನೂ ಮೊದಲುಗೊಂಡು ಚರಮಶರೀರಗಳಾದ ಕುಮಾರರೆಲ್ಲ, ಮತ್ತಿತರರೆಲ್ಲ, ಪರಿಗ್ರಹವುಳಿದು ತಪೋವನಕ್ಕೆ ಹೋದರು. ರುಕ್ಮಿಣಿ ಸತ್ಯಭಾಮಾದಿ ಅಷ್ಟರಾಣಿಯರು ಸೊಸೆಯರೊಡಗೂಡಿ ಅನ್ಯಸವತಿಯರೊಡಗೊಂಡು ದೀಕ್ಷಾಗ್ರಹಣ ಮಾಡಿದರು. ಬಲದೇವನ ಸೋದರನಾದ ಸಿದ್ಧಾರ್ಥನೆಂಬ ಸಾರಥಿ ದೀಕ್ಷಾಗ್ರಹಣ ಮಾಡುವಾಗ, ಬಲದೇವನು ಅವನಿಗೆ "ಆಕಸ್ಮಿಕವಾಗಿ ನಾನು ಮೋಹಜನ್ಯವ್ಯಸನಕ್ಕೆ ಸಿಲುಕಿದರೆ .ನನ್ನನ್ನು ನೀನು ಪ್ರಬೋಧಿಸಬೇಕು" ಎಂದು ಬೇಡಿಕೊಂಡನು. ಈ ಪ್ರಾರ್ಥನೆಗೆ ಆತನು ಒಪ್ಪಿ ತಾನು ತಪವನ್ನು ಗ್ರಹಣಮಾಡಿದನು.

ಆಮೇಲೆ ನೇಮಿ ಮುನಿಸಂಘದೊಡನೆ ಪಲ್ಲವದೇಶಕ್ಕೆ ಹೋದನು. ದೀಕ್ಷಾಧಾರಿಗಳಾಗಿದ್ದ ರಾಜ ರಾಣಿಯರೂ ಇತರರೂ ಜಿನನೊಡನೆಯೇ ಉತ್ತರಾಪಥಕ್ಕೆ ಹೋಗಲು ಉದ್ಯತರಾದರು. ದ್ವಾರಿಕೆಯವರು ದ್ವಾರಿಕೆಯನ್ನು ಬಿಟ್ಟು ಹೊರಟು ೧೨ ವರ್ಷಕಾಲ

ಎಲ್ಲೋ ವನದಲ್ಲಿರುತ್ತಿದ್ದರು. ಆದರೆ ವಿಧಿವಿಲಾಸದಿಂದ ಮತ್ತೆ ದ್ವಾರಿಕೆಗೇ ಮರಳಿದರು. ಇತ್ತ ದ್ವಾರಿಕೆಯಲ್ಲಿದ್ದವರು ವ್ರತೋಪವಾಸ ಪೂಜಾದಿಗಳಲ್ಲಿಯೇ ಯಾವಾಗಲೂ ತೊಡಗಿರುತ್ತಿದ್ದರು. ಆಮೇಲೆ ಮಹಾತಪಸ್ಸುಮಾಡಿ ದ್ವೈಪಾಯನಮುನಿ ಭ್ರಾಂತಿವಶದಿಂದ ೧೨ ವರ್ಷಗಳು ಕಳೆದುವೆಂದು ಭಾವಿಸಿ ೧೨ನೆಯ ವರ್ಷದಲ್ಲಿಯೇ ಅಲ್ಲಿಗೆ ಹಿಂದಿರುಗಿದನು. ಅವನು ಕೆಲಕಾಲ ದ್ವಾರಿಕೆಯ ಹೊರಗೆ ಪರ್ವತದ ಬಳಿಯಲ್ಲಿಯ ಮಾರ್ಗದಲ್ಲಿಯೇ ಆತಪನಯೋಗವನ್ನು ಅನುಷ್ಠಿಸುತ್ತ, ಪ್ರತಿಮಾಯೋಗದಲ್ಲಿರುತ್ತಿದ್ದನು.

ಆವೇಳೆಗೆ ವನವಿಹಾರದಿಂದ ಆಯಾಸಗೊಂಡು ಬಾಯಾರಿಕೆಯಿಂದ ವ್ಯಾಕುಲಿತರಾದ ಶಂಬಾದಿಕುಮಾರರು ಕಾದಂಬವನದ ಕುಂಡಗಳಲ್ಲಿದ್ದ ಸುರೆಯನ್ನು ಕುಡಿದರು. ಕುಡಿದು ವಿಕೃತರೀತಿಯಲ್ಲಿ ವರ್ತಿಸತೊಡಗಿದರು. ಅದು ಹಳೆಯ ಮದಿರೆಯಾದ್ದರಿಂದ ಪರಿಪಾಕ ಕಾರಣವಾಗಿ ಅವರ ಕಣ್ಣುಗಳು ಕೆಂಪಾಗಿ ಅವರು ಆ ಮದಿರೆಯ ಸೆರೆಗೆ ಒಳಗಾದರು: ಹುಚ್ಚುಹುಚ್ಚಾಗಿ ಹಾಡಿದರು, ಕುಣಿದರು. ಕೂದಲು ಕೆದರಿತು. ಒಡವೆಗಳು ಅಸ್ತವ್ಯಸ್ತವಾದವು. ಕುತ್ತಿಗೆಗೆ ಕಾಡುಹೂಗಳ ಮಾಲೆ ಹಾಕಿಕೊಂಡರು. ಈಗ ಎಲ್ಲಾ ನಗರದತ್ತ ಸಾಗಿದಾಗ, ಸೂರ್ಯನಿಗೆ ಸಮ್ಮುಖನಾಗಿ ನಿಂತ ದ್ವೈಪಾಯನ ಮುನಿಯನ್ನು ಕಂಡು ಗುರುತಿಸಿದರು. ಅವರ ಕಣ್ಣುಗಳು ಹೊರಳಿದುವು. ತಮ್ಮಲ್ಲಿಯೇ "ಇಕೋ, ಇವನೇ ಆ ದ್ವೈಪಾಯನ ಮುನಿ ; ದ್ವಾರಿಕೆಯನ್ನು ನಾಶಮಾಡುವವನು; ಇವತ್ತು ಈ ಬಡಪಾಯಿ ನಮ್ಮೆದುರು ಎಲ್ಲಿಗೆ ತಾನೆ ಹೋದಾನು!" ಎಂದು ನುಡಿದು, ಆ ನಿರ್ದಯರಾದ ಕುಮಾರರು ಆ ಮುನಿಯನ್ನು ಮಣ್ಣಿನ ಮುದ್ದೆಗಳಿಂದಲೂ ಕಲ್ಲುಗಳಿಂದಲೂ ಅವನು ಗಾಯಗೊಂಡು ಕೆಳಗೆ ಬೀಳುವವರೆಗೆ ಚೆನ್ನಾಗಿ ಹೊಡೆದರು. ಆಮೇಲೆ ಕ್ರೋಧೋದ್ದೀಪ್ತನಾದ ಮುನಿ ಹಲ್ಲು ಕಡಿದನು. ಯಾದವರ ನಾಶಕ್ಕೂ ತನ್ನ ತಪಸ್ಸಿನ ಭ್ರಷ್ಟತೆಗೂ ಹುಬ್ಬುಗಂಟಿಕ್ಕಿದನು. ಆ ಮದಮತ್ತ ಹಸ್ತಿಗಳಂಥ ಕುಮಾರರು ದ್ವಾರಿಕೆಗೆ ಬರುತ್ತಲೂ ಅವರಲ್ಲಿ ಯಾರೋ ಒಬ್ಬ ಈ ದುರ್ಘಟನೆಯನ್ನು ಕೂಡಲೇ ಕೃಷ್ಣನಿಗೆ ತಿಳಿಸಿದನು. ಬಲದೇವ ವಾಸುದೇವರು ದ್ವೈಪಾಯನ ಸಂಬಂಧವಾದ ಈ ಘಟನೆಯನ್ನು ಕೇಳಿ ಜಿನೇಂದ್ರನು ದ್ವಾರಿಕೆಯ ನಾಶ ಕುರಿತು ಹೇಳಿದ್ದು ಈಗ ಸನ್ನಿಹಿತವಾಯಿತೆಂದು ತಿಳಿದರು. ಇಬ್ಬರೂ ಗಾಬರಿಯಿಂದ ಕೂಡಲೇ ಕ್ರೋಧೋದ್ದೀಪ್ತನಾದ ಮುನಿಯನ್ನು ಸಮಾಧಾನಪಡಿಸಿ ಕ್ಷಮೆಯಾಚಿಸಲು ಧಾವಿಸಿದರು. ಸಂಕ್ಲಿಷ್ಟಚೇತಸನೂ ಭ್ರೂಭಂಗವಿಷಮಾನನನೂ ಕಂಠಗತಪ್ರಾಣನೂ ದುರವಸ್ಥೆಯಿಂದ ಭಯಂಕರವಾಗಿ ಕಾಣುತ್ತಿದ್ದವನೂ ಆದ ಆತನನ್ನು ನೋಡಿದರು. ಆತನಿಗೆ ಕೈಮುಗಿದು ವಂದಿಸಿ, ತಮ್ಮ ಯಾಚನೆ ವ್ಯರ್ಥವಾಗುತ್ತದೆಂದು ತಿಳಿದಿದ್ದರೂ ಮೋಹವಶರಾಗಿ ಹೀಗೆ ಪ್ರಾರ್ಥಿಸಿದರು: "ಸಾಧು, ನೀನು ಬಹುಕಾಲದಿಂದ ಕಾಪಾಡಿಕೊಂಡು ಬಂದ ಕ್ಷಮೆಯೇ ಮುಖ್ಯವಾಗಿರುವ ಈ ತಪಸ್ಸು ಈಗ ಕ್ರೋಧಾಗ್ನಿಯಿಂದ ಉರಿಯುತ್ತಿದೆ. ಅದನ್ನು ಕಾಪಿಟ್ಟುಕೋ, ಕಾಪಿಟ್ಟುಕೋ. ಈ ಕ್ರೋಧ ಮೋಕ್ಷಸಾಧಕವಾದ ತಪಸ್ಸನ್ನು ಕ್ಷಣಮಾತ್ರದಲ್ಲಿ ದೂಷ್ಯ ಮಾಡುವುದು. ಇದು ಪುರುಷಾರ್ಥಗಳಿಗೆ ಶತ್ರು, ಇಹಪರನಾಶಕವಾದ್ದು. ಪ್ರಮಾದವಶ

ರಾಗಿ ಮೂಢರಾದ ಕುಮಾರರು ನಡಸಿದ ದುಷ್ಟಚೇಷ್ಟಿತಗಳನ್ನು ಮರೆತು ಅವರನ್ನು ಕ್ಷಮಿಸು. ನಮ್ಮ ಮೇಲೆ ಪ್ರಸನ್ನನಾಗು.'' ಈ ಮೊದಲಾಗಿ ಎಷ್ಟು ವಿಧದಲ್ಲಿ ಅವರು ಬೇಡಿಕೊಂಡರೂ ಮುನಿ ತನ್ನ ನಿಶ್ಚಯವನ್ನು ಕದಲಿಸಲಿಲ್ಲ. ಪಾಪಬುದ್ಧಿಯ ಆತನು ಸಜೀವವಾಗಿ ದ್ವಾರಿಕೆಯನ್ನು ಉರಿಸಿಬಿಡಲು ಕೃತನಿಶ್ಚಯನಾಗಿದ್ದನು. ಅವನು ಆಯಿಬ್ಬರಿಗೂ ಎರಡು ಬೆರಳನ್ನು ತೋರಿ, ತನ್ಮೂಲಕವಾಗಿ ಆ ಸಂಕೇತದಿಂದ ನಿಮ್ಮಿಬ್ಬರಿಗೆ ಮಾತ್ರ ಬಿಡುಗಡೆಯಲ್ಲದೆ, ಅನ್ಯರಿಗಲ್ಲ ಎಂಬುದನ್ನು ಸ್ಪಷ್ಟಪಡಿಸಿದನು.

ಬಲದೇವ ಕೃಷ್ಣರಿಗೆ ಈತನ ರೋಷ ತಗ್ಗದೆಂದು ತಿಳಿಯುತ್ತಲೂ ದ್ವಾರಿಕೆಯ ಕ್ಷಯವನ್ನು ನೆನೆದು ದುಃಖಿತರಾದರು. ಕಿಂಕರ್ತವ್ಯಮೂಢರಾಗಿ ನಗರದತ್ತ ತೆರಳಿದರು. ಆಗ ಶಂಬಕುಮಾರಾದಿಯಾಗಿ ಅನೇಕ ಚರಮಶರೀರಿಯಾದವರು ನಗರವನ್ನು ಬಿಟ್ಟು ಹೋಗಿ ದೀಕ್ಷೆ ವಹಿಸಿದರು. ಗಿರಿ ಗುಹೆ ಮೊದಲಾದವುಗಳಲ್ಲಿ ಇರತೊಡಗಿದರು. ಕ್ರೋಧಾಗ್ನಿಯಿಂದ ತಪ್ತ ತಪೋಧನನಾದ ದ್ವೈಪಾಯನ ಮುನಿ ಸತ್ತು, ಅಗ್ನಿಕುಮಾರನೆಂಬ ಮಿಥ್ಯಾದೃಷ್ಟಿಯ ಭವನವಾಸಿ ದೇವನಾದನು. ಅಲ್ಲಿ ಅಂತರ್ಮುಹೂರ್ತಕಾಲದಲ್ಲಿಯೇ ತನಗೆ ಯಾದವ ಕುಮಾರರಿಂದ ಉಂಟಾಗಿದ್ದ ಅಪಕಾರವನ್ನು ವಿಭಂಗಾವಧಿಜ್ಞಾನದಿಂದ ಅರಿತುಕೊಂಡನು. ರೌದ್ರಧ್ಯಾನತತ್ಪರನಾಗಿ ''ನೋಡಿದೆಯಾ, ನಾನು ನಿರಪರಾಧಿಯಾಗಿ ನನ್ನ ಪಾಡಿಗೆ ತಪೋಲೀನನಾಗಿದ್ದೆ; ಹಾಗಿದ್ದೂ ಈ ಜನ ನನ್ನನ್ನು ಹಿಂಸಿಸಿದರು. ನಾನು ಈ ಹಿಂಸಕರ ಸಮಸ್ತ ನಗರವನ್ನೇ ಸರ್ವಜೀವಾಳಿಸಮೇತನಾಗಿ ಈಗಿಂದೀಗಲೇ ಸುಟ್ಟು ಭಸ್ಮಮಾಡುತ್ತೇನೆ" ಎಂದು ಹೇಳಿಕೊಂಡನು. ಕ್ರೂರಪರಿಣಾಮಗಳ ಆ ದುರ್ನಿವಾರ್ಯನಾದ ದೇವನು ಬರುತ್ತಿದ್ದ ಹಾಗೆಯೇ ದ್ವಾರಿಕೆಯಲ್ಲಿ ಕ್ಷಯೋತ್ಪಾದಕ ಮಹಾ ಉತ್ಪಾತಗಳಾದುವು. ಪ್ರಜೆಗಳಿಗೆ ರಾತ್ರಿಯ ಸುಖನಿದ್ರೆಯಲ್ಲಿ ಭಯೋತ್ಪಾದಕ ಸ್ವಪ್ನಗಳಾದುವು.

ಕೊನೆಗೆ ಆ ಪಾಪಬುದ್ಧಿಯ ಕ್ರುದ್ಧದೇವನು ಬಂದು ಹೊರಗಿನಿಂದ ಆರಂಭಿಸಿ ಪ್ರಾಣಿಗಳೂ ಮನುಷ್ಯರೂ ತುಂಬಿದ ಆ ನಗರವನ್ನು ಸುಡಲು ತೊಡಗಿದನು. ಧೂಮಜ್ವಾಲಾಕುಲಿತವಾಗಿ ನಾಶಹೊಂದುತ್ತಿದ್ದ ವೃದ್ಧ ಸ್ತ್ರೀ ಬಾಲ ಪಶುಪಕ್ಷಿಗಳನ್ನು ಹಿಡಿದು ಹಿಡಿದು ಅಗ್ನಿಯಲ್ಲೆಸೆಯತೊಡಗಿದನು. ಪಾಪಿಗೆ ದಯೆಯೆಲ್ಲಿ ಬಂತು ? ಆಗಿನ ಅಗ್ನಿದಗ್ಧವಾಗುತ್ತಿದ್ದ ಜೀವಗಳ ಆಕ್ರಂದನ ಶಬ್ದ ಇನ್ನೆಂದೂ ಆಗಿರಲಿಲ್ಲ. ದಿವ್ಯಾಗ್ನಿಯಿಂದ ಆ ನಗರ ಹಾಗೆ ಸುಡುತ್ತಿರಲು ದೇವತೆಗಳೆಲ್ಲಾ ಎಲ್ಲೋ ಹೋಗಿಬಿಟ್ಟಿದ್ದರೆನ್ನಬೇಕು. ಭವಿಷ್ಯ ದುರ್ನಿವಾರ್ಯವಾದ್ದು. ಹಾಗಲ್ಲದೆ ಇಂದ್ರಾಜ್ಞೆಯಿಂದ ಕುಬೇರನಿರ್ಮಿತವಾದ, ಕುಬೇರರಕ್ಷಿತವಾದ ಆ ನಗರವು ಹಾಗೆ ಸುಟ್ಟು ಹಾಳಾಗುವುದೆಂದರೇನು ? "ಅಯ್ಯಾ ಬಲದೇವ ಕೃಷ್ಣರೇ, ನಾವು ಎಷ್ಟೋ ವೇಳೆಯಿಂದ ಅಗ್ನಿಬಾಧೆಗೆ ಸಿಕ್ಕಿದ್ದೇವೆ. ನಮ್ಮನ್ನು ಕಾಪಾಡಿ ಕಾಪಾಡಿ'' ಎಂದು ಆಬಾಲವೃದ್ಧರ ಮೊರೆ ದಿಕ್ಕುದಿಕ್ಕುಗಳಲ್ಲೂ ಕೇಳುತ್ತಿತ್ತು. ಗಾಬರಿಗೊಂಡ ಬಲದೇವ ಕೃಷ್ಣರು ಕೋಟೆಯನ್ನು ಮುರಿದು ಸಮುದ್ರಪ್ರವಾಹದಿಂದ ಅಗ್ನಿಯನ್ನಾರಿಸಲು ಯತ್ನಿಸಿದರು. ಬಲದೇವನು ತನ್ನ ಹಲಾಯುಧದಿಂದ ಸಮುದ್ರಜಲವನ್ನು ಸೆಳೆದನಾದರೂ ಆ ಜಲವು ಎಣ್ಣೆಯಂತೆ ಅಗ್ನಿಯನ್ನು ಮತ್ತಷ್ಟು ಪ್ರಜ್ವಲಿಸಲು ಸಹಾಯಕವಾಯಿತು.

ಬಲದೇವ ಕೃಷ್ಣರಿಗೆ ಅಗ್ನಿಯನ್ನು ತಡೆಯಲು ಅಶಕ್ಯವೆಂದು ನಿಶ್ಚಯವಾದಾಗ ಅವರು ತಮ್ಮ ತಾಯಂದಿರನ್ನೂ ತಂದೆಯನ್ನೂ ಮತ್ತಿತರ ಕೆಲವರನ್ನೂ ರಥದಲ್ಲಿ ಕೂರಿಸಿಕೊಂಡು ಅದಕ್ಕೆ ಹಸ್ತ್ಯಶ್ವಗಳನ್ನು ಹೂಡಿಕೊಂಡು ಹೊರಟರು. ಆದರೆ ರಥವು ನೆಲದಲ್ಲಿ ಹೂತುಕೊಂಡಿತು. ಹಸ್ತ್ಯಶ್ವಗಳು ನಿಷ್ಪ್ರಯೋಜನವಾಗಲು, ಸೋದರರಿಬ್ಬರೂ ತಾವೇ ತಮ್ಮ ಭುಜಗಳಿಂದ ರಥವೆಳೆದುಕೊಂಡು ಹೊರಟರು. ಆದರೆ ಆ ಪಾಪಿಯಾದ ದೇವನು ವಜ್ರಕೀಲದಿಂದ ರಥವನ್ನೂ ರಥಗತಿಯನ್ನೂ ತಡೆದನು. ಬಲದೇವನು ತನ್ನ ಪದಾಘಾತದಿಂದ ಆ ವಜ್ರಕೀಲವನ್ನು ಕೀಳುತ್ತಿದ್ದಾಗ, ಆ ದೈತ್ಯನು ಗೋಪುರದ್ವಾರವನ್ನು ಮುಚ್ಚಿಬಿಟ್ಟನು. ಆಗ ಸೋದರರಿಬ್ಬರೂ ಮತ್ತೆ ಪದಾಘಾತಗಳಿಂದ ಆ ಬಾಗಿಲ ಕದಗಳನ್ನುರುಳಿಸಿಬಿಟ್ಟರು. ಅಷ್ಟರಲ್ಲಿ ಶತ್ರು ''ನಿಮ್ಮಿಬ್ಬರು ವಿನಾ ಮತ್ತಾರೂ ಇಲ್ಲಿಂದ ಹೊರಬೀಳುವುದು ಶಕ್ಯವಿಲ್ಲ"—ಎಂದು ಹೇಳಿಬಿಟ್ಟನು. ''ಈಗ ಇನ್ನು ತಾವು ಸಾಯುವುದು ಖಂಡಿತ'' ಎಂದು ತಿಳಿದಾಗ ಅವರ ತಾಯಂದಿರೂ ತಂದೆಯೂ ದುಃಖಿತರಾಗಿ, ''ಮಕ್ಕಳೇ, ನೀವಿಬ್ಬರೂ ಹೋಗಿ. ನೀವಿಬ್ಬರಾದರೂ ಬದುಕಿಕೊಂಡರೆ ವಂಶಘಾತವಾಗದು'' ಎಂದರು. ಕೃಷ್ಣ ಬಲದೇವರು ಅತಿದುಃಖದಿಂದ ತಂದೆತಾಯ್ಗಳ ಕಾಲ್ಗೆರಗಿ ಬೀಳ್ಕೊಂಡರು. ಹೀಗೆ ಅಗ್ನಿದಗ್ಧನಗರಿಯಿಂದ ಹೊರಬಿದ್ದು ಸಾಗಿದ ಆ ಸೋದರರಿಗೆ ಮೊದಲು ಎಲ್ಲಿಗೆಂದು ಹೋಗುವುದು ತಿಳಿಯಲಿಲ್ಲ. ಬಲು ಹೊತ್ತು ಪರಸ್ಪರರನ್ನು ಅಪ್ಪಿ ಗೋಳಾಡಿದರು. ಆಮೇಲೆ ದಕ್ಷಿಣ ದಿಕ್ಕಿನತ್ತ ನಡೆದರು. ಇತ್ತ ವಸುದೇವಾದಿ ಯಾದವರೂ ಅವರ ಪತ್ನಿಯರೂ ಸಂನ್ಯಾಸಗ್ರಹಣಮಾಡಿ ಸ್ವರ್ಗದಲ್ಲಿ ಹುಟ್ಟಿದರು. ಬಲದೇವನ ಪುತ್ರರಾದಿಯಾಗಿ ಚರಮಶರೀರಿಗಳಾದವರು ಅಲ್ಲಿಯೇ ಸಂನ್ಯಾಸ ಗ್ರಹಿಸಿದರು. ಜೃಂಭಕದೇವನು ಅವರನ್ನು ಜಿನೇಂದ್ರನಲ್ಲಿಗೆ ಕೊಂಡೊಯ್ದನು. ಧರ್ಮಧ್ಯಾನ ತತ್ಪರರಾಗಿ ಪ್ರಾಯೋಪಗಮನ ಸಂನ್ಯಸನದಿಂದ ಹಲವು ಯಾದವರೂ ಅವರ ಪತ್ನಿಯರೂ ಪ್ರಾಣಪರಿತ್ಯಾಗ ಮಾಡಿದರು.

ವಿಧಿವಶನೂ ಕ್ರೋಧಾಂಧನೂ ಆದ ದ್ವೈಪಾಯನನು ಜಿನವಚನವನ್ನು ಬಿಟ್ಟು ಹೆಂಗಸರು ಮಕ್ಕಳು ಮೊದಲಾಗಿ ತುಂಬಿದ್ದ ದ್ವಾರಿಕಾನಗರವನ್ನು ಆರು ತಿಂಗಳಲ್ಲಿ ಭಸ್ಮಮಾಡಿ ನಾಶಮಾಡಿಬಿಟ್ಟನು. ಆದ್ದರಿಂದ ತನಗೂ ಇತರರಿಗೂ ಅಪಕಾರಮಾಡುವ, ಸಂಸಾರಕ್ಲೇಶಗಳನ್ನು ಬೆಳಸುವ ಈ ಕ್ರೋಧಕ್ಕೆ ಧಿಕ್ಕಾರವಿರಲಿ.

೬೨. ಹರಿಗತ್ಯಂತರ ವರ್ಣನ

ಈ ಮೊದಲು ತಮ್ಮ ಪುಣ್ಯಬಲದಿಂದ ಲೋಕೋತ್ತರವಾದ ಉನ್ನತಿಗೆ ಪಾತ್ರರೂ ಚಕ್ರಾದಿ ರತ್ನಯುತರೂ ಬಲಿಷ್ಠರೂ ಆಗಿದ್ದ ಬಲದೇವ ಕೃಷ್ಣರು ಈಗ ಪುಣ್ಯ ಕ್ಷೀಣವಾಗಲು ರತ್ನಾದಿಗಳಿಂದಲೂ ಬಂಧುಗಳಿಂದಲೂ ಪರಿಚ್ಯುತರಾಗಿ ಪ್ರಾಣವೊಂದುಳಿಸಿ

ಕೊಂಡು ಶೋಕಾಕುಲಿತರಾಗಿದ್ದರು. ಈಗ ದಕ್ಷಿಣದಿಕ್ಕಿನತ್ತ ಸಾಗಿದರು. ಹಸಿವು ಬಾಯಾರಿಕೆಗಳಿಂದ ಬಳಲಿ ದಾರಿಯಲ್ಲಿ ಒಳ್ಳೆಯ ಆಶ್ರಯವನ್ನು ಅಪೇಕ್ಷಿಸುತ್ತಿದ್ದರು. ಪಾಂಡವರನ್ನು ಲಕ್ಷ್ಯವಾಗಿರಿಸಿಕೊಂಡು ದಕ್ಷಿಣಮಥುರೆಯತ್ತ ಹೋಗುತ್ತಿರುವಾಗ ಹಸ್ತವಪ್ರವೆಂಬ ಪುರವೆದುರಾಯಿತು. ಕೃಷ್ಣನು ಅಲ್ಲಿಯ ಉದ್ಯಾನದಲ್ಲಿ ತಂಗಿದನು. ಬಲದೇವನು ಗುರುತು ಹೇಳಿ, ವಸ್ತ್ರದಿಂದ ತನ್ನ ಸರ್ವಾಂಗವನ್ನೂ ಮುಚ್ಚಿಕೊಂಡು, ಅನ್ನಪಾನಗಳನ್ನು ತರಲೆಂದು ನಗರದೊಳಗೆ ಹೋದನು. ನಗರದಲ್ಲಿ ಅಚ್ಛದಂತನೆಂಬರಸು ಆಳುತ್ತಿದ್ದನು. ಅವನು ಧೃತರಾಷ್ಟ್ರನ ವಂಶಿಕನು ; ಪ್ರಸಿದ್ಧ ಧನುರ್ಧರನು ; ಯಾದವರ ವಿಷಯದಲ್ಲಿ ರಂಧ್ರಾನ್ವೇಷಕ ಬುದ್ಧಿಯುಳ್ಳವನು. ಅಲ್ಲಿಯ ನಾಗರಿಕರು ಬಲದೇವನ ರೂಪದಿಂದ ಆಕರ್ಷಿತರಾಗಿ ಆಶ್ಚರ್ಯದಿಂದ ನಿಂತು ನೋಡುತ್ತಿದ್ದರು. ಬಲದೇವನು ಯಾವನೋ ಅಂಗಡಿಯಾತನಿಗೆ ತನ್ನ ಕಡಗ ಕುಂಡಲಗಳನ್ನು ಕೊಟ್ಟು ಅವನಿಂದ ಅನ್ನಪಾನ ಸಾಮಗ್ರಿಗಳನ್ನು ಕೊಂಡು ಹಿಂದಿರುಗುತ್ತಿರುವಾಗ ರಾಜನ ಪಹರೆಯವನು ಕಂಡು ಅವನು ಬಲದೇವನೆಂಬುದನ್ನು ಗುರುತಿಸಿ ರಾಜನಿಗೆ ಸುದ್ದಿಯಿತ್ತನು. ಮತ್ತೇನು ? ರಾಜನು ಅವನ ವಧೆಗಾಗಿ ತನ್ನ ಸರ್ವಸೇನೆಯನ್ನೂ ಕಳಿಸಿದನು. ನಗರದ್ವಾರದೆಡೆ ಬಲದೇವನನ್ನು ತಡೆಯಲು ದೊಡ್ಡ ದಂಡು ಸೇರಿತು. ಬಲದೇವನು ಸಂಕೇತಮಾಡಿ ಕೃಷ್ಣನನ್ನು ಕರೆಯಲು ಅವನು ಕೂಡಲೇ ಅಲ್ಲಿಗೆ ಬಂದನು. ಬಲದೇವನು ಅನ್ನಪಾನವನ್ನು ಎಲ್ಲಿಯೋ ಒಂದೆಡೆ ಜೋಕೆಯಾಗಿರಿಸಿ, ಗಜಸ್ತಂಭವೊಂದನ್ನೆತ್ತಿಕೊಂಡನು. ನಸುಕೆರಳಿದ ಕೃಷ್ಣನು ಉಗ್ರಪರಿಘವನ್ನೆತ್ತಿಕೊಂಡನು. ಇವರಿಂದ ಏಟುತಿಂದ ಚತುರಂಗಬಲ ಸೇನಾಪತಿ ಸಮೇತವಾಗಿ ಬೆದರಿ ಓಡಿತು. ಆಮೇಲೆ ಅನ್ನಪಾನವನ್ನು ಪಡೆದುಕೊಂಡು ಸೋದರರು ನಗರದಿಂದ ಹೊರಹೊರಟು ವಿಜಯವನಕ್ಕೆ ಹೋದರು. ಅಲ್ಲಿಯ ಸರೋವರದಲ್ಲಿ ಸ್ನಾನಮಾಡಿ ಹೃದಯಸ್ಥಿತ ಜಿನೇಂದ್ರನಿಗೆ ವಂದಿಸಿ, ಉಂಡು ನೀರ್ಗುಡಿದು, ವಿಶ್ರಾಂತಿಗೊಂಡರು. ಮತ್ತೆ ದಕ್ಷಿಣದಿಕ್ಕಿನ ಕಡೆಗೆ ಹೊರಟರು.

ಕೌಶಾಂಬಿಯೆಂಬ ದುರ್ಗಮವಾದ ಅರಣ್ಯವನ್ನು ಹೊಕ್ಕರು. ಆ ವನವಾದರೋ ಕೂಗುವ ನರಿಗಳು. ತೃಷಾರ್ತ ಮೃಗಗಳು, ಗ್ರೀಷ್ಮಾನಿಲ, ದವಾನಲ ಇವುಗಳಿಂದ ಭಯಂಕರವಾಗಿತ್ತು. ನೀರು ಸಿಗುವಂತಿರಲಿಲ್ಲ. ಇಂಥ ವನದಲ್ಲಿ ನಡುನೆತ್ತಿಯ ಸೂರ್ಯ ಸುಡುತ್ತಿರುವಾಗ ಕೃಷ್ಣನು ಬಳಲಿ ಬಲದೇವನಿಗೆ "ಆರ್ಯ, ನನಗೆ ವಿಪರೀತ ಬಾಯಾರಿಕೆ, ನನ್ನ ತುಟಿ ಗಂಟಲು ಒಣಗುತ್ತಿವೆ ; ಇಲ್ಲಿಂದ ಒಂದು ಹೆಜ್ಜೆಕೂಡ ನಾನು ನಡೆಯಲಾರೆ; ನನಗೆ ಕುಡಿಯಲು ತಣ್ಣೀರು ಬೇಕು" ಎಂದನು. ಬಲದೇವನು ಎದೆಗರಗಿ ಕೃಷ್ಣನಿಗೆ "ನಾನು ಈಗಲೇ ನಿನಗೆ ನೀರು ತಂದು ಕೊಡುತ್ತೇನೆ. ಆವರೆಗೆ ನೀನು ಜಿನೇಂದ್ರ ಸ್ಮರಣೆಯಲ್ಲಿರು. ಅದಾದರೋ ಕೆಲಕಾಲದವರೆಗೆ ಮಾತ್ರ ಬಾಯಾರಿಕೆ ಕಳೆಯುತ್ತದೆ. ಇದಾದರೆ ಸಮೂಲವಾಗಿ ತೃಷ್ಣಾಪರಿಹಾರ ಮಾಡುತ್ತದೆ. ಈಗ ಈ ಮರದ ನೆರಳಲ್ಲಿ ಕುಳಿತುಕೋ. ನಾನು ಹೋಗಿ ಸರಸ್ಸಿನಿಂದ ನಿನಗೆ ನೀರು ತರುತ್ತೇನೆ"—ಎಂಬುದಾಗಿ ತಿಳಿಸಿ, ತನ್ನ ಶ್ರಮವನ್ನು ಲೆಕ್ಕಿಸದೆ ನೀರಿಗಾಗಿ ಹೋದನು. ಇತ್ತ ಕೃಷ್ಣನು ಬಲ

ದೇವನು ಹೇಳಿದ ಮರದಡಿಯ ನೆರಳಿಗೆ ಹೋಗಿ ಸೇರಿ, ಕೋಮಲವಸ್ತ್ರದಿಂದ ಶರೀರವನ್ನು ಮುಸುಕಿಕೊಂಡು, ಮೃದುವಾದ ಮಣ್ಣಿನ ಮೇಲೆ ಮಲಗಿಕೊಂಡನು. ಬಳಲಿಕೆ ಹೋಗಲೆಂದು ಎಡಜಾನುವಿನ ಮೇಲೆ ಬಲಗಾಲನ್ನಿಟ್ಟು ಮಲಗಿ ತುಸುಹೊತ್ತು ನಿದ್ದೆ ಹೋದನು. ಮೃಗಯಾವ್ಯಸನ ಪ್ರಿಯನಾದ ಜರತ್ಕುಮಾರನು ಏಕಾಕಿಯಾಗಿ ಆ ವನದಲ್ಲಿ ಸುತ್ತಾಡುತ್ತಿದ್ದು ಯದೃಚ್ಛೆಯಿಂದ ಆಯೆಡೆಗೆ ಬಂದನು. ಕೃಷ್ಣನ ಮೇಲಿನ ಪ್ರೀತಿಯಿಂದಾಗಿ ಅವನ ಮೃತ್ಯು ತನ್ನಿಂದಾಗದಿರಲೆಂದು ದ್ವಾರಿಕೆಯನ್ನು ಬಿಟ್ಟು ಹೊರಟು ಪ್ರಾಣಿಯಂತೆ ಅರಣ್ಯದಲ್ಲಿ ಸೇರಿಕೊಂಡಿದ್ದ ಆತನೇ ವಿಧಿವಿಲಾಸದಿಂದ ಕೃಷ್ಣನಿದ್ದೆಡೆಗೆ ಬರುವಂತಾದುದು ಎಂಥ ದೈವಯೋಗ !

ಧನುರ್ಧರನಾದ ಜರತ್ಕುಮಾರನಿಗೆ ದೂರದಿಂದಲೇ ಮುಂದಕ್ಕೆ ನೋಡಲು ಏನೋ ಅಸ್ಪಷ್ಟವಾಗಿ ಕಾಣಿಸಿತು. ಆಗ ಕೃಷ್ಣನ ಬಟ್ಟೆಯ ಕೊನೆ ಗಾಳಿಗೆ ಅಲುಗಾಡುತ್ತಿದ್ದು, ಆತನಿಗೆ ಬಳಿಯಲ್ಲಿಯೇ ನಿದ್ದೆಯಲ್ಲಿರುವ ಮೃಗದ ಕಿವಿ ಚಲಿಸುತ್ತಿದೆ ಎಂಬ ಭ್ರಾಂತಿಯುಂಟಾಯಿತು. ಮತ್ತೇನಿದೆ ? ಮರದಿಂದಾಗಿ ತಾನು ಮರೆಯಲ್ಲಿದ್ದುಕೊಂಡು ಜರತ್ಕುಮಾರನು ವ್ಯಾಧಬುದ್ಧಿಯುವನಾಗಿ ಆಕರ್ಣಾಂತವಾಗಿ ಬಿಲ್ಲೆಳೆದು ತೀಕ್ಷ್ಣಾಸ್ತ್ರವನ್ನು ಸೆಳೆದುಬಿಟ್ಟು ಕೃಷ್ಣನ ಕಾಲಿಗೆ ಹೊಡೆದನು. ಅಂಗಾಲು ಕೊರೆದುಹೋಗಿ, ಕೃಷ್ಣನು ತಟ್ಟನೆ ಎದ್ದುಕೂತನು. ದಿಕ್ಕೆಲ್ಲ ನೋಡುವಾಗ ಯಾರೂ ಕಾಣಿಸಲಿಲ್ಲ. ಆಗ ಗಟ್ಟಿಯಾಗಿ "ಯಾವ ವೈರಿ ನಿಷ್ಕಾರಣವಾಗಿ ನನ್ನ ಅಂಗಾಲಿಗೆ ಹೊಡೆದಿದ್ದಾನೆ ? ಅವನು ಇಲ್ಲಿ ನನಗೆ ತನ್ನ ಕುಲವನ್ನೂ ಹೆಸರನ್ನೂ ಸ್ಪಷ್ಟವಾಗಿ ಹೇಳಲಿ. ನಾನು ಯುದ್ಧದಲ್ಲಿ ಎಂದೂ ಅಜ್ಞಾತಕುಲ, ಅಜ್ಞಾತನಾಮನಾದ ಮನುಷ್ಯನನ್ನು ವಧಿಸಲಿಲ್ಲ. ಅಂಥ ನನಗೇ ಇದೆಂಥ ಆಪತ್ತು ಬಂತು ? ಆದ್ದರಿಂದ ಹೇಳಯ್ಯ, ಅಜ್ಞಾತಕುಲನೂ ಅಜ್ಞಾತನಾಮನೂ ಆದ ನೀನಾರು ? ಅಜ್ಞಾತವೈರ ಸಂಬಂಧದ ಯಾವಾತನು ನನ್ನನ್ನೀಗ ಹೊಡೆದವನು ?"---ಎಂದನು. ಇದಕ್ಕೆ ಉತ್ತರವಾಗಿ ಜರತ್ಕುಮಾರನು "ಹರಿವಂಶೋತ್ಪನ್ನನಾದ ವಸುದೇವನೆಂಬ ಅರಸುಂಟು. ಈತನು ಬಲದೇವಕೃಷ್ಣರ ತಂದೆ. ಆ ವಸುದೇವನ ನಚ್ಚಿನ ಮಗನಾದ ನಾನ, ಜರತ್ಕುಮಾರನೆಂಬವನು. ಭೀರುಗಳಿಗೆ ದುಷ್ಪ್ರವೇಶ್ಯವಾದ ಈ ವನದಲ್ಲಿ ವೀರನಾದ ನಾನು ಒಂಟಿಯಾಗಿ ಅಲೆಯುತ್ತಿರುತ್ತೇನೆ. ನೇಮಿಜಿನೇಂದ್ರನು ಜರತ್ಕುಮಾರನ ಮೂಲಕ ಕೃಷ್ಣನ ಮರಣವಾಗುವುದೆಂದು ಆದೇಶ ನುಡಿದಿದ್ದನು. ಅದಕ್ಕೆ ಹೆದರಿ ೧೨ ವರ್ಷಗಳಿಂದ ಈ ವನದಲ್ಲಿ ನಾನಿರುತ್ತಿದ್ದೇನೆ. ನನಗೆ ನನ್ನ ತಮ್ಮ ಕೃಷ್ಣನಲ್ಲಿ ತುಂಬ ಅಕ್ಕರೆ. ಆದ್ದರಿಂದ ಇಷ್ಟುಕಾಲದಿಂದ ಇಲ್ಲಿರುತ್ತಿದ್ದೇನೆ. ಈ ನಡುವೆ ಇಲ್ಲಿ ನಾನು ಯಾವೊಬ್ಬ ಆರ್ಯನ ಹೆಸರು ಕೂಡ ಕೇಳಿಲ್ಲ. ಹೀಗಿರುವಾಗ ನೀನಾರು ಇಲ್ಲಿ ?" ಎಂದು ಉತ್ತರಿಸಿದನು. ಕೃಷ್ಣನಿಗೆ ಮಾತಾಡುವವನು ತನ್ನ ಸೋದರನೆಂದು ಕೂಡಲೇ ತಿಳಿದು, ಸ್ನೇಹಕಾತರನಾಗಿ "ಸೋದರಾ, ಇಲ್ಲಿ ಬಾ, ಇಲ್ಲಿ ಬಾ" ಎಂದು ಕೂಗಿದನು. ಜರತ್ಕುಮಾರನಿಗೂ ಕರೆದವನು ತನ್ನ ತಮ್ಮನಾದ ಕೃಷ್ಣನೇ ಎಂದು ತಿಳಿಯಿತು. "ಅಯ್ಯೋ ಅಯ್ಯೋ" ಎಂದು ಕೂಗುತ್ತ ಅಲ್ಲಿಗೆ ಬಂದು ತನ್ನ ಧನುರ್ಬಾಣ

ಗಳನ್ನೆಸೆದು ಕೃಷ್ಣನ ಕಾಲ ಮೇಲೆ ಬಿದ್ದನು. ಕೃಷ್ಣನು ಅವನನ್ನು ಮೇಲೆತ್ತಿ ಅಪ್ಪಿಕೊಂಡು ಅಳತೊಡಗಿದನು, ಕೃಷ್ಣನು "ಅಣ್ಣ ಅಳಬೇಡ. ಆಗಬೇಕಾದ್ದು ಆಗದೇ ಹೋಗದು. ನಿನ್ನಿಂದ ಪ್ರಮಾದವಾಗುವುದು ತಪ್ಪಲೆಂದು ನೀನು ಸಮಸ್ತಸುಖಸಂಪದಗಳನ್ನೂ ಬಿಟ್ಟು ಬಂದು ಕಾಡಿನಲ್ಲಿರುತ್ತಿದ್ದೆ. ಅಪಯಶದಿಂದಲೂ ಪಾಪದಿಂದಲೂ ಹೆದರುವ ಸಜ್ಜನನು ಬುದ್ಧಿಪೂರ್ವಕವಾಗಿ ಪ್ರಯತ್ನಿಸುತ್ತಾನಾದರೂ ದೈವವು ಕುಟಿಲವಾದ್ದರಿಂದ ಆ ಪ್ರಯತ್ನದಿಂದೇನಾದೀತು"—ಎಂದು ಸಮಾಧಾನ ಹೇಳಿದನು.

ಜರತ್ಕುಮಾರನು ಕೃಷ್ಣನು ವನಕ್ಕೆ ಬಂದುದೇಕೆಂದು ಕೇಳಿದನು. ಆಗ ಕೃಷ್ಣನು ಮೊದಲಿಂದ ಹಿಡಿದು ದ್ವಾರಿಕಾದಾಹದವರೆಗೆ ಸರ್ವದಾರುಣವೃತ್ತಾಂತವನ್ನೂ ಅವನಿಗೆ ಹೇಳಿದನು. ಗೋತ್ರಕ್ಷಯವನ್ನು ಕೇಳಿ ಜರತ್ಕುಮಾರನು "ತಮ್ಮ, ಹಲಗಾಲದ ಮೇಲೆ ನಿನ್ನನ್ನು ಕಂಡೆ ; ಇಂಥ ಅತಿಥಿಸತ್ಕಾರ ನೀಡಿದೆ ; ನಾನೇನು ಮಾಡಲಿ ? ಎಲ್ಲಿಗೆ ಹೋಗಲಿ ? ಮನಸ್ಸಿಗೆ ನೆಮ್ಮದಿಯೆಲ್ಲಿ ? ಕೃಷ್ಣಾ, ನಿನ್ನನ್ನು ಕೊಂದು ಲೋಕದಲ್ಲಿ ದುಃಖಕ್ಕೂ ಅಪಕೀರ್ತಿಗೂ ನಾನು ಗುರಿಯಾದೆ"—ಎಂದು ಮೊದಲಾಗಿ ಪ್ರಲಾಪಿಸಿದನು. ಕೃಷ್ಣನು "ಅಳಬೇಡ, ಸಮಸ್ತ ಜಗತ್ತೂ ನಿನ್ನಿಂದಾದ ಕರ್ಮವನ್ನು ತಪ್ಪದೆ ಭೋಗಿಸುತ್ತದೆ. ಬದುಕಿನಲ್ಲಿ ಯಾರು ಯಾರಿಗೆ ಸುಖವನ್ನು ಅಥವಾ ದುಃಖವನ್ನು ಕೊಡುತ್ತಾರೆ? ಯಾರು ಯಾರಿಗೆ ಶತ್ರು ಅಥವಾ ಮಿತ್ರ ? ಹಿರಿಯಣ್ಣ ಬಲದೇವನು ನನಗಾಗಿ ನೀರು ತರಲು ಹೋಗಿದ್ದಾನೆ. ಅವನು ಬರುವುದರೊಳಗೆ ನೀನು ಹೊರಟುಹೋಗು. ಆತ ನಿನ್ನ ಮೇಲೆ ಕೋಪಿಸಬಹುದು. ನೀನು ಹೋಗು, ಮೊದಲಿಂದ ಹಿಡಿದು ಪಾಂಡವರಿಗೆ ಎಲ್ಲಾ ಸುದ್ದಿಯನ್ನೂ ತಿಳಿಸು. ಅವರು ನಮ್ಮ ವಂಶದ ಹಿತೈಷಿಗಳು, ಆಪ್ತರು. ಅವರು ನಿನಗೆ ರಕ್ಷೆಯಾಗುತ್ತಾರೆ" ಎಂಬುದಾಗಿ ಹೇಳಿ, ಗುರುತಿಗೆಂದು ತನ್ನ ಕೌಸ್ತುಭಮಣಿಯಿತ್ತನು. ಸ್ವಲ್ಪ ತಡೆದು "ಇನ್ನು ಹೋಗು" ಎಂದನು. ಕೈಯಲ್ಲಿ ಕೌಸ್ತುಭಮಣಿಯನ್ನು ಕೊಂಡು ಜರತ್ಕುಮಾರನು "ದೇವಾ, ನನ್ನನ್ನು ಕ್ಷಮಿಸು" ಎಂದು ನುಡಿದು, ಮೆಲ್ಲಗೆ ಬಾಣವನ್ನು ಕಿತ್ತು, ಅಲ್ಲಿಂದ ಹೆಜ್ಜೆ ಹಿಂದುಮುಂದಾಗಿ ಹೊರಟುಹೋದನು. ಅವನು ಅತ್ತ ಹೋಗಲು ಇತ್ತ ಕೃಷ್ಣನಿಗೆ ಬಾಣದ ಪೆಟ್ಟಿನಿಂದಾದ ಗಾಯದ ನೋವು ಹೆಚ್ಚಾಯಿತು. ಉತ್ತರಾಭಿಮುಖವಾಗಿ ಪಂಚನಮಸ್ಕಾರ ಮಾಡಿದನು. ನೇಮಿಯನ್ನು ಸ್ಮರಿಸಿ ಬಾರಿಬಾರಿಗೆ ವಂದಿಸಿದನು. ತಲೆಯಿಟ್ಟು ನೆಲದಮೇಲೆ ಮಲಗಿದನು. ಶರೀರವನ್ನು ವಸ್ತ್ರದಿಂದ ಪೂರ್ತಿ ಮುಚ್ಚಿಕೊಂಡನು. ಸರ್ವಪರಿಗ್ರಹಗಳಿಂದಲೂ ನಿವೃತ್ತಮನಸ್ಕನಾದನು. "ಪುತ್ರಪೌತ್ರಾದಿಗಳು ಮುಂತಾಗಿ ಬಾಂಧವರೆಲ್ಲ ಭವಿಷ್ಯವನ್ನು ಚಿಂತಿಸಿ ಅಗ್ನಿಯ ಉಪದ್ರವಕ್ಕೆ ಮೊದಲೇ ತಪಶ್ಚರಣೆಗೊಂಡು ಧನ್ಯರಾದರು. ಸಾವಿರಾರು ಪತ್ನಿಯರೂ ಮಿತ್ರರೂ ತಪಸ್ಸಿನ ಕಷ್ಟ ತಾಳದೆ ಅಗ್ನಿಮುಖದಲ್ಲಿ ಸತ್ತರು. ಕರ್ಮಭಾರದಿಂದ ನಾನು ತಪಸ್ಸುಮಾಡದೆ ಹೋದೆ. ಸಮ್ಯಕ್ತ್ವವೇ ನನ್ನನ್ನು ಸಂಸಾರತಾಪದಿಂದ ಎತ್ತುವ ಹಸ್ತಾವಲಂಬನವಾಗಲಿ"—ಹೀಗೆ ಶುಭವಿಚಾರದಿಂದ, ಭಾವಿತೀರ್ಥಂಕರನಾಗುವ ಕೃಷ್ಣನು ಮೊದಲಿಂದಲೂ ಬದ್ಧಾಯುಷ್ಯಕನಾದ್ದರಿಂದ, ಸತ್ತು ಮೂರನೆಯ ಸ್ವರ್ಗದಲ್ಲಿ ಹುಟ್ಟಿದನು. ಸಾವಿರವರ್ಷ ಕಾಲ

ನರಕದಲ್ಲಿ

ಬದುಕಿದ್ದು, ತನ್ನ ಆಚರಣಕ್ಕೆ ಅನುರೂಪವಾಗಿ ಮೂರನೆಯ ನೆಲೆಗೆ ಹೋದನು.

೬೩. ಬಲದೇವತಪೋವರ್ಣನ

ಬಲದೇವನಾದರೋ ನೀರು ಹುಡುಕಿತರಲು ತುಂಬ ಕಷ್ಟಪಟ್ಟನು. ಹೃದಯಸ್ಥಲದಲ್ಲಿ ಕೃಷ್ಣನನ್ನು ಧರಿಸಿ ಮುನ್ನಡೆಯುತ್ತಿದ್ದನು. ಅಪಶಕುನ ಹೆಜ್ಜೆಹೆಜ್ಜೆಗೂ ಅವನನ್ನು ತಡೆಯುತ್ತಿದ್ದರೂ ಅವನು ಬೇರೊಂದು ವನದಲ್ಲಿ ಬಲುದೂರ ಹೋದನು. ಮೃಗಗಳ ಹಿಂಡು ಹೋಗುತ್ತಿದ್ದ ಕಡೆಯೇ ಧಾವಿಸಿ ಹೋಗುತ್ತಿದ್ದನು. ಮರೀಚಿಕೆಯನ್ನು ನೀರೆಂದು ತಿಳಿದು ಭ್ರಾಂತಿಪಡುತ್ತಿದ್ದನು. ಆಗ ಅವನಿಗೆ ದಿಕ್ಕೆಲ್ಲ ಪ್ರೋತ್ತರಂಗ ಸರಸೀಮಯವಾಗಿಯೇ ತೋರುತ್ತಿತ್ತು. ಕೊನೆಗೊಂದು ದಿಟವಾದ ಸರೋವರ ಕಂಡಿತು. ಸಮಾಧಾನದ ನಿಟ್ಟುಸಿರು ಬಿಟ್ಟನು. ಶೀತಲಸುಗಂಧಾನಿಲ ಬೀಸಿತು. ತೃಷಾರ್ತ ವನ್ಯಮೃಗಗಳು ಅಲ್ಲಿಗೆ ನಾಲ್ಕೂ ದಿಕ್ಕುಗಳಿಂದ ಬಂದು ಬಲದೇವನತ್ತ ಭಯಪೂರ್ಣದೃಷ್ಟಿಗಳಿಂದ ನೋಡುತ್ತಿದ್ದುವು. ಬಲದೇವನು ಘಟ್ಟದಲ್ಲಿ ಮಿಂದು ನೀರ್ಗುಡಿದು, ಸಮಾಧಾನಗೊಂಡು, ಕಮಲಪತ್ರಗಳ ಒಂದು ಪಾತ್ರೆ ಮಾಡಿಕೊಂಡು ಅದರಲ್ಲಿ ನೀರು ತುಂಬಿಕೊಂಡನು. ಬಟ್ಟೆಯಲ್ಲಿ ಅದನ್ನು ಮುಚ್ಚಿಕೊಂಡು, ಅತಿಶೀಘ್ರವಾಗಿ ಕೃಷ್ಣನಿದ್ದೆಡೆಗೆ ಧಾವಿಸಿದನು. ಅವನ ಕೂದಲು ಧೂಲಿಧೂಸರವಾಗಿತ್ತು. "ಬಹುವಿಧವಿಘ್ನಗಳ ವನದಲ್ಲಿ ಕೃಷ್ಣನನ್ನು ಒಂಟಿಯಾಗಿ ಬಿಟ್ಟು ಬಂದೆನಲ್ಲಾ" ಎಂಬ ಆಶಂಕೆಯಿಂದ ಹೃದಯ ಬಾರಿಬಾರಿಗೂ ಕಂಪಿಸುತ್ತಿತ್ತು. ಕೊನೆಗೆ ವಸ್ತ್ರಾಚ್ಛಾದಿತ ದೇಹದ ಕೃಷ್ಣನನ್ನು ದೂರದಿಂದ ಕಂಡನು. ತಾನು ಅವನನ್ನು ಬಿಟ್ಟುಹೋದ ಕಡೆಯೇ ಈಗ ಗಾಢನಿದ್ರೆಯಲ್ಲಿ ಮಲಗಿದ್ದಾನೆ ಎಂದುಕೊಂಡನು. ಬಳಿಗೆ ಬರುತ್ತಲೂ, "ಈಗಲೇ ಈತನು ಸುಖನಿದ್ರೆಯಲ್ಲಿ ಮಲಗಿರಬೇಕು. ಆದ್ದರಿಂದ ತಾನೇ ಎಚ್ಚರಮಾಡಿಕೊಳ್ಳಲಿ" ಎಂದು ಯೋಚಿಸಿದನು. ಅವನು ಎಚ್ಚರಗೊಳ್ಳುವವರೆಗೆ ಕಾಯುತ್ತ ಕುಳಿತನು. ಬಲುಹೊತ್ತಾದರೂ ಏಳದಿರಲು, 'ವೀರ, ಇಷ್ಟು ಹೊತ್ತೇಕೆ ನಿದ್ರೆ ? ಹೊತ್ತಾಯಿತು. ಏಳು, ಯಥೇಚ್ಛವಾಗಿ ನೀರು ಕುಡಿ" ಎಂದನು. ಹೀಗೆ ಒಂದೆರಡು ಬಾರಿ ಹೇಳಿ, ತಡೆದು, ಮತ್ತೂ ಕಾಯುತ್ತ ಕುಳಿತನು. ಆಮೇಲೆ ಆತನು ತೀಕ್ಷ್ಣಮುಖದ ಕೃಷ್ಣಮಕ್ಷಿಕವೊಂದು ಕಾಲ ಗಾಯದ ನೆತ್ತರಿನ ವಾಸನೆಗೆ ಆಕೃಷ್ಟವಾಗಿ ಕೃಷ್ಣನ ಆಚ್ಛಾದಿತ ವಸ್ತ್ರದೊಳಗೆ ಹೊಕ್ಕು ಹೊರಗೆ ಬರಲಾಗದೆ ವ್ಯಾಕುಲಗೊಳ್ಳುತ್ತಿದ್ದುದನ್ನು ನೋಡಿದನು. ಕೂಡಲೇ ಕೃಷ್ಣನ ಮುಖದ ಮೇಲಿನ ವಸ್ತ್ರ ತೆಗೆದು ನೋಡಿ, ಅವನು ಗತಾಸುವಾದದ್ದನ್ನು ಅರಿತನು. "ಅಯ್ಯೋ, ನಾನು ಸತ್ತೆ" ಎಂದು ಕೂಗಿದನು. "ಅಯ್ಯೋ, ಕೃಷ್ಣನು ಬಾಯಾರಿಕೆಯಿಂದಾಗಿ ಸತ್ತುಹೋದನು" ಎಂದುಕೊಂಡು ಅವನ ದೇಹದ ಮೇಲೆ ಬಿದ್ದು ಮೂರ್ಛೆಹೋದನು. ಆ ಗಳಿಗೆಗೆ ಅವನು ಮೂರ್ಛೆಬೀಳದಿದ್ದರೆ ಕೃಷ್ಣನ ಮೇಲಿನ ಅಪಾರಸ್ನೇಹದಿಂದಾಗಿ ಪ್ರಾಣವನ್ನೇ ಬಿಟ್ಟುಬಿಡುತ್ತಿದ್ದನು. ಎಚ್ಚರವಾಗಲು ಕೈಯಿಂದ ಕೃಷ್ಣನ ಶರೀರವನ್ನೆಲ್ಲಾ ಸ್ಪರ್ಶಿಸತೊಡಗಿದನು. ತೀವ್ರಪಾಸನೆಯ ನೆತ್ತರುಗೆಂಪಿನ ಕಾಲ ಗಾಯವು ಅವನ ಕಣ್ಣಿಗೆ

ಬಿತ್ತು. ನೋಡುತ್ತಲೇ "ಕೃಷ್ಣನು ಮಲಗಿದ್ದಾಗ ಯಾರೋ ತೀಕ್ಷ್ಣಬಾಣದಿಂದ ಅವನ ಕಾಲಿಗೆ ಹೊಡೆದಿದ್ದಾನೆ" ಎಂದು ನಿಶ್ಚಯಿಸಿಕೊಂಡನು. "ಯಾವಾತನು ಇಂದು ಈ ಕಡೆಗೆ ಬೇಟೆಗೆ ಬಂದಿರಬೇಕು ?" ಎಂದು ನೆನೆಯುವಾಗ, ಅವನಿಗೆ ಕ್ರೋಧವುಂಟಾಗಿ ಭಯಂಕರ ಸಿಂಹನಾದಮಾಡಿದನು. "ವಿಧಿವಿಲಾಸದಿಂದಾಗಿ ಮಲಗಿದ್ದಂಥ ನನ್ನ ತಮ್ಮನನ್ನು ಅಕಾರಣವಾಗಿ ವಂಚನೆಯಿಂದ ಹೊಡೆದ ವೈರಿಯು ನನ್ನೆದುರಿಗೆ ಈಗ ಕಾಣಿಸಿಕೊಳ್ಳಲಿ. ಯಶೋಧನನಾದ ಶೂರನು ನಿದ್ರಾವಶರು, ಶಸ್ತ್ರರಹಿತರು ಮುಂತಾದವರನ್ನು ಘಾತಿಸುವುದಿಲ್ಲ."—ಹೀಗೆಂದು ಗಟ್ಟಿಯಾಗಿ ಹೇಳುತ್ತ, ಅತ್ತಿತ್ತ ಸ್ವಲ್ಪ ದೂರ ಧಾವಿಸಿಹೋಗಿ ನೋಡಿದರೂ ಯಾರೂ ಕಾಣಿಸಲಿಲ್ಲ. ಕೃಷ್ಣನಲ್ಲಿಗೆ ಮರಳಿ, ಅವನನ್ನು ತೊಡೆಯ ಮೇಲಿರಿಸಿಕೊಂಡು ಅಳತೊಡಗಿದನು. "ಜಗತ್ಪ್ರಿಯ, ಜಗತ್ಸ್ವಾಮಿ, ಜನಾರ್ದನ, ನನ್ನನ್ನು ಬಿಟ್ಟು ನೀನೆಲ್ಲಿ ಹೋದೆ· ತಮ್ಮಾ ಬೇಗ ಬಾ, ಬೇಗ ಬಾ" ಎನ್ನುತ್ತ ಬಲುಹೊತ್ತು ಅಳುತ್ತಿದ್ದನು. ನಿರ್ಜೀವಿಯಾದ ಕೃಷ್ಣನಿಗೆ ತಾನು ತಂದ ನೀರನ್ನು ಬಾರಿ ಬಾರಿಗೂ ಕುಡಿಸುತ್ತಿದ್ದನಾದರೂ, ಆ ನೀರು ಸ್ವಲ್ಪವೂ ಗಂಟಲಿಗಿಳಿಯುತ್ತಿರಲಿಲ್ಲ. ಮೂಢಬುದ್ಧಿಯು ಆತನು ಎದುರಿಗೆ ಕುಳಿತು ಕೃಷ್ಣನ ಮುಖ ಒರಸುವುದು, ನೋಡುವುದು, ಮುದ್ದಿಸುವುದು, ಮಾತನ್ನು ಕೇಳಬಯಸುವುದು ಮುಂತಾಗಿ ಮಾಡುತ್ತಿದ್ದನು. "ಸ್ವರ್ಗಸಮಾನವಾದ ದ್ವಾರಿಕೆಯು ಅಗ್ನಿದಗ್ಧವಾಯಿತೆಂದು ನೊಂದುಕೊಂಡು ಬದುಕಿರುವುದೇಕೆ ಎಂದು ನೀನು ತಪ್ತನಾದೆಯೇನು ? ಇಲ್ಲ ಇಲ್ಲ. ಹಲತೆರದ ಅಕ್ಷಯವಾದ ಆಕರಗಳಿಂದ ಭರತಕ್ಷೇತ್ರ ಮುನ್ನಿನಂತೆಯೇ ಇದೆ. 'ಭೋಜರಾಜಕುಲವೂ ಯಾದವರೂ ಕ್ಷಯವಾಗಿ ಬಂಧುರಹಿತನಾದೆನಲ್ಲಾ' ಎಂದು ಚಿಂತಿಸಿ ಮೋಹಕ್ಕೆ ಗುರಿಯಾದೆಯಾ ? ನಾವಿಬ್ಬರೂ ಬದುಕಿದ್ದರೆ ಎಲ್ಲಾ ಬಂಧುಗಳೂ ಬದುಕಿದ್ದ ಹಾಗೆಯೇ ಎಂದು ತಿಳಿ. ಪೂರ್ವಭವಗಳಲ್ಲಿ, ಈ ಭವದಲ್ಲಿ ನನ್ನತ್ತ ಸ್ಥಿರನಯನದಿಂದ ನೋಡುತ್ತಿದ್ದೂ ತೃಪ್ತನಾಗದ ನೀನು ಇಂದೇಕೆ ತೃಪ್ತನಾದೆಯಲ್ಲಾ ? ನಾನು ನಿನ್ನನ್ನು ಒಂಟಿಯಾಗಿ ಬಿಟ್ಟು ನೀರಿಗೆಂದು ಹೋಗಿರಲು ಲೋಕಕ್ಕೆ ಸಾರಭೂತವಾದ ನವರತ್ನಭೂಷಣವು ಅಪಹೃತವಾಗುವುದಕ್ಕೆ ಅವಕಾಶ ಕೊಟ್ಟೆ. ನಾನು ಬಳಿಯಲ್ಲಿದ್ದುದಾದರೆ ಅಪಹರಿಸಲಾಗುತ್ತಿತ್ತೆ ? ಕಂಸನನ್ನು ವಿಧ್ವಂಸಗೊಳಿಸಿದ, ಭೂಚರ ಖೇಚರರಿಗೆ ಭೀಕರನಾಗಿದ್ದ, ಜರಾಸಂಧನಿಗೆ ಮಾರಿದವನಾಗಿದ್ದ ನೀನು ಇಂದು ಗೋಷ್ಪಾದದಲ್ಲಿ ಮುಳುಗಿಹೋದೆ. ಇಕೋ, ಸೂರ್ಯ ಮುಳುಗುತ್ತಿದ್ದಾನೆ. ನಿನಗಾಗಿ ಶೋಕಿಸುವಂತೆ ತೋರುತ್ತಿದ್ದಾನೆ. ಈ ನಿನ್ನ ನಿದ್ರೆ ಯಾರಿಗೆ ಶೋಕಕರವಲ್ಲ ! ಏಳು, ಸಂಧ್ಯಾವಂದನೆ ಮಾಡು. ಬರಿಯ ಈ ನಿದ್ರೆಯಿಂದೇನು ? ನಿನ್ನ ಕಾಲುಗಳ ವಾಸನೆ, ನನ್ನ ಶಬ್ದದಿಂದಾಗಿ ವನ್ಯಪ್ರಾಣಿಗಳು ಇತ್ತಲೇ ಬರುತ್ತಿವೆ. ಈ ದುರ್ಗಕ್ಕೆ ಹೊಕ್ಕು ರಾತ್ರಿಯನ್ನು ನೆಮ್ಮದಿಯಾಗಿ ಕಳೆಯೋಣ· ಸಕಲಸುಖಸೌಭಾಗ್ಯದಲ್ಲಿ ಮಲಗಿರುತ್ತಿರುವವನು ನೀನು ಈಗ ಇಲ್ಲಿ ಕಾಡಿನಲ್ಲಿ ಈ ಕಠಿನಭೂಮಿಯಲ್ಲಿ ಮಲಗಿರುತ್ತಿದ್ದೀಯೆ. ವಂದಿಮಾಗಧರ ದನಿಗೆ ಬೆಳಗ್ಗೆ ಏಳುತ್ತಿದ್ದವನು ಈಗ ಹೆಣ್ಣುನರಿಗಳ ಕೂಗಿನಿಂದ ಏಳಬೇಕಾಗಿದೆ. ಇಕೋ ಬೆಳಗಾಗುತ್ತಿದೆ. ಸೂರ್ಯ ಉದಿಸುತ್ತಿದ್ದಾನೆ."

ಬಲದೇವನಿಗೆ ಕೃಷ್ಣನು ಪ್ರಾಣಾಧಿಕನಾಗಿದ್ದುದರಿಂದ ಹೀಗೆ ಅವನನ್ನು ಎಬ್ಬಿಸಲು ನೂರಾರು ಪ್ರಿಯವಾಕ್ಯಗಳನ್ನಾಡಿದರೂ ಅದು ವ್ಯರ್ಥವಾಯಿತು. ಈಗ ಕೃಷ್ಣನ ಶವವನ್ನು ತನ್ನ ಭುಜಪಂಜರದ ನಡುವೆ ಎತ್ತಿಕೊಂಡು, ವನಮಧ್ಯದಲ್ಲಿ ಅತ್ತಿತ್ತ ಓಡಾಡತೊಡಗಿದನು. ಹೀಗೆಯೇ ಅನೇಕ ದಿನರಾತ್ರಿಗಳು ಕಳೆದರೂ ಕೂಡ ಅವನ ಮನೋವಾಕ್ಕಾಯಗಳಲ್ಲಿ ಸ್ವಲ್ಪವೂ ಆಲಸ್ಯವುಂಟಾಗಲಿಲ್ಲ. ಪ್ರತಿದಿನ ಕೃಷ್ಣನ ಶವವನ್ನೆತ್ತಿಕೊಂಡು ಹೀಗೆಯೇ ಅಲೆಯುವುದಾಯಿತು.

ಗ್ರೀಷ್ಮರ್ತುವು ಕಳೆದು ವರ್ಷರ್ತು ಕಾಲಿಟ್ಟು, ಜಗತ್ತು ಸಂತೋಷದಲ್ಲಿರುವಾಗ ಕೃಷ್ಣನೆಂದಂತೆ ಭಿಲ್ಲವೇಷದ ಜರತ್ಕುಮಾರನು ಪಾಂಡವನಗರವಾದ ದಕ್ಷಿಣಮಥುರೆಗೆ ಬಂದನು. ಕೃಷ್ಣನ ದೂತಕಾರ್ಯವನ್ನು ನಡೆಸಲಿದ್ದ ಜರತ್ಕುಮಾರನು ಪಾಂಡವರ ಸಭೆಯನ್ನು ಪ್ರವೇಶಿಸಿ, ವಿನಯಪೂರ್ವಕವಾಗಿ ದೂತನ ನಡವಳಿಕೆಯನ್ನು ನಡಸಿದನು. ಅವನು ಸಭೆಯಲ್ಲಿ ಕುಳ್ಳಿರುತ್ತಲೂ ಯುಧಿಷ್ಠಿರಾದಿಗಳು ಸ್ವಾಮಿಯ ಕುಶಲವಾರ್ತೆಯನ್ನು ಪ್ರಶ್ನಿಸಿದರು. ದುಃಖದಲ್ಲಿ ಕೊರಳುಬಿಗಿದು ಗದ್ಗದಸ್ವರದಲ್ಲಿ ಆತನು ದ್ವಾರಿಕೆಯ ಜನವೂ ಕುಟುಂಬವರ್ಗದ ಜನವೂ ಎಲ್ಲಾ ಸುಟ್ಟುಹೋದುದು, ಹಾಗೂ ತನ್ನ ಪ್ರಮಾದದಿಂದ ಕೃಷ್ಣನಿಗೆ ಏಟಾದುದು ಈ ವೃತ್ತಾಂತವನ್ನೆಲ್ಲಾ ಹೇಳಿದನು. ನಂಬುಗೆಯ ಗುರುತಿಗಾಗಿ ಕೌಸ್ತುಭಮಣಿಯನ್ನು ತೋರಿಸಿದನು. ಆಮೇಲೆ ದುಃಖವೇಗದಿಂದ ಅತ್ತನು. ಕುಂತಿಯು ಮತ್ತು ಪಾಂಡವಪತ್ನಿಯರ ರೋದನಧ್ವನಿ ಮಿಗಿಲಾಯಿತು, ಅವರೇ ಅಲ್ಲ, ಅಲ್ಲಿದ್ದ ಎಲ್ಲರೂ ಅಳತೊಡಗಿದರು· "ಹೇ ಪ್ರಧಾನಪುರುಷ, ಅದ್ವಿತೀಯಶೂರ, ವಿಧಿ ನಿನಗೆ ಇದೇನು ಮಾಡಿತು ? ಅಯ್ಯೋ, ಎಂಥಾ ಸಂಕಟವಿದು" ಎಂದು ಬಲುಹೊತ್ತು ರೋದಿಸುತ್ತಿದ್ದರು. ಆಮೇಲೆ ಲೋಕಸ್ವರೂಪ ತಿಳಿದ ಪಾಂಡವರಾದಿ ಬಾಂಧವರೆಲ್ಲ, ಸುತ್ತುವರಿದು ಕುಳಿತ ಆತ್ಮೀಯರ ಸಮಾಧಾನಕ್ಕೆ ಕೃಷ್ಣನಿಗೆ ಜಲತರ್ಪಣವಿತ್ತರು. ಮುನ್ನಿನ ನಿಂದ್ಯವೇಷವನ್ನುಳಿದ, ಮನೋವ್ಯಥೆ ಸ್ವಲ್ಪ ತಗ್ಗಿದ, ಜರತ್ಕುಮಾರನನ್ನು ಮುಂದಿಟ್ಟುಕೊಂಡು ಪಾಂಡವರು ದುಃಖಪೀಡಿತ ಬಲದೇವನನ್ನು ನೋಡಲೆಂದು ಹೋದರು.

ದ್ರೌಪದಿ ಮೊದಲಾದ ರಾಣಿಯರು, ತಾಯಿ, ಪುತ್ರರು, ಸೇನೆ—ಇವರನ್ನು ಒಳಗೊಂಡು ಕೂಡಲೇ ಪಾಂಡವರು ತೆರಳಿ ಕೆಲವು ದಿನಗಳ ಮೇಲೆ ವನದಲ್ಲಿ ಬಲದೇವನನ್ನು ಕಂಡರು. ಅಗ ಆತನು ಕೃಷ್ಣನ ಮೃತದೇಹಕ್ಕೆ ಉದ್ವರ್ತನ ಸ್ನಪನ ಮಂಡನ ಕ್ರಿಯೆ ಮೊದಲಾದ ವ್ಯರ್ಥಕಾರ್ಯಗಳಲ್ಲಿ ತೊಡಗಿದ್ದನು. ಈ ಬಂಧುಗಳು ಅವನನ್ನು ಕಾಣುತ್ತಲೇ, ಆದರದಿಂದ ಆತನನ್ನಪ್ಪಿ ಗಟ್ಟಿಯಾಗಿ ಅಳತೊಡಗಿದರು. ಕುಂತಿ ಮತ್ತು ಕುಂತೀಪುತ್ರರು ನಮಸ್ಕಾರಪೂರ್ವಕವಾಗಿ ಬಲದೇವನನ್ನು ಕೃಷ್ಣನ ಮೃತಶರೀರಕ್ಕೆ ದಹನಸಂಸ್ಕಾರ ನಡಸುವಂತೆ ಕೇಳಿಕೊಂಡರು. ಆದರೆ ಅವನು ಕೃಷ್ಣನ ಆ ಕಳೇವರವನ್ನು ಅವರಿಗೆ ಒಪ್ಪಿಸದೆ ಅವರ ಮೇಲೆಯೇ ಕೋಪಿಸಿದನು. "ಅಯ್ಯಾ ಪಾಂಡವರೇ, ಬೇಗ ಸ್ನಾನಕ್ಕೆ ಅಣಿಮಾಡಿ ; ಅನ್ನಪಾನಗಳನ್ನು ಸಿದ್ಧಮಾಡಿ ; ನಮ್ಮ ಪ್ರಭು ಹಸಿದು

ಬಾಯಾರಿದ್ದಾನೆ ; ಬೇಗ ಉಣ್ಣಬೇಕೆನ್ನುತ್ತಾನೆ''—ಎಂದನು. ಪಾಂಡವರು ಸ್ನಾನ ಭೋಜನಗಳನ್ನು ಸಿದ್ಧಮಾಡಿದರು; ಬಲದೇವನು ಕೃಷ್ಣನ ದೇಹವನ್ನು ಆಸನದ ಮೇಲೆ ಕೂರಿಸಿ ಮಿಾಯಿಸಿದನು ; ಉಣಿಸಿದನು ; ನೀರು ಕುಡಿಸಿದನು. ಆದರೆ ಅವೆಲ್ಲಾ ವ್ಯರ್ಥವಾಯಿತು; ಪಾಂಡವರಿಗೂ ಇದು ನಿರರ್ಥಕವೆಂದು ತಿಳಿದಿದ್ದರೂ ಅವರು ಬಲದೇವನು ಬಯಸಿದಂತೆ ನಡೆಯುತ್ತ ಕೃತಕಾರ್ಯರಾಗುತ್ತಿದ್ದರು. ಅವನನ್ನು ಹಿಂಬಾಲಿಸುತ್ತ ಪಾಂಡವರು ಅವನ ಆಶಯದಂತೆ ನಡೆಯುತ್ತ ಆ ವನದಲ್ಲಿಯೇ ವರ್ಷಾಕಾಲವನ್ನು ಕಳೆದರು.

ಶರತ್ಕಾಲ ಬಂತು. ಮೊದಲು ಕೃಷ್ಣನ ದೇಹದಿಂದ ಸದಾ ಸಪ್ತಪರ್ಣಸದೃಶವಾದ ಸುಗಂಧವು ಹೊಮ್ಮುತ್ತಿತ್ತು. ಈಗ ದುರ್ಗಂಧ ಸೂಸುವುದಾಯಿತು. ಅದು ಬಲುದೂರದ ವರೆಗೆ ಹರಡುತ್ತಿತ್ತು. ಈಗ ಕೃಷ್ಣನ ಸೋದರನಾದ ಸಿದ್ಧಾರ್ಥನು, ಸಾರಥಿಯಾಗಿದ್ದವನು, ಸತ್ತು ಸ್ವರ್ಗದಲ್ಲಿ ದೇವನಾಗಿದ್ದನು. ಈತನು ತನ್ನ ದೀಕ್ಷಾಸಮಯದಲ್ಲಿ ಬಲದೇವನನ್ನು ಪ್ರತಿಬೋಧಿಸುವ ಏರ್ಪಾಡಿಗೆ ಒಪ್ಪಿದ್ದನು. ಕಾಲಲಬ್ಧಿಯು ಸನ್ನಿಹಿತವಾಗಲು ಅದಕ್ಕೆಂದು ಬಲದೇವನಲ್ಲಿಗೆ ಬಂದನು. ಒಂದು ಮಾಯಾರಥವನ್ನು ಬಲದೇವನಿಗೆ ತೋರಿಸಿದನು. ಅದು ಪರ್ವತದ ಅತಿವಿಷಮತಟವನ್ನು ದಾಟಿಯೂ ಭಗ್ನವಾಗಲಿಲ್ಲ. ಆದರೆ ಸಮಪಥದಲ್ಲಿ ಬರುತ್ತಲೇ ಭಗ್ನವಾಯಿತು. ಆ ದೇವನು ರಥಸಂಧಿಗಳನ್ನು ಮತ್ತೆ ಸರಿಮಾಡುತ್ತಿದ್ದನಾದರೂ ಅದು ಸರಿಹೋಗುತ್ತಿರಲಿಲ್ಲ. ಬಲದೇವನು ಇದನ್ನು ಕಂಡು ''ಅಯ್ಯಾ. ನಿನ್ನ ರಥ ಪರ್ವತದ ಅತಿವಿಷಮತಟದಲ್ಲಿ ಭಗ್ನವಾಗದೆ ಸಮಪಥದಲ್ಲಿ ಭಗ್ನವಾದದ್ದೀಗ ಆಶ್ಚರ್ಯ. ಇನ್ನೀಗ ಇದು ಈ ಜನ್ಮದಲ್ಲಿ ಮೊದಲಿನಂತೆ ಸರಿಯಾಗುವುದು ಸಾಧ್ಯವೇ ? ಇದನ್ನು ಸರಿಮಾಡುವ ನಿನ್ನ ಯತ್ನ ನಿಷ್ಫಲ" ಎಂದನು. ಅದಕ್ಕೆ ಆ ದೇವನು ಯಾವ ಕೃಷ್ಣನು ಮಹಾಭಾರತದಂಥ ಯುದ್ಧದಲ್ಲಿ ಪಾರದರ್ಶಿಯಾಗಿದ್ದನೋ, ಆ ವಿಕಟಯುದ್ಧದಲ್ಲಿ ಯಾವಾತನ ಕೂದಲು ಕೂಡ ಕೊಂಕಲಿಲ್ಲವೋ, ಅಂಥವನು ಜರತ್ಕುಮಾರನ ಕೈಯ ಬಿಲ್ಲಿಂದ ಬಿಟ್ಟ ಒಂದು ಬಾಣ ತಗುಲಿಯೇ ಕೆಳಗೆ ಬಿದ್ದನಲ್ಲಾ ; ಇನ್ನು ಈ ಜನ್ಮದಲ್ಲಿ ಈತ ಎದ್ದು ನಿಲ್ಲುವುದು ಶಕ್ಯವೇ ?'' ಎಂದು ಉತ್ತರಿಸಿದನು. ಇಷ್ಟು ಹೇಳಿ ಆ ದೇವನು ಜಲಕಣವೂ ಇಲ್ಲದಂಥ ಶಿಲಾತಲದ ಮೇಲೆ ಕಮಲಿನಿಯೊಂದನ್ನು ಸೃಜಿಸಿ ತೋರಿದನು. ಆಗ ಬಲದೇವನು "ಈ ಶಿಲಾತಲದ ಮೇಲೆ ಕಮಲಿನಿಯಾಗುವುದು ಹೇಗೆ ಸಾಧ್ಯ ?" ಎಂದನು. ಅದಕ್ಕೆ ದೇವನು ''ನಿರ್ಜೀವಶರೀರದಲ್ಲಿ ಕೃಷ್ಣನು ಹುಟ್ಟುವುದು ಹೇಗೆ ಸಾಧ್ಯ ?'' ಎಂದಾಡಿದನು. ಮತ್ತೆ ಆ ದೇವನು ಒಂದು ಒಣಮರಕ್ಕೆ ನೀರುಹೊಯ್ದನು. ಬಲದೇವನು ''ಅಯ್ಯಾ, ಒಣಮರಕ್ಕೆ ನೀರು ಹಾಕಿದರೇನು ಲಾಭ ?'' ಎಂದನು. ಅದಕ್ಕೆ ದೇವನು ''ಮೃತಕೃಷ್ಣನಿಗೆ ಸ್ನಾನಾದಿಗಳನ್ನು ಮಾಡಿಸುವುದರಿಂದೇನು ಲಾಭ ?'' ಎಂದು ನುಡಿದನು. ಆಮೇಲೆ ದೇವನು ಒಂದು ಸತ್ತ ಎತ್ತಿಗೆ ಹುಲ್ಲುನೀರು ಕೊಡತೊಡಗಿದನು. ಬಲದೇವನು ''ಮೂರ್ಖಾ, ಈ ಮೃತದೇಹಕ್ಕೆ ಹುಲ್ಲುನೀರು ಕೊಡುವುದರಿಂದೇನು ಲಾಭ?" ಎಂದು ಪ್ರಶ್ನಿಸಿದನು. ಅದಕ್ಕೆ ದೇವನು ''ಮೃತಕೃಷ್ಣನಿಗೆ ಆಹಾರಪಾನೀಯಗಳನ್ನು ಕೊಡುವುದರಿಂದೇನು ಲಾಭ ?'' ಎಂದನು. ಹೀಗೆ ಬಹಳ ಶ್ರಮದಿಂದ ಬಲದೇವನಿಗೆ ಆ ದೇವನು ತಿಳಿಯ ಹೇಳಬೇಕಾಯಿತು. ಹೀಗೆ ಪ್ರತಿಬೋಧಿಸಿದ ಮೇಲೆ ಬಲದೇವನು ''ಕೃಷ್ಣನು ದಿಟವಾಗಿ ಪ್ರಾಣರಹಿತನಾಗಿದ್ದಾನೆ. ಅಯ್ಯಾ, ನೀನು ಹೇಳಿದ್ದು ನಿಜ. ಸ್ವಲ್ಪವೂ ಇದು ಅನ್ಯಥಾ ಅಲ್ಲ. ನೀನು ನನಗೆ ಸರಿಯಾಗಿಯೇ ಹೇಳಿದೆ'' ಎಂದನು. ಇಲ್ಲಿ ಏನಾಗಿದೆಯೋ ಅದನ್ನೆಲ್ಲಾ ಮೊದಲೇ ನೇಮಿಜಿನೇಂದ್ರನು ಹೇಳಿ ಆಗಿತ್ತು. ಸಂಸಾರಸ್ಥಿತಿಯರಿತು ಕೂಡ ನೀನು ಕೃಷ್ಣನ ಮೃತಶರೀರವನ್ನು ಹೊತ್ತು ೬ ತಿಂಗಳ ಕಾಲ ವ್ಯರ್ಥವಾಗಿ ಕಾಲ ಕಳೆದೆ. ಮೋಕ್ಷವೇ ಅವಿನಾಶಿಯಾದ್ದು''— ಎಂದು ತಿಳಿಸಿದಾಗ ಪೂರ್ವರೂಪವನ್ನು ಧರಿಸಿದ ಆ ದೇವನಿಂದ ಬಲದೇವನಿಗೆ ಮೋಹದ ಮುಸುಕು ಸರಿಯಿತು.

ಆಮೇಲೆ ಜರತ್ಕುಮಾರನ ಹಾಗೂ ಪಾಂಡವರ ಜತೆಗೆ ಸೇರಿ ಬಲದೇವನು ತುಂಗೀಗಿರಿಯ ಶಿಖರದಲ್ಲಿ ಕೃಷ್ಣನ ದೇಹಕ್ಕೆ ದಹನಸಂಸ್ಕಾರ ನಡಸಿದನು. ಜರತ್ಕುಮಾರನಿಗೆ ರಾಜ್ಯವಿತ್ತು, ಪರಿಗ್ರಹತ್ಯಾಗಮಾಡಿ, ಸಂಗಡಿಗರೊಂದಿಗೆ ಅದೇ ಪರ್ವತದ ಶಿಖರವನ್ನಾಶ್ರಯಿಸಿದನು. "ನಾನು ಇಲ್ಲಿರುತ್ತಿದ್ದೂ ಪಲ್ಲವ ದೇಶಸ್ಥಿತನಾದ ಶ್ರೀ ನೇಮಿಜಿನೇಂದ್ರನ ಶಿಷ್ಯತ್ವವನ್ನುಗ್ರಹಿಸಿದ್ದೇನೆ''ಎಂದು ನುಡಿದು, ಪಂಚಮುಷ್ಟಿಗಳಿಂದ ಕೂದಲು ಕಿತ್ತುಕೊಂಡು ಮುನಿದೀಕ್ಷೆ ಗ್ರಹಿಸಿದನು. ಬಲದೇವನು ರೂಪವಂತನಾದ್ದರಿಂದ ಪಾರಣೆಗಳಿಗೆ ನಗರಕ್ಕೆ ಹೋದಾಗ ಅಲ್ಲಿಯ ಹೆಂಗಸರು ಚಂಚಲಚಿತ್ತರಾಗುತ್ತಿದ್ದರು. ಇದನ್ನು ತಿಳಿದು ಆತನು ವನಭೈಕ್ಷ್ಯದ ಸಂಕಲ್ಪಗೊಂಡನು. ಪಾಂಡವರು ಹರಿವಂಶದರಸು ಜರತ್ಕುಮಾರನಿಗೆ ಹಲವು ರಾಜಕನ್ಯೆಯರನ್ನು ತಂದಿತ್ತರು. ತಮ್ಮ ಪುತ್ರರಿಗೆ ರಾಜ್ಯವೊಪ್ಪಿಸಿ ತಾವು ಜಿನೇಂದ್ರನನ್ನು ಲಕ್ಷ್ಯದಲ್ಲಿರಿಸಿಕೊಂಡು ಎಲ್ಲರೂ ಪಲ್ಲವದೇಶಕ್ಕೆ ಹೋದರು. ಸಂಯಮದತ್ತ ಮನಸ್ಸಾಗಿದ್ದ ದ್ರೌಪದಿ ಮೊದಲಾದ ರಾಣಿಯರೂ, ಸಂಸಾರದಲ್ಲಿ ವೈರಾಗ್ಯಗೊಂಡಿದ್ದ ಕುಂತಿಯೂ ಪಾಂಡವರನ್ನು ಹಿಂಬಾಲಿಸಿದರು. ಇತ್ತ ಬಲದೇವನು ದ್ವಾದಶಾನುಪ್ರೇಕ್ಷೆಗಳನ್ನು ಪರಿಭಾವಿಸುತ್ತಿದ್ದನು. 'ಸರ್ವವೂ ಅನಿತ್ಯ, ಆತ್ಮವೊಂದೇ ನಿತ್ಯ', ಈ ಪ್ರಕಾರವಾಗಿ ವಿಚಾರಮಾಡುತ್ತ, ಒಂದೊಂದೇ ಅನುಪ್ರೇಕ್ಷೆಯನ್ನು ಸಾಧಿಸುತ್ತಿದ್ದನು. ಹಾಗೆಯೇ ೨೨ ಬಗೆಯ ಪರೀಷಹಗಳನ್ನು ಗೆದ್ದನು. ಹಲಗಾಲ ಅವನ ತಪಸ್ಸು ಹೀಗೆ ನಡೆಯಿತು.

೬೪. ಯುಧಿಷ್ಠಿರಾದಿ ಪಂಚಪಾಂಡವ ಪ್ರವ್ರಜ್ಯಾ ವರ್ಣನ

ಪಾಂಡವರು ಪಲ್ಲವದೇಶದಲ್ಲಿ ವಿಹಾರಿಸುತ್ತ ನೇಮಿಜಿನನಲ್ಲಿಗೆ ಬಂದರು. ಆಗ ನೇಮಿ ಸಮವಸರಣದಲ್ಲಿದ್ದು ಅಷ್ಟಮಹಾಪ್ರಾತಿಹಾರ್ಯಗಳಿಂದ ಶೋಭಿಸುತ್ತಿದ್ದನು. ಪಾಂಡವರು ಆತನಿಗೆ ಬಲವಂದು ವಂದಿಸಿದರು. ಆಮೇಲೆ ಆತನಿಂದ ಧರ್ಮಶ್ರವಣ ಮಾಡಿ ಅವರು ತಮ್ಮ ಪೂರ್ವಭವಗಳನ್ನು ಆತನಲ್ಲಿ ಪ್ರಶ್ನಿಸಿದರು. ಜಿನನು ಅದನ್ನು ಹೀಗೆ ನಿರೂಪಿಸಿದನು :

“ಇದೇ ಭರತಕ್ಷೇತ್ರದಲ್ಲಿ ಚಂಪಾನಗರಿಯಲ್ಲಿ ಕುರುವಂಶದ ಮೇಘವಾಹನರಾಜನು ಆಳುತ್ತಿದ್ದಾಗ, ಅಲ್ಲಿ ಸೋಮದೇವನೆಂಬ ಒಬ್ಬ ಬ್ರಾಹ್ಮಣನಿರುತ್ತಿದ್ದನು. ಇವನ ಪತ್ನಿ ಸೋಮಿಲಾ. ಈ ದಂಪತಿಗಳಿಗೆ ಸೋಮದತ್ತ, ಸೋಮಿಲ, ಸೋಮಭೂತಿ ಎಂಬುವರು ಪುತ್ರರು. ಈ ಪುತ್ರರಿಗೆ ಅಗ್ನಿಭೂತಿ ಎಂಬಾತನು ಸೋದರಮಾವ. ಇವನ ಪತ್ನಿ ಅಗ್ನಿಲಾ. ಈ ದಂಪತಿಗಳಿಗೆ ಧನಶ್ರೀ, ಸೋಮಶ್ರೀ (ಮಿತ್ರಶ್ರೀ), ನಾಗಶ್ರೀ ಎಂಬ ಮೂವರು ಪುತ್ರಿಯರು. ಪೂರ್ವೋಕ್ತ ಸೋಮದತ್ತಾದಿಗಳಿಗೆ ಈ ಕನ್ಯೆಯರನ್ನು ಕೊಡಲಾಯಿತು. ವೇದವಿದನಾದ ಸೋಮದೇವನು ಒಮ್ಮೆ ಶರೀರಭೋಗನಿರ್ವೇಗ ಪರಾಯಣನಾಗಿ ಜಿನದೀಕ್ಷೆಗೊಂಡನು. ಅವನ ಸೋಮದತ್ತಾದಿ ಪುತ್ರರೂ ಜಿನಶಾಸನಭಾವನೆಯಿಂದ ಕೂಡಿದವರಾಗಿ ಗೃಹಸ್ಥಧರ್ಮದಲ್ಲಿ ಆಸಕ್ತರಾಗಿದ್ದರು.

ಹೀಗಿರಲು ಒಮ್ಮೆ ಧರ್ಮರುಚಿ ಎಂಬ ಮುನಿ ಭಿಕ್ಷೆಯ ಕಾಲಕ್ಕೆ ಚಾಂದ್ರೀಚರ್ಯೆಯಿಂದ ಅವರ ಮನೆಗೆ ಪ್ರವೇಶಿಸಿದನು. ಸೋಮದತ್ತನು ಮೇಲೆದ್ದು ವಿನಯದಿಂದ ಮುನಿಗೆ ಪಡಿಗಹವನ್ನು ನಡಸಿದನು. ಆಮೇಲೆ ಬೇರೆಕೆಲಸಕ್ಕಾಗಿ ಹೊರಗೆ ಅವನಿಗೆ ಹೋಗಬೇಕಾಗಿ ಬಂತು.ದಾನಕಾರ್ಯಕ್ಕೆ ನಾಗಶ್ರೀಯನ್ನು ನಿಯೋಜಿಸಿ ಹೋದನು. ತನ್ನ ಪೂರ್ವಕೃತ ಪಾಪೋದಯದಿಂದ ಮುನಿಯ ವಿಷಯದಲ್ಲಿ ಕೋಪಬಂದು ನಾಗಶ್ರೀ ಆತನಿಗೆ ವಿಷಮಿಶ್ರಿತ ಅನ್ನವನ್ನು ಆಹಾರವಾಗಿ ನೀಡಿದಳು. ಆ ಮುನಿ ಸಂನ್ಯಸನ ಮರಣದಿಂದ ಮಡಿದು ಸರ್ವಾರ್ಥಸಿದ್ಧಿಯಲ್ಲಿ ಜನಿಸಿದನು. ನಾಗಶ್ರೀಯ ಈ ದುಷ್ಕಾರ್ಯವರಿತು ಆ ಮೂವರು ಸೋದರರೂ ನೊಂದುಕೊಂಡು ವೈರಾಗ್ಯವುಂಟಾಗಿ ವರುಣಗುರುವಿನ ಬಳಿ ದೀಕ್ಷೆಗೊಂಡರು. ಧನಶ್ರೀ ಮಿತ್ರಶ್ರೀಯರೂ ವೈರಾಗ್ಯಗೊಂಡು ಗುಣವತೀ ಆರ್ಯಿಕೆಯಲ್ಲಿ ದೀಕ್ಷೆ ತಳೆದರು. ಹೀಗೆ ಅವರೆಲ್ಲಾ ರತ್ನತ್ರಯಗಳು ಮತ್ತು ತಪಸ್ಸಿನ ಶುದ್ಧಿಗಾಗಿ ಚಾರಿತ್ರಪಾಲನೆಗೆ ಉದ್ಯತರಾದರು.

ಈ ಪ್ರಕಾರವಾಗಿ ರತ್ನತ್ರಯಗಳನ್ನು ಉಪಾಸಿಸಿದ ಸೋಮದತ್ತಾದಿ ಜೀವರು ಸತ್ತು ಅಚ್ಯುತಸ್ವರ್ಗದಲ್ಲಿ ಸಾಮಾನಿಕ ದೇವರಾದರು. ೨೨ ಸಾಗರ ಕಾಲದ ಆಯುರೊಡೆಯರಾದರು. ಮುನಿಗೆ ವಿಷಮಿಶ್ರಿತ ಆಹಾರವಿತ್ತ ನಾಗಶ್ರೀ ಸತ್ತು ಧೂಮಪ್ರಭೆಯೆಂಬ ೫ನೆಯ ನರಕದಲ್ಲಿ ಬಿದ್ದಳು. ಅಲ್ಲಿ ೧೭ ಸಾಗರ ಕಾಲ ದುಃಖಾನುಭವಮಾಡಿ ಸ್ವಯಂಪ್ರಭದ್ವೀಪದಲ್ಲಿ ದೃಷ್ಟಿವಿಷವೆಂಬ ದುಷ್ಟಸರ್ಪವಾದಳು. ಆಮೇಲೆ ೩ಸಾಗರ ಕಾಲ ವಾಲುಕಾಪ್ರಭೆಯೆಂಬ ೩ನೆಯ ನರಕಕ್ಕೆ ಸಂದಳು. ಆಮೇಲೆ ತ್ರಸಸ್ಥಾವರ ಜನ್ಮಗಳಲ್ಲಿ ೨ ಸಾಗರ ಕಾಲ ತೊಳಲಾಡುತಿದ್ದು, ಬಳಿಕ ಚಂಪಾಪುರಿಯಲ್ಲಿ ಚಂಡಾಲಕನ್ಯೆಯಾಗಿ ಜನಿಸಿದಳು. ಒಂದು ದಿನ ಈಕೆ ಸಮಾಧಿಗುಪ್ತ ಮುನಿಯಲ್ಲಿ ಮಧುಮಾಂಸಾದಿಗಳ ತ್ಯಾಗವನ್ನು ಸಂಕಲ್ಪಿಸಿದಳು. ತತ್ಫಲವಾಗಿ ಸತ್ತಮೇಲೆ ಅದೇ ನಗರದಲ್ಲಿ ಸುಬಂಧುವೆಂಬ ವೈಶ್ಯನಿಗೆ ಧನವತಿಯೆಂಬವಳಲ್ಲಿ ಸುಕುಮಾರಿಕೆಯೆಂಬ ಮಗಳಾದಳು. ಪೂರ್ವದ ಪಾಪಸಂಸ್ಕಾರದಿಂದಾಗಿ ಅವಳ ಶರೀರದಲ್ಲಿ ಕಟುದುರ್ಗಂಧ ಒರುತ್ತಿತ್ತು. ಆದರಿಂದಾಗಿ ರೂಪವತಿಯಾಗಿಯೂ ಯುವಕರ ತಿರಸ್ಕಾರಕ್ಕೆ ಭಾಜನಳಾಗಿದ್ದಳು. ಅದೇ ನಗರದಲ್ಲಿ ಧನದೇವನೆಂಬ

ವೈಶ್ಯನಿಗೆ ಅಶೋಕದತ್ತೆಯೆಂಬ ಪತ್ನಿಯಲ್ಲಿ ಜಿನದೇವ ಜಿನದತ್ತರೆಂಬ ಇಬ್ಬರು ಪುತ್ರರಿದ್ದರು. ಜಿನದೇವನ ಮನೆಯವರು ಆ ದುರ್ಗಂಧವತಿಯೊಡನೆ ಅವನ ಮದುವೆಯನ್ನು ಜರುಗಿಸಲು ಇಚ್ಛಿಸಿದರು. ಆದರೆ ಅವನು ಒಪ್ಪಲಿಲ್ಲ. ಅವನು ಆ ಕನ್ಯೆಯನ್ನು ತ್ಯಜಿಸಿ ಸುವ್ರತನೆಂಬ ಮುನಿಯಲ್ಲಿ ದೀಕ್ಷಿತನಾದನು ಬಂಧುಜನರ ಒತ್ತಾಯದಿಂದ ತಮ್ಮನಾದ ಜಿನದತ್ತನು ಅವಳನ್ನು ಮದುವೆಯಾದರೂ ಅವಳ ವಾಸನೆಯಿಂದಾಗಿ ಅವಳನ್ನು ದೂರದಲ್ಲಿಯೇ ಪರಿತ್ಯಜಿಸಿದನು. ಇದರಿಂದಾಗಿ ಸುಕುಮಾರಿಕೆ ಆತ್ಮನಿಂದೆ ಮಾಡಿಕೊಂಡಳು.

ಒಂದು ದಿನ ಆಕೆ ಉಪವಾಸವಿದ್ದು, ಆರ್ಯಿಕಾಜನವೇಷ್ಟಿತೆಯಾದ ಕ್ಷಾಂತಾಎಂಬ ಆರ್ಯಿಕೆಗೆ ಭಕ್ತಿಯಿಂದ ಆಹಾರದಾನ ಮಾಡಿದಳು. ಕ್ಷಾಂತಾ ಆರ್ಯಿಕೆಯೊಂದಿಗೆ ಇಬ್ಬರು ಅತ್ಯಂತರೂಪವತಿಯರಾದ ಆರ್ಯಿಕೆಯರಿದ್ದುದು ಕಂಡು ಕ್ಷಾಂತಾರ್ಯೆಯನ್ನು ವಂದಿಸಿ “ಹೇ ಆರ್ಯೆ ! ಈ ರೂಪವತಿಯರಾದ ಇಬ್ಬರು ಆರ್ಯಿಕೆಯರು ಕಠಿನತಪಸ್ಸಿಗೆ ಏಕೆ ತೊಡಗಿವರು?” ಎಂದು ಪ್ರಶ್ನಿಸಿದಳು. ಅದಕ್ಕೆ ಆಕೆಯು ಸುಕುಮಾರಿಕೆಯನ್ನು ಪ್ರತಿಬೋಧಿಸಲೆಂದು ಆಯಿಬ್ಬರ ತಪದ ಕಾರಣವನ್ನು ವಿವರಿಸಿದಳು. “ಹೇ ಸುಕುಮಾರಿ, ಕೇಳು, ಈಯಿಬ್ಬರು ಸುಕುಮಾರಿಕೆಯರು ತಪಸ್ವಿನಿಯರಾಗಿ ಏಕೆ ತಪಸ್ಸಿಗೆ ತೊಡಗಿದರೆಂಬುದನ್ನು ಹೇಳುತ್ತೇನೆ. ಇವರು ಪೂರ್ವಭವದಲ್ಲಿ ಸೌಧರ್ಮಕಲ್ಪದ ಇಂದ್ರನಿಗೆ ವಿಮಲೆ ಸುಪ್ರಭೆ ಎಂಬ ದೇವಿಯರಾಗಿದ್ದರು. ಒಂದು ದಿನ ಇವರು ನಂದೀಶ್ವರಪರ್ವದ ಯಾತ್ರೆಯಲ್ಲಿ ಜಿನಪೂಜೆಗೆ ಬಂದಿದ್ದರು. ಏಕೋ ಸಂಸಾರದಲ್ಲಿ ವಿರಕ್ತಿಗೊಂಡು ತಮ್ಮಲ್ಲಿಯೇ ‘ನಮಗೆ ಮನುಷ್ಯಜನ್ಮ ಬಂದರೆ ನಾವು ಮಹಾತಪಸ್ಸು ಮಾಡುತ್ತೇವೆ. ಮತ್ತೆ ಸ್ತ್ರೀಜನ್ಮ ಸಂಬಂಧವಾದ ದುಃಖ ಬಾರದಂಥ ತಪಸ್ಸುಮಾಡುತ್ತೇವೆ’ ಎಂದು ಸಂಕಲ್ಪಿಸಿದರು. ಆ ದೇವಿಯರು ಸ್ವರ್ಗಚ್ಯುತರಾಗಿ ಬಂದು ಇಲ್ಲಿ ಅಯೋಧ್ಯಾನಗರದ ಅರಸು ಶ್ರೀಷೇಣನಿಗೆ ಶ್ರೀಕಾಂತೆಯೆಂಬ ಪತ್ನಿಯಲ್ಲಿ ಹರಿಷೇಣಾ ಶ್ರೀಷೇಣಾ ಎಂಬ ಪುತ್ರಿಯರಾದರು. ಇವರು ರೂಪಯೌವನ ಸಂಪನ್ನರಾಗಿ, ಇವರ ಸ್ವಯಂವರವು ಏರ್ಪಾಟಾದಾಗ, ಆ ಸಮಯದಲ್ಲೇ ಇವರಿಗೆ ತಮ್ಮ ಪೂರ್ವಜನ್ಮದ ಹಾಗೂ ಪೂರ್ವಸಂಕಲ್ಪದ ನೆನಪಾಯಿತು. ಕೂಡಲೇ ಅವರು ಬಂಧುಗಳನ್ನು ತೊರೆದುಹೋಗಿ ಆಗಲೇ ತಪಸ್ಸಿಗೆ ತೊಡಗಿದರು.” ಈ ಮಾತು ಕೇಳಿ ಸುಕುಮಾರಿಕೆಯೂ ವಿರಕ್ತೆಯಾಗಿ ಅವರಿಂದಲೇ ದೀಕ್ಷೆಗೊಂಡಳು. ಅನ್ಯತಪಸ್ವಿನಿಯರೊಂದಿಗೆ ತಪಸ್ಸು ಮಾಡುತ್ತಿದ್ದಳು. ತಪದಲ್ಲಿ ತೊಡಗಿ ಅವಳ ಶರೀರ ಕ್ಷೀಣಿಸಿತು. ಒಂದು ದಿನ ಅದೇ ಗ್ರಾಮದ ಗಣಿಕೆ ವಸಂತಸೇನೆ ಕಾಮಿಜನವೇಷ್ಟಿತೆಯಾಗಿ ವನವಿಹಾರಕ್ಕೆ ಬಂದಳು. ಕ್ರೀಡೋದ್ಯತೆಯಾದಆ ಗಣಿಕೆಯನ್ನು ಕಂಡು ಆರ್ಯಿಕೆಯಾದ ಸುಕುಮಾರಿಕೆಯೂ ಕ್ಲಿಷ್ಟಪರಿಣಾಮದಿಂದ ಕೂಡಿ ‘ಅನ್ಯಜನ್ಮದಲ್ಲಿ ನನಗೂ ಇಂಥ ಸೌಭಾಗ್ಯವುಂಟಾಗಲಿ’ ಎಂದು ನಿದಾನಮಾಡಿದಳು. ಆಯುರಂತ್ಯದಲ್ಲಿ ಸತ್ತು ಆರಣ ಅಚ್ಯುತ ಕಲ್ಪಗಳಲ್ಲಿಯ ತನ್ನ ಪೂರ್ವಭವದ ಪತಿ ಸೋಮಭೂತಿ ದೇವನಿಗೆ ದೇವಿಯಾದಳು. ಸೋಮದತ್ತಾದಿ ೩ ಜನ ಸೋದರರ ಜೀವರೂ ಸ್ವರ್ಗಚ್ಯುತಗೊಂಡು ಪಾಂಡುರಾಜನಿಗೆ ಕುಂತಿಯಲ್ಲಿ ಯುಧಿಷ್ಠಿರ ಭೀಮ ಅರ್ಜುನರಾದರು. ಧನಶ್ರೀ ಮಿತ್ರಶ್ರೀ ಜೀವರಾದ ದೇವರೂ

ಆದೇ ಪಾಂಡುವಿಗೆ ಮದ್ರಿಯಲ್ಲಿ ನಕುಲ ಸಹದೇವರಾದರು. ಸುಕುಮಾರಿಕಾಜೀವದ ದೇವಿ ಸ್ವರ್ಗಚ್ಯುತೆಯಾಗಿ ಬಂದು ದ್ರುಪದ ರಾಜನಿಗೆ ದೃಢರಥಾ ಎಂಬಾಕೆಯಲ್ಲಿ ದ್ರೌಪದಿಯೆಂಬ ಪುತ್ರಿಯಾದಳು. ಪೂರ್ವಭವ ಸ್ನೇಹದಿಂದ ಈ ಭವದಲ್ಲಿಯೂ ರಾಧಾವೇಧದ ಮೂಲಕ ದ್ರೌಪದಿ ಅರ್ಜುನರು ಒಂದಾದರು. ಯುಧಿಷ್ಠಿರ ಭೀಮ ಅರ್ಜುನರು ಇದೇ ಜನ್ಮದಲ್ಲಿ ಮೋಕ್ಷಕ್ಕೆ ಹೋಗುತ್ತಾರೆ. ನಕುಲ ಸಹದೇವರು ಸರ್ವಾರ್ಥಸಿದ್ಧಿಗೆ ಹೋಗುತ್ತಾರೆ. ಸಮ್ಯಗ್ದರ್ಶನಶುದ್ಧಳಾದ ದ್ರೌಪದಿ ತಪಃಫಲದಿಂದಾಗಿ ಆರಣಾಚ್ಯುತ ಕಲ್ಪಗಳಲ್ಲಿ ದೇವನಾಗುವಳು. ಆಮೇಲೆ ಮನುಷ್ಯಭವ ಪಡೆದು ಮೋಕ್ಷಕ್ಕೆ ಸಲ್ಲುವಳು."

ಹೀಗೆ ಪಾಂಡವರು ಧರ್ಮಶ್ರವಣವನ್ನೂ ಪೂರ್ವಭವ ಕಥನವನ್ನೂ ಕೇಳಿ ವೈರಾಗ್ಯಗೊಂಡು ಶ್ರೀನೇಮಿಯ ಬಳಿ ಸಂಯಮಸ್ವೀಕಾರ ಮಾಡಿದರು. ಕುಂತಿ ದ್ರೌಪದಿ ಸುಭದ್ರೆ ಮುಂತಾದವರು ರಾಜೀಮತಿ ಆರ್ಯಿಕೆಯ ಬಳಿ ತಪಸ್ಸಿಗೆ ನಿಂತರು. ರತ್ನತ್ರಯಗಳು, ವ್ರತಸಮಿತಿಗಳು ಮುಂತಾದವುಗಳಿಂದ ಕೂಡಿ ಆತ್ಮಸ್ವರೂಪವನ್ನು ಧ್ಯಾನಿಸುತ್ತ ಪಾಂಡವಾದಿಗಳು ತಪಸ್ಸು ಮಾಡಿದರು. ಈ ಮುನಿಗಳಲ್ಲಿ ಭೀಮಸೇನ ಮುನಿ ಬಲುಶಕ್ತಿಶಾಲಿ. ಕುಂತಾಗ್ರದ ಭೈಕ್ಷ್ಯನಿಯಮವನ್ನು ಪಾಲಿಸುತ್ತಿದ್ದನು. ಕ್ಷುಧೆಯಿಂದ ಅವನ ಶರೀರ ದುರ್ಬಲವಾಯಿತು. ೬ ತಿಂಗಳಲ್ಲಿ ವೃತ್ತಿಪರಿಸಂಖ್ಯಾತಪವನ್ನು ಮುಗಿಸಿ ಹೃದಯದ ಬಳಲಿಕೆಯನ್ನು ದೂರಮಾಡಿದನು. ಯುಧಿಷ್ಠಿರಾದಿ ಮುನಿಗಳು ಶ್ರದ್ಧೆಯಿಂದ ಉಪವಾಸಭೇದಗಳನ್ನು ಅನುಷ್ಠಿಸುತ್ತಿದ್ದರು. ಹೀಗೆ ಭೀಮಸೇನ ಮುನಿ ಜೈನಾಗಮಸಾಗರರಾದ ಯುಧಿಷ್ಠಿರಾದಿ ಮುನಿಗಳೊಡನೆ ಪೃಥ್ವಿಯಲ್ಲಿ ವಿಹಾರಿಸುತ್ತಿದ್ದನು.

೬೫. ಭಗವನ್ನಿರ್ವಾಣ ವರ್ಣನ

ಆಮೇಲೆ ನೇಮಿನಾಥನು ಉತ್ತರಾಪಥದಿಂದ ಸುರಾಷ್ಟ್ರದೇಶಕ್ಕೆ ಹೋದನು. ಸಮವಸರಣ ವಿಭೂತಿಯಿಂದ ಕೂಡಿ ಹೀಗೆ ದಕ್ಷಿಣದಲ್ಲಿ ವಿಹಾರಿಸುತ್ತಿರಬೇಕಾದರೆ ಅಲ್ಲಿಯ ದೇಶ ಸ್ವರ್ಗಸಮಾನವಾಗಿ ಶೋಭಿಸುತ್ತಿತ್ತು. ಈಗ ಅಂತ್ಯಸಮಯದಲ್ಲಿ ನಿರ್ವಾಣ ವಿಭೂತಿಯನ್ನು ಹೊಂದಲಿದ್ದ ನೇಮಿ ನರಸುರಾಸುರ ಸೇವಿತನಾಗಿ ತನಗೆ ತಾನೆ ಊರ್ಜಯಂತ ಗಿರಿಯನ್ನೇರಿದನು. ಮುನ್ನಿನಂತೆ ಸಮವಸರಣದ ರಚನೆಯಾಯಿತು. ನಡುವೆಯಿದ್ದು ಜಿನೇಂದ್ರನು ಧರ್ಮೋಪದೇಶ ಮಾಡಿದನು. ಕೇವಲಜ್ಞಾನೋತ್ಪತ್ತಿಯ ಅನಂತರ ಮೊದಲ ಬಾರಿಯ ಧರ್ಮೋಪದೇಶವನ್ನು ಸವಿವರವಾಗಿ ನೀಡಿದಂತೆಯೇ ಈಗಲೂ ಕೊನೆಯ ಬಾರಿಯ ಧರ್ಮೋಪದೇಶವನ್ನು ಸವಿಸ್ತರವಾಗಿ ನೀಡಿದನು. ಅಗ್ನಿಗೆ ಉಷ್ಣ, ನೀರಿಗೆ ಶೈತ್ಯ ಹೇಗೆ ಸ್ವಭಾವಸಿದ್ಧ ಗುಣಗಳೋ ಹಾಗೆಯೇ ಆತನ ಧರ್ಮೋಪದೇಶವೂ ಸ್ವಭಾವಸಹಜವಾಗಿತ್ತು. ಅನ್ಯಪ್ರೇರಣೆಯಿಂದ ಹೊರಡುತ್ತಿರಲಿಲ್ಲ. ಆಮೇಲೆ ಅಘಾತಿ ಕರ್ಮಗಳನ್ನು ಕಳೆದುಕೊಳ್ಳಲು ನೇಮಿಯು ೧೦೦ ಮುನಿಗಳೊಂದಿಗೆ ನಿರ್ವಾಣಧಾಮಕ್ಕೆ ಹೋದನು. ಇಂದ್ರಪುರಸ್ಸರರಾದ ಚತುರ್ನಿಕಾಯಾಮರರು ನಿರ್ವಾಣಕಲ್ಯಾಣದ ಪೂಜೆ ನಡಸಿದರು. ದಿವ್ಯಗಂಧಾದಿಯಿಂದ ಪೂಜಿತನಾದ ನೇಮಿತೀರ್ಥಂಕರನ ಮತ್ತು ಇತರ ಮೋಕ್ಷಜೀವರ ಶರೀರಗಳು ಕ್ಷಣಮಾತ್ರದಲ್ಲಿ ಮಿಂಚಿನಂತೆ ಆಕಾಶವನ್ನು ಬೆಳಗುತ್ತ ವಿಲೀನ

ವಾಗಿ ಹೋಯಿತು. ಇಂದ್ರನು ಊರ್ಜಯಂತ ಗಿರಿಯಲ್ಲಿ ವಜ್ರದಿಂದ ಸಿದ್ಧಶಿಲೆಯನ್ನು ನಿರ್ಮಿಸಿದನು. ಅದನ್ನು ಜಿನೇಂದ್ರನ ಲಕ್ಷಣದಿಂದೊಡಗೂಡಿಸಿದನು. ಆಮೇಲೆ ವರದತ್ತಾದಿ ಮುನಿಸಂಘವನ್ನು ವಂದಿಸಿ ಇಂದ್ರಾದಿಗಳೂ ಅರಸರೂ ಸ್ವಸ್ಥಾನಗಳಿಗೆ ಮರಳಿದರು. ಸಮುದ್ರವಿಜಯನ ೯ ಮಂದಿ ಸೋದರರೂ, ದೇವಕಿಯ ೬ ಅವಳಿ ಮಕ್ಕಳೂ ಶಂಬ ಪ್ರದ್ಯುಮ್ನಕುಮಾರ ಮೊದಲಾದ ಮುನಿಗಳೂ ಊರ್ಜಯಂತಗಿರಿಯಿಂದ ಮೋಕ್ಷಕ್ಕೆ ಸಂದರು. ಅದರಿಂದ ಆ ಸಮಯದಿಂದಲೂ ಅದು ವಿಖ್ಯಾತವಾದ ಪವಿತ್ರಕ್ಷೇತ್ರವಾಯಿತು.

ಪಂಚಪಾಂಡವ ಮುನಿಗಳೂ ನೇಮಿನಾಥನಿಗೆ ಮೋಕ್ಷವಾದದ್ದು ತಿಳಿದು ಶತ್ರುಂಜಯ ಪರ್ವತದ ಮೇಲೆ ಪ್ರತಿಮಾಯೋಗದಲ್ಲಿ ನಿಂತರು. ಆಗ ಅಲ್ಲಿ ದುರ್ಯೋಧನನ ವಂಶದ ಕ್ಷುಯವರೋಧನನೆಂಬ ಮನುಷ್ಯನೊಬ್ಬನು ಇರುತ್ತಿದ್ದನು. ಅಲ್ಲಿಗೆ ಪಾಂಡವರು ಬಂದರೆಂಬ ಸುದ್ದಿ ತಿಳಿಯುತ್ತಲೇ ತಾನು ಬಂದು, ವೈರವಶನಾಗಿ ಅವರ ಮೇಲೆ ಘೋರ ಉಪಸರ್ಗವುಂಟುಮಾಡಲು ತೊಡಗಿದನು. ತಪ್ತಲೋಹದ ಮುಕುಟ ಕಟಕ ಕಟಿಸೂತ್ರ ಇವುಗಳನ್ನು ಮಾಡಿಸಿ ಅವನ್ನು ಚೆನ್ನಾಗಿ ಬೆಂಕಿಯಲ್ಲಿ ಕಾಯಿಸಿ ಅವನ್ನು ಅವರ ತಲೆ ಮುಂತಾದೆಡೆಗೆ ತೊಡಿಸಿದನು. ಅವರು ಧೀರರಾದ್ದರಿಂದ ಕರ್ಮೋದಯಚರಿತವರಾದ್ದರಿಂದ ಕರ್ಮಕ್ಷಯದಲ್ಲಿ ಸಮರ್ಥರಿದ್ದರು. ಆದ್ದರಿಂದ ದಾಹೋಪಸರ್ಗವನ್ನು ಹಿಮಶೀತಲವಾಗಿ ತಳೆದರು. ಭೀಮಾರ್ಜುನ ಯುಧಿಷ್ಠಿರ ಈ ಮುನಿಗಳು ಶುಕ್ಲಧ್ಯಾನ ತತ್ಪರರಾಗಿ ಅಷ್ಟಕರ್ಮಕ್ಷಯ ಮಾಡಿಕೊಂಡು ಮೋಕ್ಷಕ್ಕೆ ಸಂದರು. ಆದರೆ ನಕುಲ ಸಹದೇವರು ಹಿರಿಯಣ್ಣನ ದಾಹಸ್ಥಿತಿಯನ್ನು ನೋಡಿ ಸ್ವಲ್ಪ ಆಕುಲ ಚೇತಸರಾದ್ದರಿಂದ ಸರ್ವಾರ್ಥಸಿದ್ಧಿಯಲ್ಲಿ ಉತ್ಪನ್ನರಾದರು. ನಾರದನೂ ದೀಕ್ಷೆಗೊಂಡು ತಪೋಬಲದಿಂದ ಮೋಕ್ಷಕ್ಕೆ ಸಂದನು. ರತ್ನತ್ರಯಾರಾಧಕರಾದ ಎಷ್ಟೋ ಮಂದಿ ಸ್ವರ್ಗಾಪವರ್ಗಗಳನ್ನು ಪಡೆದರು.

ತುಂಗೀಗಿರಿಯ ಶಿಖರಸ್ಥನಾದ ಬಲದೇವನೂ ನಾನಾರೀತಿಯ ತಪಸ್ಸು ಮಾಡಿದನು. ದಿನವೊಂದರಿಂದ ೬ ತಿಂಗಳವರೆಗೆ ಉಪವಾಸಮಾಡಿ ಕಷಾಯಶರೀರಗಳನ್ನು ಶೋಷಿಸಿದನು. ಕಾಂತಾರಭಿಕ್ಷೆಗೆ ಸಂಕಲ್ಪಿಸಿ ವನದಲ್ಲಿ ವಿಹಾರಿಸುತ್ತಿರಲು, ಆತನನ್ನು ಜನ ನೋಡಿದರು. "ಬಲದೇವನು ವನದಲ್ಲಿ ವಿಹಾರಿಸುತ್ತಿದ್ದಾನೆ" ಎಂಬ ಮಾತು ನಗರಗಳಲ್ಲಿ, ಗ್ರಾಮಗಳಲ್ಲಿ ಹರಡಿತು. ಸಮೀಪವರ್ತಿಗಳಾದ ಅರಸರು ಅದನ್ನು ಕೇಳಿ ಕ್ಷುಬ್ಧರಾಗಿ ಅಲ್ಲಿಗೆ ಬಂದರು. ಆಗ ದೇವ ಸಿದ್ಧಾರ್ಥನೂ ಶಂಕೆಗೊಂಡು ನಾನಾ ಶಸ್ತ್ರಸಜ್ಜಿತ ರಾಜಸಮೂಹವನ್ನು ನೋಡಿ ಆ ವನದಲ್ಲಿ ಸಿಂಹಸಮೂಹವನ್ನು ನಿರ್ಮಿಸಿದನು. ಬಂದಂಥ ಅರಸರು ಮುನಿಯ ಪಾದಗಳೆಡೆ ಸಿಂಹಗಳನ್ನು ಕಂಡಾಗ ಆತನ ಸಾಮರ್ಥ್ಯವರಿತು ವಂದಿಸಿ ಶಾಂತರಾದರು. ಆ ಸಮಯದಿಂದ ಬಲದೇವನು ಲೋಕದಲ್ಲಿ ನರಸಿಂಹನೆಂದು ಪ್ರಖ್ಯಾತನಾದನು. ಸಿಂಹಸದೃಶ ವಕ್ಷಃಸ್ಥಲವನ್ನು ಹೊಂದಿ ಸಿಂಹಗಳ ಕೈಂಕರ್ಯವನ್ನು ಪಡೆದಿದ್ದನು. ಹೀಗೆ ೧೦೦ ವರ್ಷಕಾಲ ತಪಸ್ಸುಮಾಡಿ ಬಲದೇವನು ಕೊನೆಗೆ ಸಮಾಧಿ

ಮರಣ ಪಡೆದು ಫಲವಾಗಿ ಬ್ರಹ್ಮಕಲ್ಪದಲ್ಲಿ ಇಂದ್ರಪದವಿ ಪಡೆದನು. ಅಲ್ಲಿ ಪದ್ಮವಿಮಾನದ ಕೋಮಲ ಉಪಪಾದಶಯ್ಯೆಯಲ್ಲಿ ಉತ್ಪನ್ನನಾದನು. ಅಲ್ಲಿ ಷಟ್‌ಪರ್ಯಾಪ್ತಿಪೂರ್ಣನಾದನು. ಯೌವನಸಂಪನ್ನನೂ ವಸ್ತ್ರಾಭರಣ ಭೂಷಿತನೂ ಆದ ಆ ದೇವನು ಸರ್ವತೋಭದ್ರವೆಂಬ ಶಯ್ಯೆಯಲ್ಲಿ ಸುಖನಿದ್ದೆಯಿಂದೆದ್ದವನಂತೆ ಎದ್ದನು. ನಾಲ್ದೆಸೆಯನ್ನೂ ನೋಡುವಾಗ ದೇವದೇವಿಯರು ಅವನನ್ನು ಅಭಿನಂದಿಸಿದರು. ದಿವ್ಯಶರೀರಿಯಾದ ಆತನು ಹರ್ಷಪೂರ್ಣನಾಗಿ "ಇದಾವ ದೇಶ ? ಈ ಪ್ರಸನ್ನರಾದ ಜನ ಯಾರು? ನಾನಾರು ? ಇಲ್ಲೆಲ್ಲಿ ಹುಟ್ಟಿದ್ದೇನೆ ? ಯಾವ ಧರ್ಮವನ್ನು ಸಂಚಯಿಸಿದ್ದೇನೆ ?"—ಎಂದು ವಿಚಾರಮಾಡತೊಡಗಿದನು. ಆಮೇಲೆ ಮುಖ್ಯದೇವರು ಆತನಿಗೆ ಎಲ್ಲಾ ಸಂಗತಿಯನ್ನೂ ತಿಳಿಸಿದರು. ಇದರಿಂದ ಆತನಿಗೆ ಭವಪ್ರತ್ಯಯ ಅವಧಿಜ್ಞಾನವುಂಟಾಗಿ ಪೂರ್ವಾಪರ ವೃತ್ತಾಂತವೆಲ್ಲಾ ಬೋಧೆಯಾಯಿತು. ಆಮೇಲೆ ಪೂರ್ವಭವದ ಎಲ್ಲ ಬಂಧುಗಳನ್ನೂ ಅರಿತ ಮೇಲೆ, ಭ್ರಾತೃಹಿತಾಕಾಂಕ್ಷಿಯಾದ ಆತನು ಅವಧಿಜ್ಞಾನದಿಂದ ಕೃಷ್ಣನ ಸಂಗತಿ ತಿಳಿದು ಆತನಿದ್ದ ವಾಲುಕಾಪ್ರಭೆಗೆ ಹೋದನು. ತನ್ನ ತಮ್ಮ ಕೃಷ್ಣನು ದುಃಖಿಯಾಗಿರುವುದು ಕಂಡು ತಾನೂ ದುಃಖಿಯಾದನು. ತೇಜಸ್ವಿಯಾದ ಆತನ ಸನ್ನಿಧಿಯಿಂದ ಅಲ್ಲಿಯ ಅಶುಭವೆಲ್ಲಾ ಶುಭವಾಗಿ ಪರಿವರ್ತಿಸಿತು. "ಕೃಷ್ಣ, ಬಾ ಬಾ, ನಿನ್ನ ಅಣ್ಣನಾಗಿದ್ದ ಬಲದೇವನೇ ನಾನು. ಬ್ರಹ್ಮಲೋಕದ ಒಡೆಯನಾಗಿ ಈಗ ನಿನ್ನಲ್ಲಿಗೆ ಬಂದಿದ್ದೇನೆ.''—ಇಷ್ಟು ಹೇಳಿ ಆ ದೇವನು ಕೃಷ್ಣನ ಜೀವವನ್ನೆತ್ತಿಕೊಂಡು ಸ್ವರ್ಗಲೋಕಕ್ಕೆ ಒಯ್ಯುತ್ತಿದ್ದ ಹಾಗೆಯೇ ಆತನ ಶರೀರ ಬೆಣ್ಣೆಯಂತೆ ಕರಗಿಹೋಯಿತು. ಆಮೇಲೆ ಕೃಷ್ಣನು ಹೀಗೆಂದನು : "ದೇವಾ, ಅಣ್ಣ, ವ್ಯರ್ಥವಾದ ಈ ವರ್ತನೆಗಳಿಂದೇನು ? ಜೀವರು ತಂತಮ್ಮ ಗೆಯ್ಮೆಗಳಿಗೆ ತಕ್ಕ ಫಲ ಅನುಭವಿಸುವರೆಂಬುದು ನಿನಗೆ ತಿಳಿಯದ್ದೇ ? ಬದುಕಿನಲ್ಲಿ ಕರ್ಮಕ್ಕೆ ತಕ್ಕ ಫಲಾನುಭವ ಅಲ್ಲವೆ ? ಆದ್ದರಿಂದ ನೀನು ಸ್ವರ್ಗಕ್ಕೆ ಹಿಂದಿರುಗು. ನಿನ್ನ ಪುಣ್ಯಫಲವನ್ನು ಭೋಗಿಸು. ನಾನೂ ಆಯುರಂತದಲ್ಲಿ ಮೋಕ್ಷಹೇತುವಾದ ಮನುಷ್ಯಜನ್ಮ ಪಡೆಯುತ್ತೇನೆ. ನಾವಿಬ್ಬರೂ ಆ ಮನುಷ್ಯಜನ್ಮದಲ್ಲಿ ತಪಸ್ಸು ಮಾಡೋಣ ; ಕರ್ಮಕ್ಷಯ ಮಾಡಿಕೊಂಡು ಮೋಕ್ಷ ಪಡೆಯೋಣ. ಆದರೆ ಒಂದು ಕೆಲಸ ನೀನು ತಪ್ಪದೆ ಮಾಡುವುದಾಗಲಿ. ಅದೇನೆಂದರೆ ಭರತಕ್ಷೇತ್ರದಲ್ಲಿ ಜನರು ನಮ್ಮಿಬ್ಬರನ್ನೂ ಪುತ್ರಾದಿಗಳ ಸಹಿತವಾಗಿ ವೈಭವಯುಕ್ತರಾಗಿ ಬಂದು ನೋಡಲಿ; ನೋಡಿ ಅನ್ಯರ ಚಿತ್ತವು ಅಚ್ಚರಿಗೊಳ್ಳಲಿ. ನನ್ನ ಕೀರ್ತಿವೃದ್ಧಿಗಾಗಿ ನೀನು ಶಂಖಚಕ್ರ ಗದಾಧಾರಿಯಾಗಿರುವ ನನ್ನ ಪ್ರತಿಮೆಗಳನ್ನೂ ಮಂದಿರಗಳನ್ನೂ ಮಾಡಿರಿಸಿ ಸಮಸ್ತ ಭರತಕ್ಷೇತ್ರವನ್ನೂ ಅದರಿಂದ ವ್ಯಾಪ್ತಗೊಳಿಸು.''

ಬಲದೇವ ಜೀವನಾದ ದೇವೇಂದ್ರನು ಕೃಷ್ಣನ ಆ ಮಾತಿಗೊಪ್ಪಿ, ಆವನಿಗೆ ಸಮ್ಯಕ್ತ್ವ ಪಾಲಿಸುವಂತೆ ಉಪದೇಶಿಸಿ ಭರತಕ್ಷೇತ್ರಕ್ಕೆ ಬಂದನು. ಸ್ನೇಹಾರ್ದ್ರನಾಗಿ ಆ ದೇವನು ಕೃಷ್ಣನು ಬಯಸಿದಂತೆ ಎಲ್ಲವನ್ನೂ ಮಾಡಿದನು. ದಿವ್ಯವಿಮಾನಸ್ಥಿತರಾದ ಕೃಷ್ಣಬಲದೇವರನ್ನು ಎಲ್ಲರಿಗೂ ದರ್ಶನಮಾಡಿಸಿದನು. ನಗರಗಳಲ್ಲಿಯೂ ಗ್ರಾಮ

ಗಳಲ್ಲಿಯೂ ಕೃಷ್ಣಮಂದಿರಗಳನ್ನು ಸೃಜಿಸಿ ಲೋಕವು ಕೃಷ್ಣವಿಷಯಕವಾದ ಮೋಹದಿಂದ ತನ್ಮಯವಾಗುವಂತೆ ಮಾಡಿದನು. ಆಮೇಲೆ ಬ್ರಹ್ಮಕಲ್ಪಕ್ಕೆ ಮರಳಿ ಜಿನಪೂಜೆ ಮಾಡಿ ಸುಖಭೋಗದಲ್ಲಿದ್ದನು.

ಗೌತಮಸ್ವಾಮಿ ಹೇಳುತ್ತಾನೆ : "ಸ್ನೇಹಾಧಿಕ್ಯದಿಂದ ಆ ಜೀವನು ಉಚ್ಚಸ್ಥಾನದಲ್ಲಿದ್ದೂ ಭಯಪೂರ್ಣ ಪಾತಾಲವನ್ನು ಹೊಕ್ಕನು. ಸ್ನೇಹಸಂಬಂಧವಾದ ಮೋಹಕ್ಕೆ ಧಿಕ್ಕಾರವಿರಲಿ ! ನೇಮಿಜಿನೇಂದ್ರನ ಆ ಪ್ರಚಲಿತತೀರ್ಥದಲ್ಲಿ ವರದತ್ತಮುನಿಗೆ ಕೇವಲಜ್ಞಾನವುಂಟಾಯಿತು. ಹರಿವಂಶಸಂತತಿಯಲ್ಲಿ ಬಂದ ಜರತ್ಕುಮಾರನು ಪರಂಪರಾಗತ ರಾಜ್ಯವನ್ನು ಪಾಲಿಸುತ್ತಿದ್ದನು."

೬೬. ಗುರುಪಾದಕಮಲ ವರ್ಣನ

"ಜರತ್ಕುಮಾರನು ಪೃಥ್ವೀಪಾಲನ ಮಾಡುತ್ತಿದ್ದಾಗ ಪ್ರಜೆಗಳು ಆತನನ್ನು ಆದರಿಸುತ್ತಿದ್ದರು. ಕಲಿಂಗರಾಜಪುತ್ರಿ ಅವನಿಗೆ ಪಟ್ಟಮಹಿಷಿಯಾದಳು. ಇವರಿಗೆ ಮಗ ವಸುಧ್ವಜ. ಹರಿವಂಶಶಿರೋಮಣಿಯಾದ ಆ ಪುತ್ರನಿಗೆ ರಾಜ್ಯವೊಪ್ಪಿಸಿ ಜರತ್ಕುಮಾರನು ತಪಸ್ಸಿಗೆ ಹೋದನು. ವಸುಧ್ವಜನಿಗೆ ಸುವಸು ಎಂಬವನು ಪುತ್ರ. ಇವನಿಗೆ ಕಲಿಂಗದೇಶ ರಕ್ಷಣಾಪಟುವಾದ ಭೀಮವರ್ಮನೆಂಬ ಮಗನಾದನು. ಅವನ ವಂಶದಲ್ಲಿ ಅನೇಕರು ಅರಸರಾದರು. ಅವರಲ್ಲಿ ಒಮ್ಮೆ ಕಪಿಷ್ಟನೆಂಬ ಅರಸನಾದನು. ಇವನಿಗೆ ಅಜಾತಶತ್ರು, ಅಜಾತಶತ್ರುವಿಗೆ ಶತ್ರುಸೇನ, ಶತ್ರುಸೇನನಿಗೆ ಜಿತಾರಿ, ಜಿತಾರಿಗೆ ಜಿತಶತ್ರು—ಹೀಗೆ ಪುತ್ರ ಪರಂಪರೆ. ಹೇ ಶ್ರೇಣಿಕನೆ, ನಿನಗೆ ಜಿತಶತ್ರು ತಿಳಿಯದೆ? ಭಗವಾನ್ ಮಹಾವೀರನ ತಂದೆ ಸಿದ್ಧಾರ್ಥರಾಜನ ತಂಗಿಯನ್ನು ಈತನಿಗೆ ಕೊಟ್ಟು ಮದುವೆಯಾಗಿತ್ತು. ಮಹಾವೀರನ ಜನ್ಮೋತ್ಸವವಾಗುತ್ತಿದ್ದಾಗ ಈತನು ಕುಂಡಪುರಕ್ಕೆ ಬಂದಿದ್ದನು. ಕುಂಡಪುರದ ಅರಸು ಸಿದ್ಧಾರ್ಥನು ಈ ಮಿತ್ರನನ್ನು ಸತ್ಕರಿಸಿದನು. ಈ ಸಿದ್ಧಾರ್ಥನಿಗೆ ಯಶೋದಯಾ ರಾಣಿಯಿಂದ ಜನಿಸಿದ ಯಶೋದಾ ಎಂಬ ಮಗಳಿದ್ದಳು.ಅನೇಕ ಕನ್ಯೆಯರೊಡಗೂಡಿ ಈಕೆಯ ವಿವಾಹಮಂಗಲವನ್ನು ಮಹಾವೀರನೊಡನೆ ನಡೆಯುವುದನ್ನು ನೋಡಬೇಕೆಂಬ ಉತ್ಕಟೇಚ್ಛೆಯಿಂದ ಈ ಜಿತಶತ್ರು ಇರುತ್ತಿರಲು, ಮಹಾವೀರನು ತಪಸ್ಸಿಗೆ ಹೊರಟು ಹೋದನು. ಕೇವಲಜ್ಞಾನ ಪಡೆದು ಧರ್ಮವಿಹಾರ ಕೈಗೊಂಡನು. ಆಗ ಈ ಜಿತಶತ್ರುವೂ ತಪಸ್ಸನ್ನು ಪರಿಗ್ರಹಿಸಿದನು. ಇಂದು ಆ ಜಿತಶತ್ರುಮುನಿ ತಪಃಫಲದಿಂದ ಕೈವಲ್ಯಜ್ಞಾನ ಪಡೆದಿದ್ದಾನೆ. ಆತನ ನರಜನ್ಮ ಸಫಲವಾಯಿತು. ಹೇ ಶ್ರೇಣಿಕನೆ, ನಾನು ನಿನಗೆ ಈ ಲೋಕಪ್ರಸಿದ್ಧವಾದ, ತ್ರಿಷಷ್ಟಿಶಲಾಕಾಪುರುಷರ ಪುರಾಣಪದ್ಧತಿಯೊಡನೆ ಸಂಬಂಧಿಸಿದ ಹರಿವಂಶಕಥೆಯನ್ನು ಸಂಕ್ಷೇಪದಿಂದ ಹೇಳಿದ್ದೇನೆ. ಅದು ನಿನಗೆ ಕಲ್ಯಾಣಪ್ರದವಾಗಲಿ."

ಹೀಗೆ ಶ್ರೇಣಿಕನು ಅನೇಕ ರಾಜರೊಂದಿಗೆ ಕೂಡಿಕೊಂಡು ಗೌತಮಗಣಧರರಿಂದ ಈ ಪವಿತ್ರಪುರಾಣದ ವರ್ಣನೆಯನ್ನು ಕೇಳಿ ನಲಿದು ವಂದಿಸಿ ತನ್ನ ನಗರಕ್ಕೆ ಹಿಂದಿರುಗಿದನು.

ಚತುರ್ನಿಕಾಯಾಮರರೂ ವಿದ್ಯಾಧರರೂ ಜಿನೇಂದ್ರನಿಗೆ ಬಲವಂದು ವಂದಿಸಿ ಸ್ವಸ್ಥಾನಗಳಿಗೆ ಹೋದರು. ಮಹಾಮುನಿ ಜಿತಶತ್ರುಕೇವಲಿಯೂ ಪೃಥ್ವೀವಿಹಾರ ಮಾಡುತ್ತ ಕೊನೆಗೆ ಮೋಕ್ಷಕ್ಕೆ ಸಂದನು. ಮಹಾವೀರನೂ ಭವ್ಯರಿಗೆ ಧರ್ಮೋಪದೇಶ ನೀಡುತ್ತ ಪಾವಾನಗರಿಯನ್ನು ತಲುಪಿದನು. ಅಲ್ಲಿಯ ಮನೋಹರೋದ್ಯಾನವೆಂಬ ವನದಲ್ಲಿ ವಿರಾಜಮಾನನಾದನು. ಚತುರ್ಥಕಾಲದಲ್ಲಿ ಸ್ವಾತಿನಕ್ಷತ್ರದ ಕಾರ್ತಿಕ ಅಮಾವಾಸ್ಯೆಯ ದಿನ ಪ್ರಾತಃಕಾಲದಲ್ಲಿ ಯೋಗನಿರೋಧಮಾಡಿ ಅಷ್ಟವಿಧ ಕರ್ಮಗಳನ್ನು ಕ್ಷಯಿಸಿಕೊಂಡು ಮೋಕ್ಷಕ್ಕೆ ಸಂದನು. ಚತುರ್ನಿಕಾಯಾಮರರು ಮಹಾವೀರನ ನಿರ್ವಾಣ ಮಹೋತ್ಸವವನ್ನು ಜರುಗಿಸಿದರು. ಸುರಾಸುರರು ಬೆಳಗಿಸಿದ ದೀಪಪಂಕ್ತಿಗಳಿಂದ ಪಾವಾನಗರದ ಆಗಸ ಉಜ್ವಲಗೊಂಡಿತು. ಶ್ರೇಣಿಕನೇ ಮೊದಲಾದ ಅರಸರು ಪ್ರಜೆಗಳೊಡಗೂಡಿ ಮಹಾವೀರನ ನಿರ್ವಾಣಕಲ್ಯಾಣದ ಪೂಜೆ ನಡಸಿದರು. ಇಂದ್ರಾದಿಗಳು ಸ್ವಸ್ಥಾನಗಳಿಗೆ ಹೋದರು. ಅಂದಿನಿಂದ ಮಹಾವೀರನ ನಿರ್ವಾಣಕಲ್ಯಾಣದಲ್ಲಿ ಭಕ್ತಿಯುಳ್ಳವರು ಭರತಕ್ಷೇತ್ರದಲ್ಲಿ ಪ್ರತಿವರ್ಷವೂ ದೀಪಮಾಲಿಕೆಯನ್ನು ಬೆಳಗಿ ಮಹಾವೀರನ ಪೂಜೆ ಮಾಡತೊಡಗಿದರು. ಮಹಾವೀರನ ನಿರ್ವಾಣಾನಂತರ ಕ್ರಮವಾಗಿ ಗೌತಮ, ಸುಧರ್ಮ, ಜಂಬೂಸ್ವಾಮಿ ಈ ಮೂವರು ಕೇವಲಿಗಳಾದರು. ಅಮೇಲೆ ಸಮಸ್ತ ಪೂರ್ವಧರರಾದ ಐವರು ಶ್ರುತಕೇವಲಿಗಳಾದರು. ಆಮೇಲೆ ಹೀಗೆಯೇ ದಶಪೂರ್ವಧರರಾದ ೧೧ ಮುನಿಗಳು, ಏಕಾದಶಾಂಗಧರರಾದ ೫ ಮುನಿಗಳು ಆದರು. ಆಮೇಲೆ ಸುಭದ್ರಗುರು, ಜಯಭದ್ರ, ಯಶೋಬಾಹು, ಲೋಹಾರ್ಯಗುರು—ಈ ನಾಲ್ವರು ಆಚಾರಾಂಗಧರರಾದ ಮುನಿಗಳಾದರು. ಆಮೇಲೆ ವಿನಯಂಧರ, ಗುಪ್ತಶ್ರುತಿ, ಗುಪ್ತಋಷಿ, ಶಿವಗುಪ್ತ, ಅರ್ಹದ್ಬಲಿ, ಮಂದರಾರ್ಯ, ಮಿತ್ರವೀರವಿ, ಬಲದೇವ, ಮಿತ್ರಕ, ಸಿಂಹಬಲ, ವೀರವಿತ್, ಪದ್ಮಸೇನ, ವ್ಯಾಘ್ರಹಸ್ತ, ನಾಗಹಸ್ತಿ, ಜಿತದಂಡ, ನಂದಿಷೇಣ, ದೀಪಸೇನ,ಶ್ರೀಧರಸೇನ, ಸುಧರ್ಮಸೇನ, ಸಿಂಹಸೇನ, ಸುನಂದಿಷೇಣ, ಈಶ್ವರಸೇನ,ಸುನಂದಿಷೇಣ, ಅಭಯಸೇನ, ಸಿದ್ಧಸೇನ, ಅಭಯಸೇನ, ಭೀಮಸೇನ, ಜಿನಸೇನ, ಶಾಂತಿಸೇನ ಇವರು ಆಚಾರ್ಯರಾದರು. ಆಮೇಲೆ ಷಟ್ಖಂಡಾಗಮ ಜ್ಞಾತರಾಗಿದ್ದ ಜಯಸೇನರೆಂಬ ಗುರುಗಳಾದರು. ಇವರ ಶಿಷ್ಯರು ಅಮಿತಸೇನಗುರು. ಇವರು ಖ್ಯಾತ ವೈಯಾಕರಣರು, ಸಿದ್ಧಾಂತ ಪಾರಂಗತರು. ಇವರು ಪುನ್ನಾಟಗಣದ ಅಗ್ರಗಣ್ಯ ಆಚಾರ್ಯರಾಗಿದ್ದರು. ಇವರ ಅಗ್ರಜರು ಕೀರ್ತಿಷೇಣರು. ಇವರ ಪ್ರಥಮಶಿಷ್ಯನೆಂದರೆ ಜಿನಸೇನನಾದ ನಾನು. ಅರಿಷ್ಟನೇಮಿ ಜಿನೇಂದ್ರನ ಭಕ್ತಿಯಿಂದ ಕೂಡಿದವನಾಗಿ ಜಿನಸೇನಸೂರಿಯಾದ ನಾನು ನನ್ನ ಸಾಮರ್ಥ್ಯಸಾರ, ಅಲ್ಪಬುದ್ಧಿಯವನಾಗಿಯೂ ಈ ಹರಿವಂಶಪುರಾಣವನ್ನು ರಚಿಸಿದ್ದೇನೆ. ಈ ಗ್ರಂಥದಲ್ಲಿ ನನ್ನಿಂದ ಎಲ್ಲಿಯಾದರೂ ಪ್ರಮಾದವಶದಿಂದ ಪೂರ್ವಾಪರವಿರುದ್ಧವಾದ ರಚನೆ ನಡೆದಿದ್ದರೆ ಪುರಾಣಜ್ಞರಾದ ವಿದ್ವಾಂಸರು ಪ್ರಮಾದರಹಿತರಾಗಿ ಅದನ್ನು ಸರಿಪಡಿಸಿಕೊಳ್ಳಲಿ. ಹರಿವಂಶರೂಪಿ ಪರ್ವತವೆಲ್ಲಿ, ಅಲ್ಪಶಕ್ತಿಯ ನಾನೆಲ್ಲಿ ? ಜಿನವಂಶದ ಸ್ತುತಿಯಿಂದ ನನಗೆ ಪುಣ್ಯೋದಯವನ್ನು ಬಯಸಿದ್ದೇನೆ. ನಾನು ಈ ಗ್ರಂಥರಚನೆಯನ್ನು ಕಾವ್ಯ

ರಚನೆಯ ವ್ಯಸನಜನ್ಯಸಂಸ್ಕಾರದಿಂದ, ಪ್ರಬಲವಾದ ಕೀರ್ತಿಕಾಂಕ್ಷೆಯಿಂದ, ಕಾವ್ಯಾಭಿಮಾನದಿಂದ, ಇಲ್ಲವೆ ಅನ್ಯರನ್ನು ನೋಡಿಕೊಂಡು ಮಾಡಲಿಲ್ಲ; ಜಿನೇಂದ್ರಭಕ್ತಿಯಿಂದಾಗಿ ಮಾಡಿದ್ದೇನೆ. ಇದರಲ್ಲಿ ೨೪ ತೀರ್ಥಂಕರಾದಿಯಾಗಿ ಪುರಾಣಗಾಮೀ ತ್ರಿಷಷ್ಟಿಶಲಾಕಾಪುರುಷರ ವರ್ಣನೆ ಮಾಡಲ್ಪಟ್ಟಿದೆ. ಇದಲ್ಲದೆ ಈ ಶ್ರೇಷ್ಠಪುರಾಣದಲ್ಲಿ ನಡುನಡುವೆ ಚತುರ್ವರ್ಗಕಾಂಕ್ಷಿಗಳಾದ ನೂರಾರು ಭೂಚರ ಖೇಚರರಾಜರನ್ನೂ ವರ್ಣಿಸಿದ್ದೇನೆ. ಮನುಷ್ಯಲೋಕದಲ್ಲಿ ಹುಟ್ಟುವ ಭವ್ಯಜೀವರು ಜಿನಶಾಸನದಲ್ಲಿ ಸ್ಥಿತರಾಗಲೆಂಬುದೇ ನನ್ನ ಆಶಯ. ನೇಮಿಜಿನೇಂದ್ರನ ಈ ಚರಿತೆಯನ್ನು ವಾಚಿಸುವ ಸಜ್ಜನರು ವಾಚಿಸಲಿ ; ಸಭೆಯಲ್ಲಿ ಶ್ರೋತೃಗಳು ಕೇಳಿ ನಲಿಯಲಿ. ನೇಮಿಜಿನನ ನಾಮಗ್ರಹಣಮಾತ್ರದಿಂದ ಗ್ರಹಪಿಶಾಚಾದಿಗಳ ಪೀಡೆ ದೂರವಾಗುತ್ತದೆ. ಅಂದ ಮೇಲೆ ಸಮಗ್ರಚರಿತೆಯನ್ನು ಓದಿದ್ದೇ ಆದರೆ ಅದರ ಫಲವನ್ನು ಇನ್ನು ಹೇಳುವುದೇನಿದೆ ? ವಿದ್ವಜ್ಜನರು ಅನ್ಯರಿಗೆ ಉಪಕಾರವಾಗಲೆಂದೂ ತಮಗೆ ಮೋಕ್ಷವಾಗಲೆಂದೂ ಇದನ್ನು ವ್ಯಾಖ್ಯಾನಿಸಲಿ. ಜಿನೇಂದ್ರ ಭಗವಾನನ ವರ್ಣನೆಮಾಡುವ ಈ ಶಾಸ್ತ್ರ ಉಪಸರ್ಗ ಬಂದಾಗ ರಕ್ಷಿಸಬಲ್ಲುದು, ಶಾಂತಿಪ್ರದವಾದುದು. ಯಾವ ಭವ್ಯಜೀವರು ಇಲ್ಲಿ ಭಕ್ತಿಯಿಂದ ಹರಿವಂಶಪುರಾಣವನ್ನು ಓದುತ್ತಾರೋ ಅವರಿಗೆ ಅಲ್ಪಪ್ರಯತ್ನದಿಂದಲೇ ಇಷ್ಟಾರ್ಥಸಿದ್ಧಿಯೂ ಪುರುಷಾರ್ಥಲಾಭವೂ ಆಗುವುದು. ನಾನು ವಿವರಿಸುವುದೇನಿದೆ ? ವಿಜ್ಞಪುರುಷರು ತಮಗೆ ತಾವೇ ಈ ಪುರಾಣವನ್ನು ಲೋಕದಲ್ಲಿ ವಿಸ್ತರಿಸುತ್ತಾರೆ. ಜಿನೇಂದ್ರಭಗವಾನನಿಗೆ ಜಯವಾಗಲಿ ! ವಾದಿಗಳಿಂದ ಅಜೇಯವಾದ ಜಿನಧರ್ಮದ ಪರಂಪರೆಗೆ ಯಾವಾಗಲೂ ಜಯವಾಗಲಿ !

೭೦೫ನೆಯ ಶಕ ಸಂವತ್ಸರದಲ್ಲಿ, ಉತ್ತರದಲ್ಲಿ ಇಂದ್ರಾಯುಧ, ದಕ್ಷಿಣದಲ್ಲಿ ಕೃಷ್ಣರಾಜನ ಪುತ್ರ ಶ್ರೀವಲ್ಲಭ, ಪೂರ್ವದಲ್ಲಿ ಶ್ರೀಮಾನ್ ಅವಂತಿರಾಜ, ಪಶ್ಚಿಮದಲ್ಲಿ ಸೌರಾಷ್ಟ್ರದ ವೀರ ಜಯವರಾಹ ಇವರು ಪಾಲಿಸುತ್ತಿದ್ದರು. ಶ್ರೀವರ್ಧಮಾನಪುರದಲ್ಲಿ ನನ್ನರಾಜನ ಮೂಲಕ ನಿರ್ಮಿತವಾದ ಶ್ರೀಪಾರ್ಶ್ವನಾಥನ ಮಂದಿರದಲ್ಲಿ ಮೊದಲು ಹರಿವಂಶಪುರಾಣದ ರಚನೆ ಆರಂಭವಾಯಿತು. ಆದರೆ ಅಲ್ಲಿ ಇದರ ರಚನೆ ಪೂರ್ತಿಯಾಗುವುದು ಸಾಧ್ಯವಾಗಲಿಲ್ಲ. ಪರ್ಯಾಪ್ತಭಾಗವುಳಿಯಿತು. ಅದನ್ನು ಅನಂತರ ದೋಸ್ತಟಿಕಾನಗರಿಯ ಶಾಂತಿನಾಥಮಂದಿರದಲ್ಲಿ ಪೂರ್ತಿಮಾಡಲಾಯಿತು. ಪುನ್ನಾಟಸಂಘದ ಜಿನಸೇನ ಕವಿಯು ರತ್ನತ್ರಯಲಾಭಾರ್ಥವಾಗಿ ರಚಿಸಿದ ಹರಿವಂಶಪುರಾಣರೂಪದ ಶ್ರೀಪರ್ವತವನ್ನು ಚೆನ್ನಾಗಿ ಅವಲೋಕಿಸಿದನು. ಆ ಶ್ರೀಪರ್ವತವು ಚಿರಕಾಲ ಸ್ಥಿರವಾಗಿರಲಿ!